ಮಗಳ ನೆನಪಿನಾಳದಲ್ಲಿ

R.C.



ಶ್ರೀಮತಿ ಶಾರದಶಂಕರ್

ಮಗಳ ನೆನಪಿನಾಳದಲ್ಲಿ

R.C.

ಶ್ರೀಮತಿ ಶಾರದಶಂಕರ್

ಆಟದ ಬುಕ್ ಹೌಸ್
816, 5ನೇ ಮುಖ್ಯರಸ್ತೆ, 2ನೇ ಹಂತ,
ಪಶ್ಚಿಮ ಕಾರ್ಡ್ ರಸ್ತೆ
ಬೆಂಗಳೂರು – 560 086

ಮಗಳ ನೆನಪಿನಾಳದಲ್ಲಿ R.C. / *I*

MAGALA NENAPINAALADALLI R.C.
Freedom Fighter, First Dalit Cabinet Minister of Mysore State
RAMAHANUMAIAH CHENNIGARAMAIAH Biography

Written by : **Shrimathi SharadaShankar**
No. 816, 5th Main,
2nd Stage, West Of Chord Road
Bengaluru - 560 086
Ph: 080 - 2349 2377

Published by : **Atada Book House (ABH)**
No. 816, 5th Main,
2nd Stage, West Of Chord Road
Bengaluru - 560 086
Ph: 080 - 2349 2377

First Print : June 2011

Price Rs : 125 /

Pages : 112

Paper Used : 80 GSM White

Book Size : 1/8

DTP & Design : Shree Lakshmi Enterprises
Rajajinagar, Bengaluru - 560010

Printed By : J K Printers
Rajajinagar,
Bengaluru - 560010

ಮುನ್ನುಡಿ

2011ರ ಜೂನ್ 4 ರಂದು ನಮ್ಮ ತಂದೆ R.C. ಅಂದರೆ, R.Chennigaramaiahನವರು ಬದುಕಿದ್ದಿದ್ದರೆ ಅವರಿಗೆ ನೂರು ವರ್ಷಗಳು ತುಂಬುತ್ತಿತ್ತು. ಅವರ ಈ ಶತಮಾನೋತ್ಸವದ ಸಂದರ್ಭದಲ್ಲಿ, 'ಶ್ರೀ ಆರ್. ಚೆನ್ನಿಗರಾಮಯ್ಯ ಜನ್ಮ ಶತಮಾನೋತ್ಸವ ಸಮಿತಿ' ಯ ಸಂಚಾಲಕರ ಅನುಮತಿಯನ್ನು ಪಡೆದು, 'ನಡೆದಾಡುವ ದೇವಮಾನವ' ಎಂದೇ ಪ್ರಖ್ಯಾತಿಯಾಗಿರುವ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಗುರುಗಳಾದ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ತಮ್ಮ 104ನೇ ವಯಸ್ಸಿನಲ್ಲಿ R.C. ಅವರನ್ನು ನೆನಪು ಮಾಡಿಕೊಂಡು ಅವರ ಶತಮಾನೋತ್ಸವಕ್ಕೆ ಕಳುಹಿಸಿದಂತಹ ಸಂದೇಶ ಪತ್ರವನ್ನು ಯಥಾವತ್ತಾಗಿ ಮುಂಬರುವ ಪುಟದಲ್ಲಿ ಪ್ರಕಟಿಸಿರುತ್ತೇನೆ. ಅವರು R.C. ರವರ ವ್ಯಕ್ತಿತ್ವವನ್ನು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡು ಬರೆದಿರುತ್ತಾರೆ ಎಂದರೆ ಇದನ್ನು ಓದಿದ ಮೇಲೆ ತಮಗೇ ಅರ್ಥವಾಗುತ್ತದೆ ಹಾಗೂ ಅವರ ಮಗಳಾದ ನನಗೆ ಇದು ಹೆಮ್ಮೆ ತರುವಂತಹ ವಿಚಾರವೂ ಹೌದು.

ನನಗೀಗ 68 ವರ್ಷಗಳು. ನಾನು ಚಿಕ್ಕವಳಿದ್ದಾಗ ನನ್ನ ತಂದೆಯವರು ಹೇಳಿದ ಮಾತುಗಳು, ಬುದ್ಧಿವಾದಗಳು ಅವರ ಜೀವನದುದ್ದಕ್ಕೂ ನಡೆದ ಸತ್ಯ ಸಂಗತಿಗಳು ಇಂದಿಗೂ ನನ್ನ ನೆನಪಿನ ಆಳದಲ್ಲಿ ಅಚ್ಚ ಹಸಿರಾಗಿ ಉಳಿದಿವೆ. ಅವರ ಈ ಸಾರ್ಥಕತೆಯ ಬದುಕು ಇಂದಿನ ಕಾಲಕ್ಕೂ ಅನ್ವಯಿಸುವಂತಿದೆ. ಈ ನೆನಪುಗಳು ನನ್ನ ನೆನಪಿನ ಆಳದಲ್ಲಿ ರಾರಾಜಿಸುತ್ತಿರುವುದೇ ನನಗೆ ಈ ಪುಸ್ತಕ ಬರೆಯಲು ತಂದಂತಹ

ಸ್ಫೂರ್ತಿ. ಇದರ ಪರಿಣಾಮವೇ ಈಗ ನಿಮ್ಮ ಕೈಯಲ್ಲಿ ಇರುವ ಪುಸ್ತಕ **'ಮಗಳ ನೆನಪಿನಾಳದಲ್ಲಿ R.C.'**

"ಬಡವರು, ಬಲ್ಲಿದರೆನ್ನುವ ಬೇಧಭಾವ ಬೇಡ, ಹಳ್ಳಿಯವರೇ ಆಗಲಿ, ಪೇಟೆಯವರೇ ಆಗಲಿ ಸಮನಾದ ದೃಷ್ಟಿಯಿಂದ ನೋಡಿ, ಪ್ರತಿಯೊಬ್ಬರಿಗೂ ಗೌರವ ಕೊಡಲು ಕಲಿಯಿರಿ, ಮಾತನಾಡುವಾಗ ನಯ, ವಿನಯವಿರಲಿ, ನಾವು ಆಡುವ ಮಾತು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತದೆ, ಒರಟಾಗಿ ಮಾತನಾಡುವುದು, ಏಕವಚನದಲ್ಲಿ ಮಾತನಾಡುವುದು ಮಾಡಬಾರದು, ಎಲ್ಲರನ್ನೂ ಬನ್ನಿ, ಹೋಗಿ ಎಂದು ಗೌರವದಿಂದ ಮಾತನಾಡಿಸಬೇಕು" ಎಂದು ಹೇಳುತ್ತಿದ್ದರು ಹಾಗೂ R.C. ರವರೂ ಸಹ ಅದೇ ರೀತಿ ನಡೆದುಕೊಳ್ಳುತ್ತಿದ್ದರು. R.C.ರವರಂತಹ ಅಪರೂಪದ ವ್ಯಕ್ತಿತ್ವವುಳ್ಳ ನಿಷ್ಟಾವಂತ ರಾಜಕಾರಣಿ ನಡೆದು ಬಂದ ದಾರಿ ಮುಂದಿನ ಪೀಳಿಗೆಗೆ ದಾರಿದೀಪವಾಗಲೆಂದು ಹಾಗೂ ಇಂತಹ ಮಹಾನ್ ಚೇತನಗಳು ಈ ಸಮಾಜದಲ್ಲಿ ಮತ್ತೆ ಮತ್ತೆ ಜನಿಸಲೆಂದು ಆಶಿಸುತ್ತಾ ಈ ಪುಸ್ತಕ ಬರೆದಿದ್ದೇನೆ. ನಾನು ಒರ್ವ ಸಾಮಾನ್ಯ ಗೃಹಿಣಿ. ನನಗೆ ಈ ರೀತಿಯಾದ ಪುಸ್ತಕಗಳನ್ನು ಬರೆದು ಅನುಭವವಿಲ್ಲ. ಈ ನನ್ನ ಬರಹದಲ್ಲಿ ಏನಾದರೂ ವ್ಯತ್ಯಾಸಗಳು ಇದ್ದಲ್ಲಿ ದಯಮಾಡಿ ಕ್ಷಮಿಸಿ ಹಾಗೂ ಸಲಹೆ ನೀಡಿ.

– ಶ್ರೀಮತಿ ಶಾರದಶಂಕರ್

ಕಾಯಕವೇ ಕೈಲಾಸ

ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠ
ತುಮಕೂರು - 572 104, ಕರ್ನಾಟಕ ರಾಜ್ಯ

☎ : 2282211
: 2282411
Fax 0816 : 2282511
E-mail : smath_swamigalu@yahoo.in

ಕ್ರ.ಸಂಖ್ಯೆ : ೨೪೦೩/೨೦೧೦-೧೧

ದಿನಾಂಕ : ೧೪/೩/೨೦೧೧

ಸಂದೇಶ.

ಕೊರಟಗೆರೆಯ ಕೀರ್ತಿಕಳಸ, ದಲಿತರದೀಪ, ಬಸವಭಕ್ತಿಯ ಹರಿಕಾರ, ಗಾಂಧೀಜಿಯವರ ಶಿಷ್ಯವರ್ಗ, ಶಿಕ್ಷಣಾಧಿಕಾರಿ, ಸಹಕಾರಿ, ನಿಸ್ವಾರ್ಥದನಿಜಾಸೆ, ರಾಷ್ಟ್ರಪ್ರೇಮಿ, ಸ್ವಾತಂತ್ರ್ಯ ಸಮರ ಯೋಧಪ್ರೇಮಿ, ಜನಸೇವಾಸಕ್ತ, ಸರಳಜೀವನ, ಉನ್ನತಚಿಂತನದ ಸಾಕಾರ, ಖಾದಿವಸ್ತ್ರಧಾರಿ, ಶ್ರೀ ಆರ್.ಚನ್ನಿಗರಾಮಯ್ಯನವರ ಜನ್ಮಶತಮಾನೋತ್ಸವವನ್ನು ದಿನಾಂಕ05-06-2011 ರಂದು ಆಯೋಜಿಸಿದ್ದು ಸಮಾರಂಭದ ಅಂಗವಾಗಿ ಸ್ಮರಣಗ್ರಂಥವನ್ನು ಲೋಕಾರ್ಪಣೆ ಮಾಡುತ್ತಿರುವುದು ಸಮಯೋಚಿತವಾದುದಾಗಿದೆ.

ಶ್ರೀ ಚನ್ನಿಗರಾಮಯ್ಯನವರು ಚಿಕ್ಕಂದಿನಿಂದ ಒಳ್ಳೆಯ ಸಂಸ್ಕಾರ, ಸದಾಚಾರ [illegible] ಜೀವನ ಮೌಲ್ಯಗಳನ್ನು ಗೌರವಿಸಿದವರು. ದಲಿತ ಸಮಾಜದಲ್ಲಿ ಜನಿಸಿದರೂ ಸರ್ವಜನಾಂಗದ ಪ್ರೀತಿ ಅಭಿಮಾನಗಳನ್ನು ಗಳಿಸಿದವರು. ದೈವಭಕ್ತರಾಗಿ, ಗುರುಜನರಲ್ಲಿ ಶ್ರದ್ಧೆವಿಶ್ವಾಸಗಳಿಂದ ನಡೆದುಕೊಂಡು ಬಂದವರಾಗಿದ್ದರು. ಸುಪ್ರಸಿದ್ಧ ರಾಜಕೀಯ ನಾಯಕರ ಗರಡಿಯಲ್ಲಿ ಪಳಗಿದ ಸೌಜನ್ಯವಂತರು. ಹಂತಹಂತವಾಗಿ ಜೀವನ ಸೋಪಾನವನ್ನು ಮೇಲೇರಿ ನಾಯಕ ಸಮರ್ಥರೆನಿಸಿಕೊಂಡರು. ಆಡಂಬರ, ಪ್ರತಿಷ್ಠೆ ಪ್ರದರ್ಶನಗಳಿಂದ ದೂರನಿಂತವರು. ಹಿಂದುಳಿದವರಿಗೆ [illegible] ರಾಜ ಮಹಾರಾಜರುಗಳ ಪ್ರೀತಿಗೌರವಗಳಿಗೆ ಪಾತ್ರರಾಗಿದ್ದವರು. ಶ್ರೀಮಠದೊಡನೆ ಭಕ್ತಿಬಾಂಧವ್ಯವನ್ನು ಬೆಳೆಸಿಕೊಂಡು ಬಂದವರಾಗಿದ್ದರು.

ಶ್ರೀಯುತರನ್ನು ಜನ್ಮಶತಮಾನೋತ್ಸವದ ಮೂಲಕ, ಗ್ರಂಥಸಮರ್ಪಣೆಯ ಸೇವೆಯೊಂದಿಗೆ ಗೌರವಿಸುತ್ತಿರುವುದು ಇಂದಿನ ಯುವಜನಾಂಗಕ್ಕೆ ಮಾರ್ಗದರ್ಶನ ಮಾಡುವಂತಹುದು. ಸಮಿತಿಯ ಎಲ್ಲ ಪದಾಧಿಕಾರಿಗಳೂ ಗ್ರಂಥದ ಸಂಪಾದಕರೂ ಪ್ರಶಂಸನೀಯರಾಗಿದ್ದಾರೆ.

ಉದ್ದೇಶಿತ ಸಮಾರಂಭ ಯಶಸ್ವಿಯಾಗಲಿ ಎಂದು ಆಶಿಸುತ್ತ, ಸ್ಮರಣಗ್ರಂಥ ಮೌಲಿಕ ಕೃತಿಯಾಗಿ ಪ್ರಕಟವಾಗಲಿ ಎಂದು ಹಾರೈಸುತ್ತೇವೆ.

(ಶ್ರೀ ಶಿವಕುಮಾರ ಸ್ವಾಮಿಗಳು)
ಶ್ರೀ ಸಿದ್ಧಗಂಗಾ ಮಠ.

ಸಂಪಾದಕರು,
ಸ್ಮರಣ ಗ್ರಂಥ ಶ್ರೀ ಆರ್.ಚನ್ನಿಗರಾಮಯ್ಯ ಜನ್ಮ
ಶತಮಾನೋತ್ಸವ ಸಮಿತಿ,
ನಂ.1, ಎಲ್.ಐ.ಸಿ.ಕಾಲೋನಿ, 3ನೇ ಹಂತ, 4ನೇ ಬ್ಲಾಕ್,
ಬಸವೇಶ್ವರನಗರ, ಬೆಂಗಳೂರು - 560 079.

ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಗುರುಗಳಾದ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು R.C. ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಕಳುಹಿಸಿದಂತಹ ಸಂದೇಶ ಪತ್ರ

ಕೃತಜ್ಞತೆಗಳು

ನನಗೆ ಈ ಪುಸ್ತಕ ಬರೆಯುವಂತಹ ಮಹಾನ್ ಕಾರ್ಯಕ್ಕೆ ಚೇತನ ನೀಡಿದ ಆ ಭಗವಂತನಿಗೆ ನನ್ನ ಪ್ರಥಮ ನಮಸ್ಕಾರಗಳು.

ಎಲ್ಲಾ ರೀತಿಯಲ್ಲೂ ಸಹಕರಿಸಿದ ನನ್ನ ಕುಟುಂಬದ ಎಲ್ಲಾ ಸದಸ್ಯರಿಗೂ ಹಾಗೂ ಬಂಧು ಮಿತ್ರರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

– ಶ್ರೀಮತಿ ಶಾರದಶಂಕರ್

ಪರಿವಿಡಿ

1. ಹುಟ್ಟೂರಾದ ಕೊರಟಗೆರೆಯ ಹಿನ್ನೆಲೆ



ಕೊರಟಗೆರೆಯ ಮುಖ್ಯರಸ್ತೆಯಲ್ಲಿ R.C. ರವರ ಸ್ವಗೃಹ ಹಾಗೂ ಹಿಂಭಾಗದಲ್ಲಿ ಗಂಗಾಧರೇಶ್ವರ ಬೆಟ್ಟ

ಮಗಳ ನೆನಪಿನಾಳದಲ್ಲಿ R.C. / 2

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕು ಮಧ್ಯ ಭಾಗದಲ್ಲಿ ಮುಖ್ಯರಸ್ತೆ ಇದೆ. ಇದು ತುಮಕೂರಿನಿಂದ, ಮಧುಗಿರಿಗೆ ಹೋಗುವ ದಾರಿ. ಈ ಮುಖ್ಯರಸ್ತೆಯ ಎಡ ಭಾಗಕ್ಕೆ ಬೆಟ್ಟವಿದ್ದು, ಬೆಟ್ಟದ ಪಕ್ಕದಲ್ಲಿ ಕೆರೆ ಇದೆ. ಈ ಬೆಟ್ಟಕ್ಕೆ ಒಂದು ಇತಿಹಾಸವಿದೆ.

ನಾನು ಚಿಕ್ಕವಳಾಗಿದ್ದಾಗ ನನ್ನ ಸೋದರತ್ತೆಯರು ಈ ಬೆಟ್ಟದ ಇತಿಹಾಸವನ್ನು ಜನಪದ ಹಾಡಿನ ಶೈಲಿಯಲ್ಲಿ ಹಾಡುತ್ತಿದ್ದರು. ಈ ಜನಪದ ಹಾಡಿನ ತಾತ್ಪರ್ಯ ಹೀಗಿತ್ತು. ಈಶ್ವರನು ಗಂಗಾಧರೇಶ್ವರನಾಗಿ, ಪಾರ್ವತಿಯು ವನ್ನಲಾದೇವಿಯಾಗಿ ಈ ಬೆಟ್ಟಕ್ಕೆ ಬಂದಿದ್ದು, ಅಲ್ಲಿದ್ದ ಒಬ್ಬ ಮಾಟ ಮಂತ್ರ ತಿಳಿದ ರಾಕ್ಷಸನು, ವನ್ನಲಾದೇವಿಯ ರೂಪಕ್ಕೆ ಮಾರುಹೋಗಿ, ಅವಳು ಒಬ್ಬಳೇ ಇರುವುದನ್ನು ಗಮನಿಸಿ, ಜೋಗಿಯ ವೇಷ ಧರಿಸಿ ಬಿಕ್ಷಕ್ಕೆ ಹೋಗಿ, ಆಕೆಯನ್ನು ಮಂತ್ರ ಶಕ್ತಿಯುಳ್ಳ ದಂಡದಿಂದ ನಾಯಿ ರೂಪವನ್ನಾಗಿ ಮಾಡಿ, ಬೆಟ್ಟದ ಬುಡದಲ್ಲಿದ್ದ ಗುಹೆಯಲ್ಲಿ ಇರಿಸಿದನಂತೆ. ಇದನ್ನು ತಿಳಿದ ಗಂಗಾಧರೇಶ್ವರನು ಅಲ್ಲಿಗೆ ಹೋಗಿ ರಾಕ್ಷಸನನ್ನು ಸಂಹರಿಸಿ ವನ್ನಲಾದೇವಿಯನ್ನು ರಕ್ಷಿಸಿ, ಬೆಟ್ಟದ ಮೇಲೆ ಕರೆದುಕೊಂಡು ಹೋಗಿ ಅಲ್ಲಿ ನೆಲೆಸಿದನಂತೆ. ಅದಕ್ಕಾಗಿ ಈ ಬೆಟ್ಟಕ್ಕೆ 'ಗಂಗಾಧರೇಶ್ವರನ ಬೆಟ್ಟ' ಎಂದು ಹೆಸರು. ಆ ಬೆಟ್ಟದ ಪಕ್ಕದಲ್ಲಿರುವ ಕೆರೆಯನ್ನು 'ಗಂಗಾಧರೇಶ್ವರ ಕೆರೆ' ಎಂದು ಈಗಲೂ ಕರೆಯುತ್ತಾರೆ.

ಈಗಲೂ ಈ ಗಂಗಾಧರೇಶ್ವರನ ಬೆಟ್ಟದ ಮೇಲೆ ದೇವಸ್ಥಾನವಿದೆ. ಮಹಾಶಿವರಾತ್ರಿಯಾದ ಬೆಳಿಗ್ಗೆ ಗಂಗಾಧರೇಶ್ವರನ ಮೂರ್ತಿಯನ್ನು ಆ ಬೆಟ್ಟದಿಂದ ಕೆಳಗೆ ತಂದು, ತೇರಿನ ಬೀದಿಯಲ್ಲಿ ಕಲ್ಲಿನ ಚಕ್ರವುಳ್ಳ ತೇರಿನಲ್ಲಿ ಇರಿಸಿ ಊರಿನ ಪ್ರಮುಖ ಬೀದಿಗಳಲೆಲ್ಲಾ ಮೆರವಣಿಗೆ ಮಾಡುವ ಪದ್ಧತಿ ಇದೆ. ನಾನು ನೋಡಿದ ಆ ದಿನಗಳಂದು ಎಲ್ಲರೂ ಗಂಗಾಧರೇಶ್ವರ ಸ್ವಾಮಿಗೆ ಹಣ್ಣು-ಕಾಯಿ ಪೂಜೆ ಮಾಡಿಸಿ, ಮನೆಗೆ ಬಂದು ಹಬ್ಬದ ಊಟ ಮಾಡುತ್ತಿದ್ದರು. ಈಗಲೂ ಈ ಪದ್ಧತಿ ಇದೆ.

ಮುಖ್ಯರಸ್ತೆಯ ಬಲ ಭಾಗದಲ್ಲಿ ನದಿ ಹರಿಯುತ್ತಿತ್ತು. ಈ ನದಿಯು ಅಗ್ರಾರ ಊರಿನಿಂದ ಪ್ರಾರಂಭವಾಗಿ, ಕೊರಟಗೆರೆ ಮಾರ್ಗವಾಗಿ ಮುಂದೆ ಹರಿಯುತ್ತಾ ಹೋಗುತ್ತದೆ. ನದಿಯ ದಡದಲ್ಲಿ ಗೇಧಿಗೆ ತೋಪು (ಈಗಿನ ಊಡುಗೆರೆ ಮತ್ತು ಕೊರಟಗೆರೆ ದಾರಿಯಲ್ಲಿ ಸಿಗುವ ಸೇತುವೆಯ ಹತ್ತಿರ) ಇತ್ತು. ನದಿಯ ದಡದಲ್ಲಿರುವ ಗೇಧಿಗೆ ತೋಪು ಸುವರ್ಣಬಣ್ಣದ ಗರಿಗಳಿಂದ ಸುಂದರವಾಗಿಯೂ ಮತ್ತು ಸುವಾಸನೆಯಿಂದಲೂ ಕೂಡಿ ಈ ಸ್ಥಳವು ವಿಜೃಂಭಿಸುತ್ತಿತ್ತು. ಈ ಕಾರಣದಿಂದ ಈ ನದಿಗೆ **'ಸುವರ್ಣಮುಖಿ ನದಿ'** ಎಂದು ಕರೆಯುತ್ತಿದ್ದರು. ಇಲ್ಲಿದ್ದ ಮರಗಳಲ್ಲಿ ನಾಗರಹಾವುಗಳು ಹೆಚ್ಚಾಗಿ ಇದ್ದವು. ಆದುದರಿಂದ ಇಲ್ಲಿ ಒಬ್ಬರೆ ಹೋಗುವುದಕ್ಕೆ ಭಯ ಪಡುತ್ತಿದ್ದರು. ಪೂರ್ಣಿಮೆಯ ದಿನದಂದು ದೇವ ಕನ್ನಿಕೆಯರು ಇಲ್ಲಿಗೆ ಬಂದು, ನೀರಿನಲ್ಲಿ ಜಲಕ್ರೀಡೆ ಆಡುತ್ತಿದ್ದರೆಂದು ಹೇಳುತ್ತಿದ್ದರು. ಇದನ್ನು ನೋಡುವುದಕ್ಕೆ ಹೋದವರು ಹಿಂತಿರುಗಿ ಬರುವುದಕ್ಕೆ ಕಷ್ಟವಾಗುತ್ತಿತ್ತೆಂದು ಹೇಳುತ್ತಿದ್ದರು.

ನಮ್ಮ ಊರಿನ ಜನ ಕುಡಿಯುವ ನೀರಿಗೆ, ಬಟ್ಟೆ, ದನ-ಕರು ತೊಳೆಯಲು, ವ್ಯವಸಾಯ ಮಾಡಲು ಹೀಗೆ ಪ್ರತಿಯೊಂದಕ್ಕೂ ಸುವರ್ಣಮುಖಿ ನದಿ ನೀರನ್ನು ಬಳಸುತ್ತಿದ್ದರು ಮತ್ತು ಬಾವಿ ನೀರನ್ನು ಅವಲಂಬಿಸಿದ್ದರು. ಇಷ್ಟೇ ನಮ್ಮ ಊರಿಗೆ ಇದ್ದ ನೀರಿನ ಸೌಲಭ್ಯಗಳು.

❖



R.C.ರವರ ತಂದೆ

ಯಜಮಾನ್ ರಾಮಹನುಮಯ್ಯ (ಗುಬ್ಬಿ ತಾತ)



R.C.ರವರ ಅಕ್ಕ
ಪುಟ್ಟನರಸಮ್ಮ



R.C.ರವರೊಂದಿಗೆ ಧರ್ಮಪತ್ನಿ
ದೊಡ್ಡನರಸಮ್ಮ

2. ನಮ್ಮ ಪೂರ್ವಜರು

ಗಂಗಾಧರೇಶ್ವರನ ಬೆಟ್ಟದ ಬುಡದಲ್ಲಿ ಹರಿಜನರ ಕುಟುಂಬದ ಮನೆಗಳು ಇದ್ದವು. ಬಂಡೆಗಳು ಕಲ್ಲು ಗುಂಡುಗಳು ಹೇಗೆ ಇದೆಯೋ ಹಾಗೆಯೇ ಜಾಗ ಮಾಡಿಕೊಂಡು ಮನೆ ಕಟ್ಟಿಕೊಂಡು ವಾಸಿಸುತ್ತಿದ್ದರು. ಎತ್ತರವಾಗಿದ್ದ ಒಂದು ಬಂಡೆಯ ಮೇಲೆ 8–9 ಮೆಟ್ಟಲುಗಳು ಇರುವಂತಹ ಒಂದು ದೊಡ್ಡ ಮನೆ ಇತ್ತು. ಹಿಂದಿನ ಕಾಲದಲ್ಲಿ ಕಂಬ, ಸಿಂಬೆಯ ಮನೆಗಳೆಂದು ಹೇಳುತ್ತಿದ್ದರು. ಅವು ಮಾಳಿಗೆ ಮನೆಗಳು. ಈ ಮನೆ ವಿಶಾಲವಾದ ನಡುಮನೆ (ಹಾಲ್), ಅಜಾರ (ವರಾಂಡ), ರೂಮುಗಳು, ಉಗ್ರಾಣ, ಅಡಿಗೆ ಮನೆ, ದನ ಕರುಗಳನ್ನು ಕಟ್ಟುವುದಕ್ಕೆ ದೊಡ್ಡ ಕೊಟ್ಟಿಗೆ, ಹೀಗೆ ದೊಡ್ಡ ಕುಟುಂಬ ಇರುವುದಕ್ಕೆ ಯೋಗ್ಯವಾದ ಮನೆ. ಅಲ್ಲಿದ್ದ ಎಲ್ಲಾ ಮನೆಗಳಿಗಿಂತ ದೊಡ್ಡ ಮನೆಯಾಗಿತ್ತು. ಎತ್ತರದಲ್ಲಿ ಇದ್ದುದರಿಂದ ದೊಡ್ಡಮನೆ ಎಂದು ಕರೆಯುತ್ತಿದ್ದರು. ಕೆಳಭಾಗಕ್ಕೆ ಇರುವ ಮನೆಗಳಿಗೆ ಕೆಳಮನೆ ಎಂದು ಕರೆಯುತ್ತಿದ್ದರು.

ಈ ದೊಡ್ಡಮನೆಯ ಯಜಮಾನರ ಹೆಸರು ನರಸಿಂಹಪ್ಪ. ಇವರು ಕದರಪ್ಪನ ಮಗ. ಅಂದರೆ ನರಸಿಂಹಪ್ಪ ನನ್ನ ಮುತ್ತಾತ. ಇವರು ಬಹಳ ಬುದ್ಧಿವಂತರು, ಅಕ್ಷರಸ್ಥರು, ಪಾರಮಾರ್ಥಿಕ ಜ್ಞಾನ ಉಳ್ಳವರು, ಸುಸಂಸ್ಕೃತರು ಹಾಗೂ ಬಲಾಢ್ಯರು ಆಗಿದ್ದವರು. ಇವರು ಗೌರಗನಹಳ್ಳಿಯ ಮುದ್ದರಂಗಮ್ಮ ಎಂಬ ಹೆಣ್ಣು ಮಗಳೊಂದಿಗೆ ಮದುವೆ ಆಗಿದ್ದರು. ಆ ಹೆಣ್ಣು ಮಗಳು ಸಹ ತುಂಬಾ ಒಳ್ಳೆಯ ಗುಣ, ನಡತೆಯುಳ್ಳ ಸಾಂಪ್ರದಾಯಿಕ ಹೆಣ್ಣು ಮಗಳಾಗಿದ್ದಳು. ಈಕೆಯನ್ನು ಮದುವೆಯಾಗಿ

ಎಷ್ಟು ವರ್ಷಗಳಾದರೂ ಮಕ್ಕಳಾಗಿಲ್ಲ ಎನ್ನುವ ಕಾರಣಕ್ಕೆ ದೊಡ್ಡವರೆಲ್ಲಾ ಸೇರಿ ಮತ್ತೊಂದು ಹೆಣ್ಣನ್ನು ದ್ಯಾವಲಾಪುರದಿಂದ ತಂದು ಮದುವೆ ಮಾಡಿಸಿದರು. ಈಕೆಯ ಹೆಸರು ಲಕ್ಕಮ್ಮ. ಆ ಹುಡುಗಿ ಸಹ ಒಳ್ಳೆಯ ಮನೆತನದ ಹುಡುಗಿ. ಇಬ್ಬರೂ ಹೆಂಡತಿಯರಲ್ಲಿ ಭಿನ್ನಾಭಿಪ್ರಾಯ ಇರಲಿಲ್ಲ. ಒಂದೇ ತಾಯಿ ಮಕ್ಕಳಂತೆ, ಅಕ್ಕ-ತಂಗಿ ಭಾವನೆಯಿಂದ ಮನೆಗೆಲಸ, ಸಂಸಾರ, ದಾಂಪತ್ಯ ಜೀವನ ನಡೆಸಿಕೊಂಡು ಬರುತ್ತಿದ್ದರು.

ಚಿಕ್ಕ ಹೆಂಡತಿ ಲಕ್ಕಮ್ಮನಿಗೆ ಎರಡು ಗಂಡು ಮಕ್ಕಳಾದವು. ದೊಡ್ಡ ಮಗನ ಹೆಸರು ದೊಡ್ಡರಾಮಯ್ಯ. ಎರಡನೆಯ ಮಗನ ಹೆಸರು ದೊಡ್ಡಹನುಮಂತಪ್ಪ. ಕೆಲವು ಕಾಲದ ನಂತರ ದೊಡ್ಡ ಹೆಂಡತಿ ಮುದ್ದರಂಗಮ್ಮನಿಗೆ ಕೂಡ ಎರಡು ಮಕ್ಕಳಾದವು. ದೊಡ್ಡ ಮಗ ರಾಮಹನುಮಯ್ಯ (ಗುಬ್ಬಿ ತಾತ), ಮಗಳು ಯಲ್ಲಮ್ಮ. ಅಂದರೆ ನರಸಿಂಹಪ್ಪನವರಿಗೆ ನಾಲ್ಕು ಮಕ್ಕಳು, ಮೂರು ಗಂಡು, ಒಂದು ಹೆಣ್ಣು.

ದೊಡ್ಡ ಹೆಂಡತಿಯ ಮಗನಾದ ರಾಮಹನುಮಯ್ಯನವರಿಗೆ ಪಾಲನಹಳ್ಳಿಯ ಹೆಣ್ಣು ಮಗಳಾದ ರಾಮಕ್ಕನವರನ್ನು ಮದುವೆ ಮಾಡಿಸಿದರು. ರಾಮಕ್ಕನ ಒಬ್ಬನೇ ಅಣ್ಣ ರಾಮಣ್ಣನನ್ನು ಸಹ ಕೊರಟಗೆರೆಗೆ ಕರೆತಂದು ಮನೆಯಲ್ಲಿಯೇ ಇರಿಸಿಕೊಂಡಿದ್ದರು.

ರಾಮಹನುಮಯ್ಯ ಮತ್ತು ರಾಮಕ್ಕ ಇವರಿಗೆ ಇಬ್ಬರು ಮಕ್ಕಳು ಜನಿಸಿದರು. ಮಗಳು ಪುಟ್ಟನರಸಮ್ಮ, ಮಗ **'ಆರ್. ಚೆನ್ನಿಗರಾಮಯ್ಯ'**, ನನ್ನ ಪೂಜ್ಯ ತಂದೆ **R.C.**

❖

ಕದರಪ್ಪ (ಆರ್‌ಸಿರವರ ಮುತ್ತಾತ)

ನರಸಿಂಹಪ್ಪ (ಆರ್‌ಸಿರವರ ತಾತ)

\+

ಮದ್ದುರಂಗಮ್ಮ ಗೌರಗನಹಳ್ಳಿ (ಆರ್‌ಸಿರವರ ಆಜ್ಜಿ)
(ಮೊದಲ ಹೆಂಡತಿ)

ರಾಮಹನುಮಯ್ಯ
(ಆರ್‌ಸಿರವರ ತಂದೆ) (ಗುಬ್ಬಿ ತಾತ),
\+
ರಾಮಕ್ಕ (ಆರ್‌ಸಿರವರ ತಾಯಿ)
ಪಾಲನಹಳ್ಳಿ,

ಯಲ್ಲಮ್ಮ (ಆರ್‌ಸಿರವರ ಸೋದರತ್ತೆ)
\+
ಪೊಡಪ್ಪ (ಗೌರಗನಹಳ್ಳಿ)

ಆರ್‌ಸಿ
\+
ದೊಡ್ಡನರಸಮ್ಮ (ದೊಡ್ಡೇರಿ ಹನುಮಂತಪ್ಪನವರ ಮಗಳು)
ಆರ್‌ಸಿರವರ ಧರ್ಮಪತ್ನಿ.

ಪುಟ್ಟನರಸಮ್ಮ (ಆರ್‌ಸಿರವರ ಅಕ್ಕ)
\+
ದೊಡ್ಡಣ್ಣ (ಗೌರಗನಹಳ್ಳಿ)

1. ಗೊವಿಂದರಾಜು (ರಾಜವರ್ಧನ್) ಜೇಷ್ಠ ಪುತ್ರ. + ಶಾಲಿನಿ (ಮಂಗಳೂರು)
2. ಲೀಲಮ್ಮ ಜೇಷ್ಠ ಪುತ್ರಿ. + ರಾಮಕೃಷ್ಣಯ್ಯ (ಪಾಲನಹಳ್ಳಿ)
3. ಶಾರದಮ್ಮ ಎರಡನೆ ಮಗಳು + ಡಾ॥ ಜಯಶಂಕರಪ್ಪ (ದೊಡ್ಡ ಸಿದ್ದವನಹಳ್ಳಿ)
4. ನರಸಿಂಹಯ್ಯ ಎರಡನೇ ಮಗ + ಶಶಿ (ಬೆಂಗಳೂರು).
5. ವಿಜಯಲಕ್ಮೀ ಮೂರನೆ ಮಗಳು + ಸಂಜೀವರಾಜು (ವೆಂಕಟಾಪುರ)
6. ಡಾ॥ ಅರುಂದತಿ ನಾಲ್ಕನೇ ಮಗಳು + ಡಾ॥ ಜೂಜುಚಲ್ (ಬರ್ಮ)
7. ಶಾಂತಕುಮಾರಿ ಐದನೇ ಮಗಳು + ಪಾಂಡುರಂಗ (ಗೌರಗನಹಳ್ಳಿ)
8. ಶಿವರಾಮ್ ಕಿರಿ ಮಗ + ಚಂದ್ರಿಕ (ಪಾಲನಹಳ್ಳಿ)

ನರಸಿಂಹಪ್ಪ (ಆರ್‌ಸಿರವರ ತಾತ)

\+

ಲಕ್ಕಮ್ಮ (ದ್ಯಾವಲಾಪುರ)
(ಆರ್‌ಸಿರವರ ತಾತನ ಎರಡನೇ ಹೆಂಡತಿ)

ದೊಡ್ಡರಾಮಪ್ಪ + ಪುಟ್ಟಮ್ಮ (ದ್ಯಾವಲಾಪುರ)

(ಮುಂದಿನ ಪುಟಕ್ಕೆ)

ದೊಡ್ಡಹನುಮಂತಪ್ಪ +ಕೆಂಪಕ್ಕ(ಮಾವಿನಕೆರೆ)

ಹುಲಿರಾಮಯ್ಯ + ಪುಟ್ಟಮ್ಮ (ಮಾವಿನಕೆರೆ),
1.ರಾಮಣ್ಣ 2.ನರಸಿಂಹಪ್ಪ.

ಮಗಳ ನೆನಪಿನಾಳದಲ್ಲಿ R.C. / 8

1.ಪುಟ್ಟರಾಮಯ್ಯ
+
ಕದಿರಮ್ಮ (ಕೊಡಿಗೇನಹಳ್ಳಿ)
- ನರಸಮ್ಮ
- ಸಂಜೀವಯ್ಯ
- ರಾಮಚಂದ್ರಪ್ಪ
- ಹನುಮಂತರಾಯಪ್ಪ
- ನರಸಿಂಹಮೂರ್ತಿ
- ಲಕ್ಕಮ್ಮ
- ಶ್ರೀನಿವಾಸ್
- ರಾಮಕ್ಕ
- ದೊಡ್ಡರಾಮ
- ಶ್ರೀರಂಗನಾಥ
- ಗುರುಭಕ್ತ

2. ಪುಟ್ಟಸಂಜೀವಮ್ಮ
+
ಪಾಲಹಳ್ಳಿ ರಾಮಯ್ಯ
- ಮುದ್ದುರಾಮಯ್ಯ
- ಚಿಕ್ಕರಾಮಕ್ಕ
- ಕಂಬಲಿರಾಮಯ್ಯ
- ರಾಮಕೃಷ್ಣಯ್ಯ
- ರಾಮಸ್ವಾಮಿ

3. ಪುಟ್ಟಭೀಮಕ್ಕ
+
ಸಿದ್ದಲಿಂಗಯ್ಯ (ಸಂಕೇನಹಳ್ಳಿ)
- ಸಿದ್ದಗಂಗಯ್ಯ
- ಸಂಜೀವಯ್ಯ
- ಪುಟ್ಟಸ್ವಾಮಿ
- ಜಯಲಕ್ಷ್ಮಿ
- ಚನ್ನಿಗರಾಮಯ್ಯ
- ಹನುಮಂತರಾಯಪ್ಪ
- ಸಾವಿತ್ರಿ

4.ಪುಟ್ಟನರಸಪ್ಪ
+
ಪುಟ್ಟಮ್ಮ (ಗೌರಗನಹಳ್ಳಿ)
- ಚಿಕ್ಕಹನುಮಂತಯ್ಯ
- ರಂಗಮ್ಮ
- ಜಯಮ್ಮ
- ಅಂಜನಪ್ಪ
- ಬಲರಾಮಯ್ಯ
- ಪಾರ್ವತಿ
- ನರಸಮ್ಮ
- ಕುಮಾರಸ್ವಾಮಿ

5. ಪುಟ್ಟರಾಮಕ್ಕ
+
ಬಸವಯ್ಯ (ಕೊಡಗೇನಹಳ್ಳಿ)
- ಚಂದ್ರಶೇಖರ್

6. ಕೆ. ರಾಮಯ್ಯ
+
ಚಿಕ್ಕರಾಮಕ್ಕ (ಪಾಲನಹಳ್ಳಿ)
- ಸರೋಜ
- ಶ್ರೀರಾಮ
- ಪ್ರಸಾದ್
- ರುಕ್ಮಿಣಿ
- ಕಲಾವತಿ
- ರವಿ

7. ಹರಿಯಮ್ಮ
+
ಮುನಿದಾಸಪ್ಪ (ಬೆಂಗಳೂರು)
- ಶ್ರೀನಿವಾಸ್
- ಕಮಲಮ್ಮ
- ಅನಸೂಯ
- ರಾಮು
- ಲಕ್ಷ್ಮಣ
- ಜಯಲಕ್ಷ್ಮಿ
- ವಿಜಯಲಕ್ಷ್ಮಿ
- ಸುದರ್ಶನ್

8. ರಂಗಮ್ಮ
+
ಪುಟ್ಟರಂಗಯ್ಯ (ಗೌರಗನಹಳ್ಳಿ)
- ಅಂಬುಜಮ್ಮ
- ರಂಗರಾಜು
- ಶ್ರೀರಂಗಮ್ಮ
- ನಾಗರತ್ನ
- ನಾಗಲಕ್ಷ್ಮಿ
- ನಾಗವೇಣಿ

3. ತಾತಾ ರಾಮಹನುಮಯ್ಯ(ಗುಬ್ಬಿ ತಾತ) ಮತ್ತು ಅಜ್ಜಿ ರಾಮಕ್ಕವ್ವ



R.C.ರವರ ತಂದೆ ಯಜಮಾನ್ ರಾಮಹನುಮಯ್ಯ (ಗುಬ್ಬಿ ತಾತ)

ನಮ್ಮ ಅಜ್ಜಿ ರಾಮಕ್ಕವ್ವ ಒಳ್ಳೆಯ ಗುಣವಂತೆ, ಶಾಂತಿ, ಸಮಾಧಾನ ಉಳ್ಳವಳು. ದ್ವೇಷ, ಅಸೂಯೆ ಎಂದರೆ ಗೊತ್ತಿಲ್ಲದ ಮುಗ್ಧೆ. ಮನೆಗೆ ಯಾರೇ ಬಂದರೂ ಅತಿಥಿ ಸತ್ಕಾರ ಮಾಡುವುದರಲ್ಲಿ ಎತ್ತಿದ ಕೈ. ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಮಾತನಾಡಿಸುತ್ತಿದ್ದರು. ಯಾರ ಮನಸ್ಸಿಗೂ ನೋವು ಆಗದಂತೆ ನಡೆದುಕೊಳ್ಳುತ್ತಿದ್ದರು. ನಮ್ಮ ತಾತಾ(ಗುಬ್ಬಿ ತಾತ)ನಿಗೆ ಇಷ್ಟ ಇರುವುದನ್ನು ಯಾವುದು ಬೇಡ ಎನ್ನುತ್ತಿರಲಿಲ್ಲ. ನಮ್ಮ ಊರಿಗೆ ಬಂದವರು "ಇದ್ದರೆ ರಾಮಕ್ಕನ ತರಹ ಇರಬೇಕು" ಎಂದು ಹೇಳುತ್ತಿದ್ದರು. ಆದರೆ ದೇವರು ನಮ್ಮಜ್ಜಿ ರಾಮಕ್ಕನವರಿಗೆ ಹೆಚ್ಚು ಆಯಸ್ಸು ಕೊಡಲಿಲ್ಲ. ಮಗನ ಮದುವೆಯಾಗಿ ಒಬ್ಬ ಮೊಮ್ಮಗ ಹುಟ್ಟಿದ್ದನ್ನು ನೋಡಿದ್ದರು. ಆ ಮೊಮ್ಮಗನೇ ನಮ್ಮ ಅಣ್ಣ ಗೋವಿಂದರಾಜು. ಮಗನ ಕಷ್ಟದ ದಿನಗಳನ್ನು ನೋಡಿದ ತಾಯಿ, ಸುಖ-ಸಂತೋಷ ನೋಡಲು ಇರಲಿಲ್ಲ. R.C. ಅವರು ಮಂತ್ರಿಗಳಾಗಿದ್ದಾಗ ಅವರ ತಾಯಿಯನ್ನು ಸದಾ ನೆನಪು ಮಾಡಿಕೊಳ್ಳುತ್ತಿದ್ದರು. "ನನ್ನ ಸುಖ-ಸಂತೋಷ ನೋಡಲು ನನ್ನ ತಾಯಿ ಇರಬೇಕಿತ್ತು" ಎಂದು ಸದಾ ಹೇಳುತ್ತಿದ್ದದ್ದು ನನಗೆ ಈಗಲೂ ನೆನಪಿದೆ.

ಗುಬ್ಬಿ ತಾತಯ್ಯನವರು ಮಧುಗಿರಿ ಸಬ್ ಡಿವಿಜನ್‌ನ, ದೀನ ದಲಿತರ ಹಾಗೂ ಹರಿಜನರಿಗೆ ಪಿತಾಮಹರಂತೆ ಇದ್ದರು. ಇವರು ಸಂಗೀತ, ಲಾವಣಿ, ಕನಕವಾದ್ಯ, ಗರಡುಸಾಮು, ಯಕ್ಷಗಾನ, ನಾಟಕ, ಭೂತವಿದ್ಯೆ, ಪಿಶಾಚಿ ಉಚ್ಚಾಟನೆಯಲ್ಲಿ ಹೆಸರು ವಾಸಿಯಾದವರು. ಸಾಧು ಸಂತರ ಸೇವೆಯಲ್ಲಿ, ದಾಸೋಹದಲ್ಲಿ ಇವರಿಗೆ ತುಂಬಾ ಶ್ರದ್ಧೆ ಇತ್ತು. 1952ರಲ್ಲಿ ಜಿಲ್ಲಾ ಪ್ರಪ್ರಥಮ ಹರಿಜನ(ಪಂಚಮ) ಸಮ್ಮೇಳನವನ್ನು ನಡೆಸಿ **"ಪಂಚಮರು"** ಎಂಬ ಹೆಸರನ್ನು ತಪ್ಪಿಸಿ **"ಆದಿಕರ್ನಾಟಕ"** ಎಂದು ಕರೆಯುವಂತೆ ಮಾಡಿದರು. ಹರಿಜನರ ವಿದ್ಯಾಭ್ಯಾಸ, ಆರ್ಥಿಕ ಹಾಗೂ ಸಮಾಜ ಸುಧಾರಣೆಗಾಗಿ ಶ್ರಮಿಸುತ್ತಿದ್ದರು. ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಜಗಳ, ಹೊಡೆದಾಟ ನಡೆದಾಗ, ನ್ಯಾಯವಾದ ತೀರ್ಮಾನಕ್ಕಾಗಿ ನಮ್ಮ

ತಾತನವರ ಹತ್ತಿರ ಜನರು ಬರುತ್ತಿದ್ದರು. ಇವರಿಗೆ ಬುದ್ಧಿ ಹೇಳಿ, ನ್ಯಾಯ ಸಿಗುವಂತೆ ಎಲ್ಲರೂ ಒಪ್ಪುವಂತಹ ತೀರ್ಮಾನ ಮಾಡಿ ಕಳುಹಿಸಿ ಕೊಡುತ್ತಿದ್ದರು. ಈ ಕಾರಣದಿಂದ ನಮ್ಮ ತಾತನವರನ್ನು **'ಯಜಮಾನ್ ರಾಮಹನುಮಯ್ಯ'** ಎಂದು ಕರೆಯುತ್ತಿದ್ದರು. ಇಂತಹವರ ಪುತ್ರ ನಮ್ಮ ತಂದೆ R.C. ಮುಂದಿನ ದಿನಗಳಲ್ಲಿ ತಂದೆಗಿಂತ ಒಂದು ಹಂತ ಎತ್ತರಕ್ಕೆ ಬೆಳೆದರು. ಸತ್ಯ, ನ್ಯಾಯ, ಧರ್ಮ ಇವುಗಳನ್ನು ತಮ್ಮ ಉಸಿರಿನಂತೆ ಕಾಪಾಡಿಕೊಂಡು ಬಂದರು. ವಂಶಕ್ಕೆ ಒಬ್ಬ ಮಗನಾಗಿ ಕೀರ್ತಿಶಾಲಿಯಾಗಿ ಬಾಳಿದರು..

ನನ್ನ ಮುತ್ತಜ್ಜಿ ಮುದ್ದುರಂಗಮ್ಮ ನಮ್ಮ ತಂದೆ ಮಂತ್ರಿಗಳಾಗಿದ್ದಾಗ ವಾಸವಾಗಿದ್ದ ರೇಸ್‌ವ್ಯೂ ಬಂಗಲೆಗೆ ಬಂದು ಹೋಗಿದ್ದರು. ಮೊಮ್ಮಗನ ವೈಭವಗಳನ್ನು ನೋಡಿ ಆನಂದದಿಂದ ಆಶೀರ್ವಾದ ಮಾಡಿದ್ದರು. ಆನಂತರ ಸ್ವಲ್ಪ ದಿನಗಳಲ್ಲಿಯೇ ತೀರಿಕೊಂಡರು. ಇವರಿಗೆ ವಯಸ್ಸು ನೂರು ವರ್ಷಗಳ ಮೇಲೆ ಆಗಿತ್ತು. ನಮ್ಮ ತಾತ ರಾಮಹನುಮಯ್ಯನವರಿಗೆ ಅವರ ತಾಯಿ ಮುದ್ದುರಂಗಮ್ಮನ ಮೇಲೆ ಅಪಾರವಾದ ಪ್ರೀತಿ ಇತ್ತು. ತಾಯಿಯ ಮಾತಿಗೆ ತುಂಬಾ ಗೌರವ ಕೊಡುತ್ತಿದ್ದರು. ತಾಯಿ ಒಂದು ಮಾತು ಹೇಳಿದ ಮೇಲೆ ಮುಗಿಯಿತು. ಬೇರೆ ಯಾರೇ ಏನು ಹೇಳಿದರೂ ಕೇಳುತ್ತಿರಲಿಲ್ಲ. ನಮ್ಮ ತಾತ ಏನಾದರೂ ಮಾತು ಹೇಳಿದರೆ, ನಮ್ಮ ತಾಯಿ 'ಮುದ್ದರಂಗಮ್ಮನ ಪಾದದ ಆಣೆ' ಎಂದು ಹೇಳಿದ ಮೇಲೆ ಮುಗಿಯಿತು. ಹರಿ-ಹರ, ಬ್ರಹ್ಮಾದಿಗಳು ಹೇಳಿದರೂ ಕೇಳುತ್ತಿರಲಿಲ್ಲ. ಇಷ್ಟೆಲ್ಲಾ ಯಾಕೆ ಹೇಳಿದೆ ಎಂದರೆ ನಮ್ಮ ತಾತ ಅವರ ತಾಯಿ ತಂದೆಯರಲ್ಲಿ ಇಟ್ಟಂತಹ ಪ್ರೀತಿ, ಗೌರವ ಅಪಾರ. ಇದನ್ನು ಎಲ್ಲಾ ಮಕ್ಕಳು ನೋಡಿ ಕಲಿಯುವಂತಿತ್ತು.

❖

ಮಗಳ ನೆನಪಿನಾಳದಲ್ಲಿ R.C. / 12

4. R.C. ರವರ ಬಾಲ್ಯ ಮತ್ತು ವಿದ್ಯಾಭ್ಯಾಸ.

ಆಗಿನ ಕಾಲಕ್ಕೆ ನಮ್ಮ ತಾತ ರಾಮಹನುಮಯ್ಯನವರು ವಿದ್ಯಾಭ್ಯಾಸ ಮಾಡಿಕೊಂಡಿದ್ದರು. ತುಮಕೂರಿನ ಗುಬ್ಬಿ ತಾಲ್ಲೂಕಿನಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು ಹಾಗೂ ಕೆಲವು ವರ್ಷಗಳ ಕಾಲ ಸ್ಕೂಲ್ ಮಾಸ್ಟರ್ ಆಗಿ ಕೆಲಸ ಮಾಡಿಕೊಂಡಿದ್ದರು. ಆ ಕಾರಣದಿಂದ ನಾವು ಅವರನ್ನು 'ಗುಬ್ಬಿ ತಾತ' ಎಂದು ಕರೆಯುತ್ತಿದ್ದೆವು.

ನಮ್ಮ ತಂದೆಯವರು ಕೊರಟಗೆರೆಯ ಶಾಲೆಗೆ ಹೋಗಿ ವಿದ್ಯಾಭ್ಯಾಸ ಪ್ರಾರಂಭಿಸಿದರು. ಅಲ್ಲಿ L.S. (Lower Secondary) ಮುಗಿಸಿ, ನಂತರ ಮುಂದಿನ ವ್ಯಾಸಂಗಕ್ಕಾಗಿ ಬೆಂಗಳೂರಿನ ಕೋಟೆ ಹೈಸ್ಕೂಲು (Fort High School)ನಲ್ಲಿ H.S.(Higher Secondary-ಈಗಿನ S.S.L.C.) ಸೇರಿದರು. ವಿದ್ಯಾಭ್ಯಾಸ ಮುಂದುವರೆಸಿದರು. ಈ ಸಮಯದಲ್ಲಿ ನರಸಿಂಹರಾಜ ಹಾಸ್ಟೆಲ್‌ನಲ್ಲಿ ಇದ್ದರು. ಹೀಗೆ ಇವರ ವಿದ್ಯಾಭ್ಯಾಸದ ಜೀವನ ನಡೆಯುತ್ತಾ ಬಂದಿತು. ತಾತ - ಅಜ್ಜಿ, ತಂದೆ - ತಾಯಿ, ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಂತೆ ಬಾಲ್ಯದಲ್ಲೇ ಒಳ್ಳೆಯತನವನ್ನು, ಸುಸಂಸ್ಕೃತಿಯನ್ನು ಮೈಗೂಡಿಸಿಕೊಂಡು R.C. ರವರು ಬೆಳೆದರು.

ಒಂದು ಸಲ ಬೈಸೈಕಲ್‌ನಲ್ಲಿ R.C.ರವರು ಮತ್ತು ಚಿಕ್ಕಹನುಮಂತಯ್ಯನವರು (R.C. ಅವರ ಹತ್ತಿರದ ಸಂಬಂಧಿ) ಬೆಂಗಳೂರಿನಿಂದ ದೊಡ್ಡಬಳ್ಳಾಪುರ ಮಾರ್ಗವಾಗಿ ಕೊರಟಗೆರೆಗೆ ಬರಬೇಕೆಂದು ಹೊರಟರು. ಈ ಮಾರ್ಗದಲ್ಲಿ ಒಂದು ದೊಡ್ಡ ಕಾಡು ಇದೆ. ಇದನ್ನು ದಾಟಿ

ಬರಬೇಕಿತ್ತು. ಮಾರಿಕಣಿವೆಯ ಹತ್ತಿರ ಬರುವಾಗ ಕಾಡುಗಳ್ಳರು ಮಚ್ಚು ಹಿಡಿದುಕೊಂಡು ಇವರನ್ನು ಅಟ್ಟಿಸಿಕೊಂಡು ಬಂದರಂತೆ. ಆಗ ಇವರಿಬ್ಬರೂ ವೇಗವಾಗಿ ಬೈಸೈಕಲ್ ತುಳಿಯುತ್ತಾ ಕಾಡು ಬಿಡುವ ತನಕ ಹಿಂದೆ ತಿರುಗಿ ನೋಡದೆ ಬಂದುಬಿಟ್ಟರಂತೆ. ಕಾಡು ದಾಟಿದ ಮೇಲೆ ಹಿಂದೆ ತಿರುಗಿ ನೋಡಿದರೆ, ಇವರಿಬ್ಬರೂ ಬೇರೆಯಾಗಿದ್ದರು. ಅಷ್ಟರಲ್ಲಿ ಬೈಸೈಕಲ್‌ನ ಟೈರ್ ಪಂಚರ್ ಆಗಿತ್ತು. ಮುಂದೆ ಸಿಕ್ಕ ಒಂದು ಹಳ್ಳಿಯಲ್ಲಿ ಪಂಚರ್ ಹಾಕಿಸಿಕೊಂಡು ಮನೆಯನ್ನು ತಲುಪಿದರಂತೆ. ಈ ಘಟನೆಯನ್ನು R.C. ರವರು ಮನೆಯಲ್ಲಿ ಹೇಳಿದರಂತೆ. ಆಗ ಅವರ ತಾತ – ಅಜ್ಜಿ, ತಂದೆ – ತಾಯಿ ಗಾಬರಿಗೊಂಡು ಇನ್ನು ಮುಂದೆ ಇಂತಹ ಘಟನೆ ಆಗಬಾರದೆಂದು ಬೆಂಗಳೂರಿಗೆ ಮತ್ತೆ ಕಳುಹಿಸಲಿಲ್ಲವಂತೆ. ಇಲ್ಲಿಗೆ R.C. ರವರ ವಿದ್ಯಾಭ್ಯಾಸ ಮುಗಿಯಿತು.

❖

5. R.C. ರವರ ಮದುವೆಯ ದಿನಗಳು ಹಾಗೂ ತುಮಕೂರಿನ ಕುಲುಮೆ ಚಿಕ್ಕಣ್ಣ(M.R.A)ನವರ ಔದಾರ್ಯತೆ.

ವಿದ್ಯಾಭ್ಯಾಸದ ನಂತರ R.C.ರವರು ಹಳ್ಳಿಗಳಲ್ಲಿ ಬಾವಿಯನ್ನು ತೆಗೆಸುವ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು. ಹಳ್ಳಿಗಳನ್ನು ಬೈಸೈಕಲ್‌ನಲ್ಲಿ ಸುತ್ತಿ ಕೆಲಸ ಮಾಡಿಸುತ್ತಿದ್ದರು. ನಂತರ ತುಮಕೂರಿನಲ್ಲಿ ಗುಮಾಸ್ತರಾಗಿ ಕೆಲಸ ಮಾಡಿದರು.

ಅವರ ತಾರುಣ್ಯದಲ್ಲಿ, ಸೋದರತ್ತೆಯ ಮಗಳಾದ ಚಿಕ್ಕರಂಗಮ್ಮನೊಂದಿಗೆ ಬಲವಂತವಾಗಿ ಮದುವೆ ಮಾಡಿಸಿದರು. ಈ ಸಂಬಂಧ R.C.ರವರಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಅದಕ್ಕೆ ಅವರು ಒಂದು ದಿನ ಸಹ ಆ ಹುಡುಗಿಯನ್ನು ನೋಡದೆ, ಅವಳ ಜೊತೆ ಮಾತನ್ನೂ ಸಹ ಆಡದೆ ಒಂದು ವರ್ಷ ಕಳೆದರಂತೆ. ಮನಸ್ಸಿಗೆ ತುಂಬಾ ಬೇಜಾರಾಗಿ ಊರು ಬಿಡುವುದಾಗಿ ತಾಯಿಯ ಹತ್ತಿರ ಹೇಳಿಕೊಂಡರು. ಅದಕ್ಕೆ ಅವರ ತಾಯಿ ಸಮಾಧಾನದ ಮಾತನಾಡಿ ನ್ಯಾಯಬದ್ಧವಾಗಿ ಈ ಸಂಬಂಧದಿಂದ ಬಿಡುಗಡೆಗೊಳಿಸಿ ಆ ಹೆಣ್ಣುಮಗಳಿಗೂ ಅನ್ಯಾಯವಾಗದಂತೆ ಮತ್ತೊಂದು ಮದುವೆ ಮಾಡಿಸಿದರು. ನಂತರ R.C.ರವರಿಗೂ ಮತ್ತೊಂದು ಮದುವೆ ಮಾಡಿಸಿದರು.

ಆ ಹುಡುಗಿ, ಅಂದರೆ ನಮ್ಮ ತಾಯಿ **ದೊಡ್ಡನರಸಮ್ಮ**. ಇವರು ಅಂದಿನ ಕಾಲದಲ್ಲಿ ಅರಮನೆ ಮೆಂಬರ್ ಆಗಿದ್ದ ತುಮಕೂರಿನ ಕುಲುಮೆ ಚಿಕ್ಕಣ್ಣನವರ ತಮ್ಮ ದೊಡ್ಡೇರಿ ಹನುಮಂತಪ್ಪನವರ ದೊಡ್ಡ ಮಗಳು.

ದೊಡ್ಡೇರಿ ಹನುಮಂತಪ್ಪನವರಿಗೆ 5 ಜನ ಅಣ್ಣ ತಮ್ಮಂದಿರು, ಅವರಲ್ಲಿ ಕುಲುಮೆ ಚಿಕ್ಕಣ್ಣ ದೊಡ್ಡವರು. ದೊಡ್ಡೇರಿ ಹನುಮಂತಪ್ಪ ಎರಡನೆಯವರು, ಈ ಆರು ಜನ ಅಣ್ಣ ತಮ್ಮಂದಿರಲ್ಲಿ ನಮ್ಮ ತಾಯಿ ದೊಡ್ಡ ನರಸಮ್ಮನವರೇ ದೊಡ್ಡ ಮಗಳು.

ನಮ್ಮ ತಾಯಿಯ ದೊಡ್ಡಪ್ಪನಾದ ತುಮಕೂರಿನ ಕುಲುಮೆ ಚಿಕ್ಕಣ್ಣನವರು ಮೈಸೂರಿನ ಅರಮನೆ ಮೆಂಬರ್ *Member of Representative Assembly* (M.R.A) ಆಗಿದ್ದರು. R.C.ರವರು ಇವರಿಗೆ ದೊಡ್ಡ ಅಳಿಯ ಹಾಗೂ ವಿದ್ಯಾವಂತರಾಗಿದ್ದರಿಂದ ಅರಮನೆ ಮೆಂಬರ್ ಸ್ಥಾನವನ್ನು R.C.ರವರಿಗೆ ಬಿಟ್ಟುಕೊಟ್ಟರು. ಇಲ್ಲಿಂದ R.C.ರವರ ರಾಜಕೀಯ ಜೀವನ ಪ್ರಾರಂಭವಾಯಿತು. ಇದಕ್ಕೆ ನಮ್ಮ ತಾಯಿಯ ದೊಡ್ಡಪ್ಪ ಕುಲುಮೆ ಚಿಕ್ಕಣ್ಣನವರ ಔದಾರ್ಯವೇ ಕಾರಣವಾಯಿತು.

ನಮ್ಮ ತಾಯಿಯವರು ಹಳ್ಳಿಯಲ್ಲಿ ಬೆಳೆದವರು, ಓದಿರಲಿಲ್ಲ. ಆದರೂ ಗಂಡನಿಗೆ ತಕ್ಕ ಹೆಂಡತಿಯಾಗಿ ಅವರು ಹೇಳಿದ್ದನ್ನು ಪಾಲಿಸಿಕೊಂಡು ಬಂದರು. ಇವರು ಮಹಾಧೈವಭಕ್ತೆ, ದೇಶಭಕ್ತೆ, ದೊಡ್ಡವರಿಗೆ ಗೌರವ ಕೊಡುವುದು, ಇದೆಲ್ಲಾ ಗುಣಗಳು ಇವರಿಗೆ ದೊಡ್ಡ ಕುಟುಂಬದಲ್ಲಿ ಬೆಳೆದಿದ್ದರಿಂದ ಸಹಜವಾಗಿ ಬಂದಿತ್ತು. R.C.ರವರ ದೊಡ್ಡ ಕುಟುಂಬದ ಸೊಸೆಯಾಗಿ ಯಾರಿಗೂ ತೊಂದರೆ ಆಗದ ಹಾಗೆ, ಎಲ್ಲರಲ್ಲೂ ಒಂದಾಗಿ ಬಾಳಿದರು. ಭಾವ, ಮೈದುನ ಮತ್ತು ನಾದಿನಿಯರ ಮಕ್ಕಳನ್ನೂ ತಮ್ಮ ಮಕ್ಕಳಂತೆ, ಮನೆಯಲ್ಲಿ ಇಟ್ಟುಕೊಂಡು ಸಾಕಿದರು. ಇವರು ಮಂತ್ರಿಯ ಹೆಂಡತಿಯಾದರೂ ಸಹ ಒಂದು ದಿನವೂ ಜಂಭ ಪಟ್ಟವರಲ್ಲ. ಆಳುಗಳು ಇದ್ದರೂ ಸಹ ಜೊತೆಯಲ್ಲಿ ಎಲ್ಲಾ ಕೆಲಸ ಮಾಡುತ್ತಿದ್ದರು. ಅವರ ಕೈ ಅಡಿಗೆ ರುಚಿ ತುಂಬಾ ಚೆನ್ನಾಗಿ ಇರುತಿತ್ತು. ಆಗಿನ ಮಂತ್ರಿಗಳು, ಅಧಿಕಾರಿಗಳು, ಎಲ್ಲರೂ ನಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದರು. "ಅಮ್ಮನವರು

ಅಡಿಗೆ ಮಾಡಿದರೆ ಸಾಕು. ಅವರ ತರಹ ಅಡಿಗೆ ಮಾಡಲು ಯಾರಿಗೂ ಸಾಧ್ಯವಿಲ್ಲ" ಎಂದು ಹೇಳುತ್ತಿದ್ದರು. ಎಷ್ಟು ಜನ ಊಟಕ್ಕೆ ಬಂದರೂ ಬೇಜಾರು ಮಾಡಿಕೊಳ್ಳದೆ, ಬಂದವರಿಗೆಲ್ಲಾ ಹೊಟ್ಟೆ ತುಂಬಾ ಊಟ, ತಿಂಡಿ ಮಾಡಿಕೊಡುತ್ತಿದ್ದರು.

R.C.ರವರ ದಾಂಪತ್ಯ ಜೀವನ ತುಂಬಾ ಚೆನ್ನಾಗಿ ಬೆಳೆಯಿತು. ಇವರಿಗೆ 10 ಮಕ್ಕಳು ಜನಿಸಿದರು. ಅವರಲ್ಲಿ ಇಬ್ಬರು ಮಕ್ಕಳು ತೀರಿಕೊಂಡು 8 ಜನ ಮಾತ್ರ ಉಳಿದರು.


ಇವರಲ್ಲಿ ಹಿರಿಯ ಮಗ ಗೋವಿಂದರಾಜು (ರಾಜವರ್ಧನ್) ಇವರು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ಅವರ ಕಾಲದಲ್ಲಿ LIDKAR Chairman ಆಗಿ ಕೆಲವು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ನಂತರ ತುಮಕೂರು ಜಿಲ್ಲೆಯ ಮಧುಗಿರಿ ವಿಧಾನಸಭಾ ಕ್ಷೇತ್ರದಿಂದ 'ಕ್ರಾಂತಿ ರಂಗ' ಪಕ್ಷದಿಂದ ಆಯ್ಕೆಯಾಗಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಸಮಾಜ ಕಲ್ಯಾಣ ಹಾಗೂ ಮೀನುಗಾರಿಕೆ ಖಾತೆಗಳಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿ ರಾಜ್ಯಕ್ಕೆ ಸೇವೆ ಸಲ್ಲಿಸಿದರು ಹಾಗೂ ಕೆಲವು ತಿಂಗಳುಗಳ ಕಾಲ Chief Vip ಆಗಿ ಕಾರ್ಯ ನಿರ್ವಹಿಸಿದರು. ನಂತರ *Foot Designing Development Institute* (FDDI) Chairman ಆಗಿ ಕಾರ್ಯ ನಿರ್ವಹಿಸಿದರು.

❖



R.C.ರವರ ಎಂಟು ಜನ ಮಕ್ಕಳು-ಎಡದಿಂದ ಬಲಕ್ಕೆ, ಶಿವರಾಮ್, ನರಸಿಂಹಯ್ಯ, ಗೋವಿಂದರಾಜು.
ಲೀಲಮ್ಮ, ಶಾರದಮ್ಮ, ವಿಜಯಲಕ್ಷ್ಮಿ, ಅರುಂಧತಿ, ಶಾಂತಕುಮಾರಿ

6. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹಸ್ತದಿಂದ ಮಾಗಡಿ ರಸ್ತೆಯಲ್ಲಿರುವ ಬಾಪೂಜಿ ಹಾಸ್ಟೆಲ್‌ನ ಶಂಕುಸ್ಥಾಪನೆ



ಸ್ವತಂತ್ರ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಸ್ವತಂತ್ರ ಚಳುವಳಿ ಹೋರಾಟಕ್ಕಾಗಿ ದೇಶದಾದ್ಯಂತ ಪ್ರವಾಸ ಕೈಗೊಂಡಿದ್ದಂತಹ ಸಮಯದಲ್ಲಿ 1930ರಲ್ಲಿ ಮೈಸೂರಿಗೂ ಬಂದಿದ್ದರು. ಆ ಸಮಯದಲ್ಲಿ ನಮ್ಮ ತಂದೆಯವರು ಮೈಸೂರು ರಾಜ್ಯ ಹರಿಜನ ಸೇವಕ ಮತ್ತು ಆದಿಜಾಂಬವಾಭಿವೃದ್ಧಿ ಸಂಘದ ಪ್ರತಿನಿಧಿಯಾಗಿ ಗಾಂಧೀಜಿಯವರನ್ನು ಭೇಟಿ ಮಾಡಿ ಆದಿಜಾಂಬವ ವಿದ್ಯಾರ್ಥಿ ನಿಲಯ, ಮಾಗಡಿ ರಸ್ತೆ ಇದರ ಶಂಕುಸ್ಥಾಪನೆ ಮಾಡಬೇಕೆಂದು ಕೋರಿಕೊಂಡರು. ಅದಕ್ಕೆ ಬಾಪೂಜಿಯವರು ಒಪ್ಪಿದರು. ಇಂದಿನ ಮಾಗಡಿ ರಸ್ತೆಯಲ್ಲಿರುವ ಆದಿಜಾಂಬವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನು ಗಾಂಧೀಜಿಯವರ ಅಮೃತ ಹಸ್ತದಿಂದ ನಮ್ಮ ತಂದೆಯವರು ಮಾಡಿಸಿದರು. ಆದ್ದರಿಂದ ಈ ವಿದ್ಯಾರ್ಥಿ ನಿಲಯಕ್ಕೆ 'ಬಾಪೂಜಿ ಹಾಸ್ಟೆಲ್' ಎಂದು ಹೆಸರಿಡಲಾಯಿತು. ಈಗಲೂ ಅದು ಇದೇ ಹೆಸರಿನಲ್ಲಿ ಮುಂದುವರೆಯುತ್ತಾ ಇದೆ. ❖

ಮಗಳ ನೆನಪಿನಾಳದಲ್ಲಿ R.C. / 20

7. R.C. ರವರ ಆಪ್ತ ಸ್ನೇಹಿತರು ಮತ್ತು ರಾಜಕೀಯ ಗುರು–ದೊಡ್ಡ ಸಿದ್ದವನಹಳ್ಳಿ ಆಟದ ಪೆನ್ನಯ್ಯನವರು (M.R.A).



R.C.ರವರು ಮತ್ತು ದೊಡ್ಡ ಸಿದ್ದವನಹಳ್ಳಿ ಆಟದ ಪೆನ್ನಯ್ಯನವರು


ಶ್ರೀಮಾನ್ ಆಟದ ಪೆನ್ನಯ್ಯನವರು ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವನಹಳ್ಳಿಯಲ್ಲಿ ಹರಿಜನ ಪಿತಾಮಹ ಎನಿಸಿಕೊಂಡಿದ್ದರು. ಆಟದ ಪೆನ್ನಯ್ಯನವರು, ನನ್ನ ತಾತ ಗುಬ್ಬಿ ತಾತಯ್ಯನವರು ಹಾಗೂ ನಮ್ಮ ತಾಯಿಯ ದೊಡ್ಡಪ್ಪ ಕುಲುಮೆ ಚಿಕ್ಕಣ್ಣನವರು ಸಮಕಾಲೀನರು. ಆಟದ ಪೆನ್ನಯ್ಯನವರಿಗೆ ಮುರುಗ ರಾಜೇಂದ್ರ ಮಠದ ಸ್ವಾಮಿಗಳಿಂದ ದೀಕ್ಷೆಯಾಗಿದ್ದರೆ, ನಮ್ಮ ತಾತ ಗುಬ್ಬಿ ತಾತಯ್ಯನವರಿಗೆ ಸಿದ್ಧರ ಬೆಟ್ಟದ ಗುರುಗಳಿಂದ ದೀಕ್ಷೆಯಾಗಿತ್ತು. ಆದ್ದರಿಂದ ಇವರಿಬ್ಬರೂ ಒಟ್ಟಾಗಿ ಸೇರಿದ ಸಮಯದಲೆಲ್ಲಾ ಲೀಲಾಜಾಲವಾಗಿ ಪಾರಮಾರ್ಥಿಕ ವಿಷಯಗಳನ್ನು ಬಹಳ ಆಸಕ್ತಿಯಿಂದ ಚರ್ಚಿಸುತ್ತಾ ತಲ್ಲೀನರಾಗುತ್ತಿದ್ದರು. ಚಿಕ್ಕವಳಾಗಿದ್ದ ನನಗೆ ಈ ವಿಷಯಗಳು ಅರ್ಥವಾಗುತ್ತಿರಲಿಲ್ಲ. ಆದರೆ ಒಂದಂತೂ ಗಮನಿಸಿದ್ದು ನಿಜ, ಇವರಿಬ್ಬರ ಸ್ನೇಹ ಎಷ್ಟಿತ್ತೆಂದರೆ, ಮುಂದೆ ಅದು ಸಂಬಂಧವಾಗಿ ಬೆಳೆಯಿತು. ಈ ಇಬ್ಬರು ಹಿರಿಯರು ನಮ್ಮ ತಂದೆಯವರನ್ನು ಒಪ್ಪಿಸಿ, ಆಟದ ಪೆನ್ನಯ್ಯನವರ ಎರಡನೇ ಮಗ ಡಾ.ಜಯಶಂಕರಪ್ಪನವರನ್ನು ನನ್ನ ಜೊತೆ ವಿವಾಹ ಮಾಡಿಸಿದರು. ಈ ಎರಡೂ ಕುಟುಂಬಗಳಲ್ಲಿ ಪ್ರೀತಿ ಮತ್ತು ವಿಶ್ವಾಸ ಸಮನಾಗಿ ಇದ್ದವು. ಆರ್ಥಿಕ ಸ್ಥಿತಿಗತಿಯಲ್ಲಿ ವ್ಯತ್ಯಾಸ ಇದ್ದರೂ, ನನ್ನ ತಾಯಿ ದೊಡ್ಡನರಸಮ್ಮ ಮತ್ತು ನನ್ನ ತಂದೆ R.C.ರವರ ಮಾರ್ಗದರ್ಶನದಲ್ಲಿ ಬೆಳೆದ ನಾನು ಆಟದ ಪೆನ್ನಯ್ಯನವರ ಕುಟುಂಬಕ್ಕೆ ಸೊಸೆಯಾಗಿ ಹೋಗಿ ಮಗಳಾಗಿ ನೆಲೆಸಿದೆ.

ಆಟದ ಪೆನ್ನಯ್ಯ ಹಾಗೂ ನಮ್ಮ ತಂದೆ R.C. ಅವರು ಒಂದೇ ಕಾಲಕ್ಕೆ ಮೈಸೂರು ರಾಜ್ಯದ M.R.A. ಆಗಿದ್ದಂತಹವರು. ಇವರಿಬ್ಬರಿಗೂ 35–40 ವರ್ಷಗಳ ವಯಸ್ಸಿನ ಅಂತರವಿತ್ತು. ಆಟದ ಪೆನ್ನಯ್ಯನವರು ವಯಸ್ಸಿನಲ್ಲಿ ಹಿರಿಯರು. ನಮ್ಮ ತಂದೆಯವರ ರಾಜಕೀಯ ಹಾಗೂ ವೈಯುಕ್ತಿಕ ಬೆಳವಣಿಗೆಗಳಲ್ಲಿ ಗುಬ್ಬಿ ತಾತ, ಆಟದ ಪೆನ್ನಯ್ಯನವರು

ಮತ್ತು ಕುಲುಮೆ ಚಿಕ್ಕಣ್ಣ ಇವರ ಪಾತ್ರ ಬಹಳ ದೊಡ್ಡದು. ಆದಕಾರಣ ಆಟದ ಪೆನ್ನಯ್ಯನವರ ವ್ಯಕ್ತಿತ್ವದ ಸಂಕ್ಷಿಪ್ತ ಪರಿಚಯ ಇಲ್ಲಿ ಹೇಳಬಯಸುತ್ತೇನೆ.

ಆಟದ ಪೆನ್ನಯ್ಯನವರು ಬಯಲು ನಾಟಕ, ಸಂಗೀತ ಹಾಗೂ ತತ್ತ್ವ ಪದಗಳಲ್ಲಿ ಬಹಳ ಹೆಸರಾಂತ ಕಲಾವಿದರು. ಇವರು **'ಕರಿಬಂಟ'** ಎಂಬ ಪಾತ್ರವನ್ನು ಬಹಳ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಇವರು ಈ ಪಾತ್ರವನ್ನು ನಿರ್ವಹಿಸುತ್ತಾರೆ ಎಂದರೆ ಸಾಕು ಅಲ್ಲಿನ ಸುತ್ತಮುತ್ತಲಿನ ಹಳ್ಳಿ ಜನರು ನಾಟಕ ನೋಡಲು ಮುಗಿ ಬಿದ್ದು ಬಂದು ಸೇರುತ್ತಿದ್ದರಂತೆ. ಚಿತ್ರದುರ್ಗ ಜಿಲ್ಲೆಯ ಕಲಾವಿದರು ಸೇರಿ, ಸಮಾರಂಭದಲ್ಲಿ ಇವರಿಗೆ ಪೆನ್ನಯ್ಯ ಎಂಬ ಹೆಸರಿಗೆ **'ಆಟದ'** ಎಂಬ ಬಿರುದು ಕೊಟ್ಟು, 'ಆಟದ ಪೆನ್ನಯ್ಯ' ಎಂದು ಕರೆಯುವಂತೆ ಮಾಡಿದ್ದಲ್ಲದೆ ಇವರ ಕಾಲಿಗೆ ಬೆಳ್ಳಿ ಕಪ್ಪ ತೊಡಿಸಿದರಂತೆ. ಆಗಿನ ಕಾಲದಲ್ಲಿ ಇವರ ಹೆಸರು ಚಿತ್ರದುರ್ಗ ಹಾಗೂ ದಾವಣಗೆರೆಯ ಸುತ್ತಮುತ್ತಲೂ ಪ್ರಖ್ಯಾತಿಯಾಗಿ ಬೆಳೆದಿತ್ತು.

ಆಟದ ಪೆನ್ನಯ್ಯನವರಿಗೆ ಸುಮಾರು 24-25 ವರ್ಷ ವಯಸ್ಸು ಆಗಿರಬಹುದು. ಆ ಸಮಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರವರ ಪಟ್ಟಶಿಷ್ಯ, ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದು ಪ್ರಭಾವಿತ ಪ್ರವಚನ ನೀಡಿದ್ದರು. ಈ ಪ್ರವಚನವನ್ನು ಕೇಳಿದ ಆಟದ ಪೆನ್ನಯ್ಯನವರ ಮನಸ್ಸಿನ ಮೇಲೆ ಹಾಗೂ ಅವರ ಮುಂದಿನ ಜೀವನದ ಮೇಲೆ ಬಹಳ ಪ್ರಭಾವ ಬೀರಿತು.



ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸ್ವತಂತ್ರ ಚಳುವಳಿ ಹೋರಾಟಕ್ಕಾಗಿ ದೇಶದಾದ್ಯಂತ ಪ್ರವಾಸ ಕೈಗೊಂಡಿದ್ದ ಸಮಯ. ಚಿತ್ರದುರ್ಗ-ದಾವಣಗೆರೆಗೆ ಬಂದಾಗ ಆಟದ ಪೆನ್ನಯ್ಯನವರು ಇವರನ್ನು ಭೇಟಿ ಮಾಡಿ **"ನಾನು, ಹರಿಜನ ಮತ್ತು ಹಿಂದುಳಿದ ಜನರಿಗೆ ಒಳ್ಳೆಯ ದಾರಿ ತೋರಿಸುವ ಸಲುವಾಗಿ ಕೆಲಸ ಮಾಡುತ್ತಿದ್ದೇನೆ, ನಿಮ್ಮ ಸಹಕಾರ ಹಾಗೂ ಮಾರ್ಗದರ್ಶನ ನೀಡಬೇಕು"** ಎಂದು ಕೇಳಿಕೊಂಡರಂತೆ. ಅದಕ್ಕೆ ಗಾಂಧೀಜಿಯವರು **"ನೀನು ಕಷ್ಟಪಟ್ಟು ಸಣ್ಣ ಕಾರ್ಖಾನೆಯನ್ನು ಪ್ರಾರಂಭ ಮಾಡು"** ಎಂದು ಹೇಳಿ ಒಂದು ಬೊಗಸೆ ತುಂಬಾ ಕಾಸಿನ ನಾಣ್ಯವನ್ನು ಕೊಟ್ಟು ಆಟದ ಪೆನ್ನಯ್ಯನವರನ್ನು ಆಶೀರ್ವದಿಸಿದರಂತೆ. ಅದರಂತೆ ಆಟದ ಪೆನ್ನಯ್ಯನವರು ಚಿತ್ರದುರ್ಗ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಚರಕದಿಂದ ನೂಲು ತೆಗೆಯುವುದು, ಬಟ್ಟೆಗೆ ಕಾಜಾ ಗುಂಡಿ ತಯಾರಿಸುವುದು ಹೀಗೆ ಸಣ್ಣ ಸಣ್ಣ ಕಾರ್ಖಾನೆಗಳನ್ನು ಪ್ರಾರಂಭಿಸಿದರಂತೆ. ಹಿಂದುಳಿದ ಹಾಗೂ ಹರಿಜನರ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ನೀಡಿದರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಹರಿಜನ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಹಳ್ಳಿ ಹಳ್ಳಿಗೆ ಹೋಗಿ ರೈತರಿಂದ ಧವಸ ಧಾನ್ಯಗಳನ್ನು ಶೇಖರಿಸಿ ವಿದ್ಯಾರ್ಥಿ ನಿಲಯದಲ್ಲಿ ಅನ್ನ ದಾಸೋಹ ನಡೆಸುತ್ತಿದ್ದರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಹರಿಜನರ ಕ್ಷೇಮಾಭಿವೃದ್ಧಿಗೆ ಹಗಲು ರಾತ್ರಿ ಶ್ರಮಿಸುತ್ತಿದ್ದರು. ಇವರ ಇಂತಹ ವಿಚಾರಗಳನ್ನು ಗಮನಿಸಿದ R.C. ಯವರು ಆಟದ ಪೆನ್ನಯ್ಯನವರನ್ನು **'ನನ್ನ ರಾಜಕೀಯ ಗುರು'** ಎಂದು ಮುಂದೆ ತಮ್ಮ ಬರಹಗಳಲ್ಲಿ ಗುರುತಿಸಿಕೊಂಡಿರುತ್ತಾರೆ. ಆದರೆ ಆಟದ ಪೆನ್ನಯ್ಯನವರು R.C.ಯವರನ್ನು **'ಸ್ವಾಮಿಯವರು'** ಎಂದು ಸಂಭೋಧಿಸುತ್ತಿದ್ದರು. ಇದು ಇವರಿಬ್ಬರ ನಡುವೆ ಇದ್ದ ಸ್ನೇಹ ಸಂಬಂಧ.

ಆಟದ ಪೆನ್ನಯ್ಯನವರು ಅನಕ್ಷರಸ್ಥರು ಆಗಿದ್ದರು. ಆದರೆ, ಅವರಿಗೆ ವಿದ್ಯಾವಂತರಾಗುವ ತೀವ್ರ ತವಕ ಎಷ್ಟಿತ್ತೆಂದರೆ ಅವರ ಜೇಷ್ಠ ಪುತ್ರಿ ಪಿ.ವಿಮಲಮ್ಮನವರನ್ನು 8 ವರ್ಷದ ವಯಸ್ಸಿನ ಬಾಲಕಿಯಾಗಿದ್ದಾಗಲೇ ದೊಡ್ಡ ಸಿದ್ದವನಹಳ್ಳಿಯಿಂದ ಬೆಂಗಳೂರಿನ ಬಸವನಗುಡಿಯಲ್ಲಿದ್ದ ಹೆಣ್ಣು ಮಕ್ಕಳ ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸಕ್ಕಾಗಿ ಬಿಟ್ಟಿದ್ದರು. ಆ ಕಾಲದಲ್ಲಿ ಆ ಎಳೆಯ ವಯಸ್ಸಿನ ಹೆಣ್ಣು ಮಗಳನ್ನು ವಿದ್ಯಾಭ್ಯಾಸಕ್ಕೆಂದು ಮನೆಯಿಂದ ದೂರ ಇರಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಇವರ ಮುಂದಾಲೋಚನೆಯ ಪರಿಣಾಮವಾಗಿ ಇವರ ನಾಲ್ಕು ಮಕ್ಕಳೂ ಮುಂದೆ ವಿದ್ಯಾವಂತರಾಗಿ ಬೆಳೆದರು.


ಆಟದ ಪೆನ್ನಯ್ಯವರಿಗೆ ಒಟ್ಟು 8 ಜನ ಮಕ್ಕಳು. 5 ಜನ ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಆದರೆ ಆಗಿನ ಕಾಲದಲ್ಲಿ ಹಳ್ಳಿಯಲ್ಲಿ ವೈದ್ಯಕೀಯ ಸೌಲಭ್ಯವಿಲ್ಲದೆ, ಮೂರು ಗಂಡು ಮಕ್ಕಳು ಹಾಗೂ ಒಂದು ಹೆಣ್ಣು ಮಗು ತೀರಿಕೊಂಡು 2 ಗಂಡು ಹಾಗೂ 2 ಹೆಣ್ಣು ಮಕ್ಕಳು ಮಾತ್ರ ಉಳಿದುಕೊಂಡವು. ಆದುದರಿಂದ ಅವರಿಗೆ ಹಳ್ಳಿಯಲ್ಲಿನ ವೈದ್ಯಕೀಯ ಸೌಲಭ್ಯದ ಅವಶ್ಯಕತೆಯ ಬಗ್ಗೆ ಅರಿವುಂಟಾಗಿ ತಮ್ಮ ಬದುಕುಳಿದ ನಾಲ್ಕೂ ಜನ ಮಕ್ಕಳನ್ನೂ ವೈದ್ಯಕೀಯ ರಂಗಕ್ಕೆ ಸೇರಿಸಿದರು. ದೊಡ್ಡ ಮಗ ಡಾ. ಎ.ಶರಣಪ್ಪ, ಸರ್ಕಾರಿ ವೈದ್ಯಕೀಯ ಕಾಲೇಜಿನ ಕ್ಷ–ಕಿರಣ (x-ray) ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರು. ಎರಡನೆಯ ಮಗ ಡಾ. ಎ.ಪಿ. ಜಯಶಂಕರಪ್ಪನವರು ಸರ್ಕಾರಿ ಆಸ್ಪತ್ರೆಯಲ್ಲಿ ನೇತ್ರ ತಜ್ಞರಾಗಿ ಸಮಾಜದ ಜವಾಬ್ದಾರಿಯುತ ನಾಗರೀಕನಾಗಿ ಬಡ ಜನರಿಗೆ ಸೇವೆ ಸಲ್ಲಿಸಿದರು. ಇಬ್ಬರು ಹೆಣ್ಣು ಮಕ್ಕಳಾದ ಪಿ. ವಿಮಲಮ್ಮ ಹಾಗೂ ಪಿ. ಜಯಮ್ಮನವರು ಸರ್ಕಾರಿ ಆಸ್ಪತ್ರೆಯ ಸ್ಟಾಫ್ ನರ್ಸ್ ಆಗಿ ಸೇವೆ ಸಲ್ಲಿಸಿದರು. ಒಂದು ಕಾಲಕ್ಕೆ ಆಟದ ಪೆನ್ನಯ್ಯನವರ ನಾಲ್ಕೂ ಜನ ಮಕ್ಕಳು ಮೈಸೂರಿನ ಸರ್ಕಾರಿ

ಸಾರ್ವಜನಿಕ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಹೀಗೆ ಇದು ಆಟದ ಪೆನ್ನಯ್ಯನವರಲ್ಲಿ ಇದ್ದ ವಿದ್ಯಾವಂತರಾಗಬೇಕೆನ್ನುವ ಹಂಬಲವನ್ನು ನೀಗಿಸುವ ಪರಿಯಲ್ಲದೆ ಮತ್ತೇನು?

ಆಟದ ಪೆನ್ನಯ್ಯನವರು ನನ್ನ ಮಾವ ಎಂಬ ಭಾವನೆಯಿಂದ ಇಷ್ಟೆಲ್ಲಾ ಅವರ ಬಗ್ಗೆ ಬರೆದಿಲ್ಲ. ಆದರೆ 108 ವರ್ಷಗಳ ಕಾಲ ಬದುಕಿದ್ದು ದಾವಣಗೆರೆಯಲ್ಲಿ ಕೊನೆ ಉಸಿರು ಎಳೆದ ಸಂದರ್ಭದಲ್ಲಿ R.C. ರವರು ನನ್ನ ಯಜಮಾನರಿಗೆ ಬರೆದ ಸಂತಾಪ ಸೂಚನಾ ಪತ್ರದಲ್ಲಿ ಈ ರೀತಿ ಬರೆದಿರುತ್ತಾರೆ. 'ನಿಮ್ಮ ತಂದೆಯವರು ಬಹಳ ಪಾರಮಾರ್ಥಿಕ ಜ್ಞಾನ ಉಳ್ಳವರು ಮತ್ತು ನನ್ನ ರಾಜಕೀಯ ಗುರು' ಎಂದು ತಮ್ಮ ಸ್ವಂತ ಬರಹಗಳಲ್ಲಿ ಗುರುತಿಸಿಕೊಂಡಿದ್ದಾರೆ. ನಮ್ಮ ತಂದೆಯವರಿಗೆ ದೊರೆತ ವಿದ್ಯಾಭ್ಯಾಸ ಬಹಳ ಕಡಿಮೆಯಾದರೂ, ಅವರ ಇಂಗ್ಲೀಷಿನ ಭಾಷೆಯ ಮೇಲಿನ ಹಿಡಿತವನ್ನು R.C. ರವರು ದಿನಾಂಕ 27–03–1972 ರಂದು ತಮ್ಮ ಸ್ವಂತ ಬರಹದಲ್ಲಿ ಬರೆದ ಪತ್ರದಲ್ಲಿ ಕಾಣಬಹುದು. ಆ ಪತ್ರವನ್ನು ಇಲ್ಲಿ ಪ್ರಕಟಿಸಿದ್ದೇನೆ.

❖

ಆಟದ ಪೆನ್ನಯ್ಯನವರು ತೀರಿಕೊಂಡಾಗ R.C.ರವರು ತಮ್ಮ ಅಳಿಯನಿಗೆ ಬರೆದ ಸಂತಾಪ ಸೂಚನಾ ಪತ್ರ



Koralagundi
27-3-72

My Dear son-in-law Dr. Jayashankar,

It gives me immense pleasure to see today in the paper the towering personality and the cheerful face of our beloved political Guru Sri Ahada Dunnappa.

~~His pleasant face~~ is as fresh in my memory as it was 30 years ago. He was a great soul which cannot be substituted by any body today. He was a dinamic personality of the good olden days who founded many institutions. I did not want to write * earlier because of the fact that my mentioning in the letter his historical

glory and greatness of this old "Gandhi Bhakta" and a great patriot of the day would increase your emotional feelings for the late soul. I know you are immersed in the ocean of sorrowful ocean and my refreshing you with these things might not be good. I tell you now that you must remember the philosophical teachings of your beloved father that this is a temporary body in which we all human beings live temporarily till there is a call from the Creator. Then we kick out this bucket and depart to a permanent peaceful world that is "Mukthi".

Now I convey my
sorrowful condolences
to all your family members
and pray the Almighty
Lord to give you the
necessary strength to bear
the sad demise with courage
and devotion to God.

I also pray God to rest the
great departed soul in
permanent peace.

Yours, father-in-law

R. [illegible]

8. R.C.ರವರ ಸೆರೆಮನೆಯಿಂದ ಅರಮನೆಗೆ ಪ್ರವೇಶ.



ಮೈಸೂರು ರಾಜ್ಯದ ಪ್ರಥಮ ಕ್ಯಾಬಿನೆಟ್ ಮಂತ್ರಿಗಳು –
ಎಡದಿಂದ ಬಲಕ್ಕೆ, ಆರ್. ಚೆನ್ನಿಗರಾಮಯ್ಯನವರು, ಹೆಚ್.ಸಿದ್ದಯ್ಯ,
ಬಿ.ಸಿ.ದಾಸಪ್ಪ, ಕೆ.ಸಿ.ರೆಡ್ಡಿಯವರು (ಮುಖ್ಯಮಂತ್ರಿಗಳು), ಕೆ.ಟಿ.ಭಾಷ್ಯಂ,
ಟಿ.ಸಿದ್ದಲಿಂಗಯ್ಯ ಹಾಗೂ ಟಿ.ಮರಿಯಪ್ಪ

ಸ್ವತಂತ್ರ ಪೂರ್ವ ದಿನಗಳಲ್ಲಿ ಕಾಲರ, ಪ್ಲೇಗು, ಖಾಯಿಲೆ ತೀವ್ರವಾಗಿದ್ದರಿಂದ ಜನರೆಲ್ಲಾ ಊರು ಬಿಟ್ಟು, ಜಮೀನುಗಳಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರು. ಆಗ ನಮ್ಮ ತಂದೆಯವರೂ ಸಹ ಊರಿನ ಆಚೆ ಜಮೀನಿನ ಹತ್ತಿರ ಮನೆ ಕಟ್ಟಿಕೊಂಡು ಸುಮಾರು ವರ್ಷಗ್ಳ ಕಾಲ ವಾಸವಾಗಿದ್ದರು. ದಿನ ನಿತ್ಯ ಮನೆಯಲ್ಲಿ ಬಳಸುವ ಸಾಮಾನುಗಳನ್ನು ತರಬೇಕಾದರೂ ಊರಿಗೆ ಬರಬೇಕಿತ್ತು. ಮನೆಯಿಂದ ಪೇಟೆಗೆ 2-3 ಕಿಲೊಮೀಟರ್ ದೂರ ನಡೆದು ಅಥವಾ ಬೈಸೈಕಲ್‌ನಲ್ಲಿ ಇಲ್ಲವೆ ಎತ್ತಿನ ಗಾಡಿ ಕಟ್ಟಿಕೊಂಡು ಹೋಗಿ ಬರಬೇಕಾಗುತ್ತಿತ್ತು.

ಆ ದಿನಗಳಲ್ಲಿ ದೇಶವಿಡೀ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿತ್ತು. ನಮ್ಮ ತಂದೆಯವರು ಸಹ ಕೊರಟಗೆರೆ ತಾಲ್ಲೂಕು ಹಾಗೂ ತುಮಕೂರು ಜಿಲ್ಲೆಯಲ್ಲಿ ದೇಶದ ಸ್ವತಂತ್ರ್ಯಕ್ಕಾಗಿ ಜನಗಳನ್ನು ಗುಂಪು ಕಟ್ಟಿಕೊಂಡು ಗಾಂಧೀಜಿಯವರ ಆದರ್ಶದಂತೆ ಹೋರಾಟ ನಡೆಸುತ್ತಿದ್ದರು.

1947ರ ಸಂದರ್ಭ ನಮ್ಮ ತಂದೆಯವರು ಒಂದು ದಿನ ಬ್ಯಾಗು ಹಿಡಿದು ಸಾಮಾನು ತರುವುದಾಗಿ ಹೇಳಿ ಬೆಳಿಗ್ಗೆ ಅಂಗಡಿಗೆ ಹೋದರು. ಅಂಗಡಿಯಲ್ಲಿ ಇನ್ನೂ ವ್ಯಾಪಾರ ಮಾಡಿರಲಿಲ್ಲ. ಅಷ್ಟರಲ್ಲಿ ಇವರನ್ನು ಪೋಲಿಸರು ಬಂಧಿಸಿ ಕೊರಟಗೆರೆಯ ಜೈಲಿನಲ್ಲಿ ಹಾಕಿದರು. ಸ್ಕೂಲ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದ ನಮ್ಮ ತಾತ ರಾಮಹನುಮಯ್ಯ ನವರಿಗೆ ಊರಿನವರು ಸುದ್ದಿ ಮುಟ್ಟಿಸಿದರು. ತಕ್ಷಣ ನಮ್ಮ ತಾತ ನಮ್ಮನ್ನು ಅಂದರೆ ನನ್ನ ದೊಡ್ಡ ಅಣ್ಣ ಗೋವಿಂದರಾಜು, ನನ್ನ ಅಕ್ಕ ಲೀಲಮ್ಮ, 5 ವರ್ಷದ ನಾನು ಮತ್ತು 2 ವರ್ಷದ ನನ್ನ ತಮ್ಮ ನರಸಿಂಹಯ್ಯನನ್ನು ಕೈಯಲ್ಲಿ ಎತ್ತಿಕೊಂಡು ಕೊರಟಗೆರೆ ಜೈಲಿನ ಹತ್ತಿರ ಮದ್ಯಾಹ್ನದ ಉರಿಬಿಸಿಲಿನಲ್ಲಿ 2-3 ಕಿಲೋಮೀಟರ್ ನಡೆಸಿಕೊಂಡು ಬಂದರು. ನಾವು ಹೋಗುವುದಕ್ಕೆ ಸ್ವಲ್ಪ ಮುಂಚೆ, ನಮ್ಮ ತಂದೆಯವರನ್ನು ಪೋಲಿಸ್ ವ್ಯಾನಿನಲ್ಲಿ ಕರೆದುಕೊಂಡು, ತುಮಕೂರಿನ ಜೈಲಿಗೆ

ಹೋಗಿದ್ದರು ಎಂದು ಅಲ್ಲಿದ್ದವರು ಹೇಳಿದರು. ಗುಬ್ಬಿ ತಾತಾ ಮತ್ತು ನಾವು ನಾಲ್ಕು ಜನ ಮಕ್ಕಳು, ಅಪ್ಪನನ್ನು ನೋಡಬೇಕು ಎಂದು ಅಳುತ್ತಾ ಮನೆಗೆ ಹಿಂದಿರುಗಿದೆವು. ಈ ಸಂದರ್ಭವೂ ನಮ್ಮ ಜೀವನದಲ್ಲೇ ಮರೆಯಲಾಗದ ದಿನ. ಆ ದಿನದಂದು ನಮ್ಮ ಮನೆಯಲ್ಲಿ ಸ್ಮಶಾನದ ವಾತಾವರಣ ಸೃಷ್ಟಿಯಾಗಿತ್ತು. ಈ ನೋವಿನ ದಿನವನ್ನು ನನ್ನಿಂದ ಯಾವ ಪದಗಳಿಂದಲೂ ವರ್ಣಿಸಲು ಸಾಧ್ಯವಾಗುವುದಿಲ್ಲ.


ನನ್ನ ದೊಡ್ಡ ಅಣ್ಣ ಗೋವಿಂದರಾಜು, ಹಠ ಮಾಡಿ, ಯಾರಿಗೂ ಹೇಳದೆ ಉಟ್ಟ ಬಟ್ಟೆಯಲ್ಲಿ ತುಮಕೂರಿನ ಜೈಲಿಗೆ ಹೋಗಿ ತಂದೆಯವರನ್ನು ವಿಚಾರಿಸಿದಾಗ, ಅಲ್ಲಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋಗಿದ್ದಾರೆ, ಎಂದು ಹೇಳಿದರಂತೆ. ತುಮಕೂರಿನಿಂದ ರೈಲಿನಲ್ಲಿ ಬೆಂಗಳೂರಿಗೆ ಬಂದು, ಬೆಂಗಳೂರಿನ ರೈಲ್ವೇ ಸ್ಟೇಷನ್‌ನಲ್ಲಿ ಕೆಲಸದಲ್ಲಿದ್ದ ನಮ್ಮ ಮಾವ ಮುದ್ದುರಾಮಯ್ಯನವರನ್ನು ಕಂಡರು. ನಮ್ಮ ಅಣ್ಣನ ಅವಸ್ಥೆಯನ್ನು ನೋಡಿ ತುಂಬಾ ಬೇಜಾರು ಮಾಡಿಕೊಂಡು, ಮನೆಗೆ ಕರೆದುಕೊಂಡು ಹೋಗಿ ಹೊಸ ಬಟ್ಟೆ ಕೊಡಿಸಿ, ಊಟ ಮಾಡಿಸಿ, ಸಮಾಧಾನ ಮಾಡಿ, ಆಮೇಲೆ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿದ್ದ ನಮ್ಮ ತಂದೆಯವರನ್ನು ತೋರಿಸಿಕೊಂಡು ಬಂದರಂತೆ. ಇಲ್ಲಿ ಊರಿನಲ್ಲಿ ಎಲ್ಲರಿಗೂ ಗಾಬರಿಯಾಗಿ ನಮ್ಮ ಅಣ್ಣನನ್ನು ಹುಡುಕುತ್ತಿದ್ದರು. ಆಗ ನಮ್ಮ ಮುದ್ದುರಾಮಯ್ಯ ಮಾವನವರು ತಮ್ಮ ಪರಿಚಯದವರೊಂದಿಗೆ ಗೋವಿಂದರಾಜು ಇಲ್ಲಿ ಬೆಂಗಳೂರಿನಲ್ಲಿ ನನ್ನ ಹತ್ತಿರ ಸುರಕ್ಷಿತವಾಗಿದ್ದಾನೆ, ಗಾಬರಿ ಆಗಬೇಡಿ ಎಂದು ಹೇಳಿ ಕಳುಹಿಸಿದರು.

ನಮ್ಮ ತಾತಾ ಬೆಂಗಳೂರಿಗೆ ಬಂದು ಸೆಂಟ್ರಲ್ ಜೈಲಿನಲ್ಲಿದ್ದ ನಮ್ಮ ತಂದೆಯುವರನ್ನು, ನೋಡಿದಾಗ, ಖಾಯಿಲೆಯಿಂದ ತುಂಬಾ ಸುಸ್ತಾಗಿದ್ದನ್ನು ನೋಡಿ, "ನನಗೆ ನೀನು ಒಬ್ಬನೇ ಮಗ ಮನೆಗೆ ಬಂದು ಬಿಡು" ಎಂದು ಕರೆದರಂತೆ. ಜೈಲಿನಲ್ಲಿದ್ದ ಸ್ನೇಹಿತರೂ ಕೂಡ "ಕ್ಷಮಾಪಣ

ಪತ್ರ ಬರೆದುಕೊಟ್ಟು ಹೋಗಿ" ಎಂದು ಹೇಳಿದರಂತೆ. ಆದರೆ, ನಮ್ಮ ತಂದೆಯವರು **"ನಾನು ಸ್ವತಂತ್ರ ಹೋರಾಟಕ್ಕಾಗಿ ಬಂದಿರುವೆ. ಸ್ವತಂತ್ರ ಸಿಗುವ ತನಕ ಬರುವುದಿಲ್ಲ. ಜೈಲಿನಲ್ಲೇ ದೇಶಕ್ಕೋಸ್ಕರ ಪ್ರಾಣ ಬಿಡಲು ಸಿದ್ಧವಾಗಿ ಇದ್ದೇನೆ. ನೀವು ಮೊಮ್ಮಕ್ಕಳನ್ನು ನೋಡಿಕೊಳ್ಳಿ. ಹೋರಾಟದಲ್ಲಿ ಪ್ರಾಣ ಉಳಿದರೆ ಗೆದ್ದು ಮನೆಗೆ ಬರುತ್ತೇನೆ"** ಎಂದು ನಮ್ಮ ತಾತನವರಿಗೆ ಹೇಳಿ ಕಳುಹಿಸಿದರಂತೆ. ಅವರ ಆ ಭರವಸೆಯ ಮಾತಿನಂತೆ ಸ್ವತಂತ್ರ ಸಿಕ್ಕಿತು. ಹರಿಜನರ ಪರವಾಗಿ ಸೆರೆಮನೆಯಿಂದ ಅರಮನೆಗೆ ಪ್ರವೇಶವಾಯಿತು. ಆಗ ಮೈಸೂರು ರಾಜ್ಯ ಏಕೀಕರಣ ಆಗಿರಲಿಲ್ಲ. ಪ್ರಪ್ರಥಮವಾಗಿ ಮೈಸೂರಿನ ರಾಜ್ಯದಲ್ಲಿ ಮಹಾರಾಜರ ಮುಂದೆ ಏಳು ಜನ ಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದರು. ಇವರಲ್ಲಿ ಕೆ.ಸಿ.ರೆಡ್ಡಿಯವರು ಮುಖ್ಯಮಂತ್ರಿಗಳು. ಹೀಗೆ **R.C.ರವರು ಸೆರೆಮನೆಯಿಂದ ಅರಮನೆಗೆ ಪ್ರವೇಶಿಸಿದರು.**

❖

9. ಮೈಸೂರಿನ ಅಧಿವೇಶನದಲ್ಲಿ ಚಾಮುಂಡೇಶ್ವರಿ ದೇವಸ್ಥಾನ ಪ್ರವೇಶಕ್ಕೆ ತಡೆ ಮಾಡಿದ ಸಂದರ್ಭದಲ್ಲಿ R.C.ರವರ ಪ್ರತಿಕ್ರಿಯೆ.



ಮೈಸೂರಿನ ದಸರಾ ಅಧಿವೇಶನ ಸಂದರ್ಭದಲ್ಲಿ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರೊಂದಿಗೆ R.C. ರವರು

R.C.ರವರು ಮಂತ್ರಿಗಳಾಗಿದ್ದಾಗ, ಮೈಸೂರಿನಲ್ಲಿ ಅಸೆಂಬ್ಲಿ (ಅಧಿವೇಶನ) ನಡೆಯುತ್ತಿದ್ದ ಸಂದರ್ಭದಲ್ಲಿ ನಾವು ಕುಟುಂಬ ಸಮೇತ ಹೋಗಿ ಇರುತ್ತಿದ್ದೆವು. ಮಂತ್ರಿಗಳಿಗೆ, M.L.A.ಗಳಿಗೆ ಇರುವುದಕ್ಕೆ ಮನೆ ಹಾಗು ಓಡಾಡುವುದಕ್ಕೆ ಕಾರಿನ ಸೌಕರ್ಯ ಇರುತ್ತಿತ್ತು. ಆಳುಗಳು ಹಾಗೂ ಇತರರು ಓಡಾಡುವುದಕ್ಕೆ ಬೈಸೈಕಲ್ ಹಾಗೂ ಟಾಂಗಾ ಇರುತ್ತಿದ್ದವು. ಆಗಿನ ವೈಭವಗಳನ್ನು ನೋಡುವುದಕ್ಕೆ, ಅನುಭವಿಸುವುದಕ್ಕೆ ತುಂಬಾ ಸಂತೋಷವಾಗುತ್ತಿತ್ತು. ಮಂತ್ರಿಗಳಿಗೆ ತುಂಬಾ ಗೌರವವಿತ್ತು. ಮಂತ್ರಿಗಳಲ್ಲಿ ಸ್ವಾರ್ಥ ಇರಲಿಲ್ಲ. ನಾವು ಅಧಿಕಾರಕ್ಕೆ ಬಂದಿರುವುದು ಜನರಿಗೆ ಹಾಗೂ ದೇಶಕ್ಕೆ ಒಳ್ಳೆಯದನ್ನು ಮಾಡಬೇಕು ಎನ್ನುವ ತತ್ತ್ವವನ್ನು ಪಾಲಿಸುತ್ತಿದ್ದರು. ಹಣದ ಆಸೆಯಾಗಲಿ, ಆಸ್ತಿ ಮಾಡುವ ಹಂಬಲವಾಗಲಿ ಇರಲಿಲ್ಲ. ಮಂತ್ರಿಗಳು ಬರುತ್ತಾರೆ ಎಂದು ತಿಳಿದರೆ ಸಾಕು ಜನಗಳು ಎಷ್ಟು ಗೌರವ ಕೊಡುತ್ತಿದ್ದರು ಎಂದರೆ, ಉದಾಹರಣೆಗೆ, ಬೆಂಗಳೂರಿನಿಂದ ತುಮಕೂರಿಗೆ ಯಾವುದಾದರೂ ಕಾರ್ಯಕ್ರಮಕ್ಕೆ ಬರುತ್ತಾರೆ ಎಂದು ತಿಳಿದರೆ ಸಾಕು ಬೆಂಗಳೂರಿನಿಂದ ತುಮಕೂರು ತನಕ ಮಧ್ಯದಲ್ಲಿ ಎಷ್ಟು ಊರು ಸಿಗುತ್ತದೆಯೋ ಅಷ್ಟೂ ಊರಿನಲ್ಲಿ ಮುಖ್ಯಸ್ಥರು, ಊರಿನ ಮುಂಭಾಗದಲ್ಲಿ ಹಸಿರು ತೋರಣಗಳನ್ನು ಕಟ್ಟಿ, ಹೂವಿನ ಹಾರ, ನಿಂಬೆಹಣ್ಣು ಹಿಡಿದು ನಿಂತು, ಕಾರು ಬರುವುದನ್ನು ಕಾದು ಅಭಿಮಾನದಿಂದ ಸ್ವಾಗತಿಸುತ್ತಿದ್ದರು. ಮನೆಗೆ ಬರುವಷ್ಟರಲ್ಲಿ ಕಾರು ತುಂಬಾ ಹೂವಿನ ಹಾರ, ನಿಂಬೆಹಣ್ಣು ತುಂಬಿರುತ್ತಿತ್ತು. ನಮ್ಮ ತಂದೆಯವರ ಜೊತೆ ನಾನು ನಮ್ಮ ಅಣ್ಣ ಗೋವಿಂದರಾಜು ಹೋಗಿದ್ದಾಗ ನೋಡಿದ ನೋಟ ಇದು. ಈಗಲೂ ಆ ದೃಶ್ಯಗಳು ಕಣ್ಣಿಗೆ ಕಟ್ಟಿದಂತೆ ಇದೆ.

ಒಮ್ಮೆ ಮೈಸೂರಿನ ದಸರ ಸಮಯದಲ್ಲಿ ಮಹಾರಾಜರ ದೊಡ್ಡಮ್ಮನವರ ಮನೆಯ ಪಕ್ಕದಲ್ಲಿಯೇ ನಮಗೆ ದೊಡ್ಡ ಮನೆ ಕೊಟ್ಟಿದ್ದರು. ನಾವುಗಳು ಅವರ ಮನೆಗೆ ಹೋಗಿ ಬರುತ್ತಿದ್ದೆವು. ಅವರು ಹಬ್ಬದ ದಿನ ನಾಲ್ಕು

ಜನ ಆಳುಗಳ ಕೈಯಲ್ಲಿ ಊಟವನ್ನು ಕಳುಹಿಸಿಕೊಟ್ಟರು.

ಒಮ್ಮೆ ತಂದೆಯವರು ಬೆಳಿಗ್ಗೆ ಅಧಿವೇಶನಕ್ಕೆ ಹೋಗಿದ್ದರು. ನಾವು ಚಾಮುಂಡಿ ಬೆಟ್ಟಕ್ಕೆ ದೇವಿಯ ದರ್ಶನಕ್ಕೆ ಹೋದೆವು. ದೇವಸ್ಥಾನದ ಮುಂದೆ ಹೋಗುತ್ತಿದ್ದಂತೆ, ದೇವಸ್ಥಾನದ ಬಾಗಿಲು ಹಾಕಿದರು. ಎಷ್ಟು ಕೇಳಿಕೊಂಡರೂ ಒಳಗೆ ಬಿಡಲಿಲ್ಲ. ಆಗಿನ ಕಾಲದಲ್ಲಿ ದೇವಸ್ಥಾನಕ್ಕೆ ದಲಿತರಿಗೆ ಪ್ರವೇಶ ಇರಲಿಲ್ಲ. ನಾವುಗಳು ಕಾರಿನಲ್ಲಿ ಹೋಗುವುದು ತಿಳಿದು ಹೀಗೆ ಮಾಡಿದರು. ಆಗ ನೊಂದ ಮನಸ್ಸಿನಿಂದ ಬಾಗಿಲಿನಲ್ಲೇ ದೇವಿಗೆ ನಮಸ್ಕಾರ ಮಾಡಿ ಹಿಂತಿರುಗಿದೆವು. ನಮ್ಮ ತಂದೆಯವರು ಮನೆಗೆ ಮದ್ಯಾಹ್ನದ ಊಟಕ್ಕೆ ಬಂದಾಗ ನಮ್ಮ ತಾಯಿ ತುಂಬಾ ನೊಂದುಕೊಂಡು ನಡೆದ ಸಂಗತಿಯನ್ನು ತಂದೆಗೆ ಹೇಳಿದರು. ಈ ವಿಚಾರ ಗೊತ್ತಾದ ಕೂಡಲೇ R.C.ರವರು ಮುಖ್ಯಮಂತ್ರಿ ಕೆ.ಸಿ.ರೆಡ್ಡಿಯವರಿಗೆ ದೂರವಾಣಿ ಮುಖಾಂತರ ಮಾತನಾಡುತ್ತಾ **"ನಾನು ಮಂತ್ರಿ ಪದವಿಗೆ ರಾಜೀನಾಮೆ ಕೊಡುತ್ತಿದ್ದೇನೆ, ಏಕೆಂದರೆ ಇವತ್ತು ನನ್ನ ಕುಟುಂಬದವರಿಗೆ ಚಾಮುಂಡಿ ದೇವಿಯ ದೇವಸ್ಥಾನದಲ್ಲಿ ದರ್ಶನ ಮಾಡಲು ಅವಕಾಶ ನೀಡಿರುವುದಿಲ್ಲ. 'ದಲಿತರಿಗೆ ದೇವಸ್ಥಾನಕ್ಕೆ ಪ್ರವೇಶವಿಲ್ಲ' ಎನ್ನುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಇದರಿಂದ ಅವಮಾನವಾಗಿದೆ. ನಾನು ದಲಿತರ ಪರವಾಗಿ ಮಂತ್ರಿಯಾಗಿ ಇರುವುದಕ್ಕೆ ಇಷ್ಟವಿಲ್ಲ. ನಾನು ಮಂತ್ರಿಯಾಗಿ ಇರುವುದು ದಲಿತರ ಪರವಾಗಿ, ಇವತ್ತು ನಮಗೇ ಹೀಗೆ ಮಾಡಿದವರು, ನಮ್ಮ ಜನರನ್ನು ನಾನು ಹೇಗೆ ರಕ್ಷಿಸಬಲ್ಲೆ? ನಮ್ಮ ಜನರ ಪರವಾಗಿ ಅಧಿಕಾರಕ್ಕೆ ಬಂದಿದ್ದೇನೆ, ಅವರಿಗೋಸ್ಕರ ದುಡಿಯುತ್ತೇನೆ. ಈ ಅಧಿಕಾರ ಬೇಡ"** ಎಂದು ಹೇಳಿದರು. ಅದಕ್ಕೆ ಮುಖ್ಯಮಂತ್ರಿ ಕೆ.ಸಿ.ರೆಡ್ಡಿಯವರು ಸಮಾಧಾನ ಮಾಡಿ, ಮಹಾರಾಜರಿಗೆ ಸುದ್ದಿ ತಿಳಿಸಿದರು. ಅಂದಿನ ಮಧ್ಯಾಹ್ನದ ಅಧಿವೇಶನದಲ್ಲಿ ಈ ವಿಷಯ ಚರ್ಚೆಯಾಗಿ ಕೊನೆಯಲ್ಲಿ

ಆರ್.ಚೆನ್ನಿಗರಾಮಯ್ಯನವರು ಖಂಡಿತ ರಾಜಿನಾಮೆ ಕೊಡಬಾರದು ಎಂದು ಮಹಾರಾಜರು ಹೇಳಿದರು. ಆಗ ಮಾರನೆಯ ದಿನ ಬೆಳಿಗ್ಗೆ ಚೆನ್ನಿಗರಾಮಯ್ಯನವರು ಮತ್ತು ಕುಟುಂಬದವರು ಬೆಳಿಗ್ಗೆ ಮೊದಲ ಪೂಜೆಗೆ ಹೋಗುವಂತೆ ಹೇಳಿದರು. ಅರಮನೆಯ ಪೂಜಾರಿಯನ್ನು ಕಳುಹಿಸಿದರು. ಅದಕ್ಕೆ R.C.ರವರು ನಾನು ಹೋಗುವುದಿಲ್ಲ, ಏಕೆಂದರೆ ನಾನು ಮಂತ್ರಿ ಎಂದು ಗೌರವಿಸುತ್ತಾರೆ. ಅದು ನನಗೆ ಬೇಕಿಲ್ಲ. ನನ್ನ ಮನೆಯವರು ಮತ್ತು ನನ್ನ ಜನ ದಲಿತರಿಗೆ ದೇವಸ್ಥಾನಕ್ಕೆ ಪ್ರವೇಶ ಸಿಗಬೇಕು. ಅದು ನನಗೆ ಬೇಕು. ಅದಕ್ಕೆ ಮಹಾರಾಜರು ಒಪ್ಪಿ ಮೊದಲು ಇವರ ಕಾರು ಹೋದ ಮೇಲೆ ಬಾಗಿಲು ತೆಗೆದು ಪೂಜೆ ಮಾಡಿಕೊಟ್ಟರು. ಅರಮನೆ ಪೂಜಾರಿಗಳು ಬಂದಿದ್ದರು. ಅಂದಿನಿಂದ ದಲಿತರಿಗೆ ಚಾಮುಂಡಿ ದೇವಿಯ ದೇವಸ್ಥಾನಕ್ಕೆ ಪ್ರವೇಶ ಸಿಕ್ಕಿತಂತೆ. ಇದು ನಡೆದ ಕಥೆ. ಅಂತಹ ವ್ಯಕ್ತಿತ್ವ R.C.ರವರದು. ಅಧಿಕಾರಕ್ಕಾಗಿ ಅವರೆಂದು ಆಸೆ ಪಟ್ಟವರಲ್ಲ. ಮಹಾರಾಜರ ಪ್ರೀತಿ, ವಿಶ್ವಾಸ ಇವರ ಮೇಲೆ ಎಷ್ಟು ಇತ್ತೆಂದರೆ, ದಸರ ಸಮಯದಲ್ಲಿ R.C.ರವರು ಒಂದು ದಿನ ದರಭಾರ್ ಹಾಲಿನಲ್ಲಿ ಇರಲಿಲ್ಲವೆಂದರೆ, ಮಹಾರಾಜರು ಕುರ್ಚಿ ನೋಡಿ **"ಚೆನ್ನಿಗರಾಮಯ್ಯನವರು ಬಂದಿಲ್ಲವಾ? ಕುರ್ಚಿ ಖಾಲಿ ಇದೆ. ಹುಷಾರಾಗಿ ಇದ್ದಾರಾ?"** ಎಂದು ವಿಚಾರಿಸುತ್ತಿದ್ದರು.

ಒಂದು ದಿನ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ತುಮಕೂರಿನಿಂದ ಕೊರಟಗೆರೆ ಮಾರ್ಗವಾಗಿ ಕ್ಯಾಮೇನಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಪೂಜೆಗೆಂದು ಹೋಗುತ್ತಿದ್ದರು. ಕೊರಟಗೆರೆ ಪ್ರಾರಂಭದಲ್ಲಿ ರಸ್ತೆಯ ಎಡ ಭಾಗದಲ್ಲಿ ನಮ್ಮ ಮನೆ ಇತ್ತು. R.C.ರವರು ಮನೆ ಮುಂದೆ ವರಾಂಡದಲ್ಲಿ ನಿಂತಿದ್ದರು. ಇದ್ದಕ್ಕಿದ್ದಂತೆ ಮಹಾರಾಜರ ಕಾರುಗಳು ಬರುವುದನ್ನು ದೂರದಿಂದ ಗಮನಿಸಿ, ಕಾರಿನಲ್ಲಿ ಕುಳಿತಿದ್ದ ಮಹಾರಾಜರನ್ನು ನೋಡಿ

"ಮಹಾಸ್ವಾಮಿಗಳು" ಎಂದು ಕೈ ಮುಗಿದರು. ಅದನ್ನು ನೋಡಿದ ಮಹಾರಾಜರು ತಕ್ಷಣ ಕಾರು ನಿಲ್ಲಿಸಿ, "ಚೆನ್ನಿಗರಾಮಯ್ಯನವರು" ಎಂದು ಕರೆದರಂತೆ. ಅದನ್ನು ನೋಡಿದ ಇವರು ಮೈಮೇಲೆ ಪ್ರಜ್ಞೆ ಇಲ್ಲದವರಂತೆ ಮಹಾರಾಜರ ಕಡೆ ಧಾವಿಸಿದರು. ಆಗ ಮಹಾರಾಜರು "ನೀವು ಕೂಡ ನಮ್ಮ ಜೊತೆ ಬನ್ನಿ" ಎಂದು ಕರೆದರಂತೆ. ಆಗ R.C.ರವರಿಗೆ ಮಾತನಾಡುವುದಕ್ಕೆ ಆಗದೆ, ಓಡಿದ ರಭಸಕ್ಕೆ ಕೆಮ್ಮು ಬಂದಿತು. "ಸ್ವಾಮಿ ನೀವು ಮುಂದೆ ಹೋಗಿ ನಿಮ್ಮ ಹಿಂದೆಯೇ ಬರುತ್ತೇನೆ" ಎಂದು ಹೇಳಿದರು. ನಂತರ ಸ್ವಲ್ಪ ಸುಧಾರಿಸಿಕೊಂಡು ಹಿಂದೆಯೇ ಕಾರಿನಲ್ಲಿ ಮಗನನ್ನು ಕರೆದುಕೊಂಡು ಹೋದರು. ಈ ಘಟನೆಯಿಂದ ನನಗೆ ಅನಿಸುವುದೇನೆಂದರೆ, ನಮ್ಮ ತಂದೆಯವರು ಒರ್ವ ಸಾಮಾನ್ಯ ದಲಿತರ ಕುಟುಂಬದಲ್ಲಿ ಜನಿಸಿ, ಮೈಸೂರು ರಾಜ್ಯದ ಮಹಾರಾಜರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿರುವುದು ಒಂದು ಹೆಮ್ಮೆಯ ವಿಷಯವಲ್ಲದೆ ಮತ್ತೇನು?

❖

ಮಗಳ ನೆನಪಿನಾಳದಲ್ಲಿ R.C. / 40

10. R.C.ರವರು ಅರಣ್ಯ ಮಂತ್ರಿಯಾಗಿದ್ದಾಗ ಬಂಡಿಪುರ ಅರಣ್ಯದಲ್ಲಿ ಮೊಟ್ಟ ಮೊದಲಿಗೆ ಖೆಡ್ಡಾ ಆಪರೇಷನ್.



ಬಂಡಿಪುರ ಖೆಡ್ಡಾ ಆಪರೇಷನ್ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಬಾಬೂ ಜಗಜೀವನ್ ರಾಮ್, ಮುಖ್ಯಮಂತ್ರಿಗಳಾದ ಕೆ.ಸಿ.ರೆಡ್ಡಿ ಮತ್ತು ಇತರೆ ಗಣ್ಯರೊಂದಿಗೆ R.C.ರವರು



ಬಂಡಿಪುರ ಖೆಡ್ಡಾ ಆಪರೇಷನ್ ಸಂದರ್ಭದಲ್ಲಿ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಕೇಂದ್ರ ಸಚಿವರಾದ ಬಾಬೂ ಜಗಜೀವನ್ ರಾಮ್ ಮತ್ತು ಇತರೆ ಗಣ್ಯರೊಂದಿಗೆ R.C.ರವರು

R.C.ರವರು ಅರಣ್ಯ ಮಂತ್ರಿಗಳಾಗಿದ್ದಾಗ ಕಾಡಿನ ಆನೆಗಳನ್ನು ಹಿಡಿದು ಪಳಗಿಸಿದರೆ ಅವುಗಳಿಂದ ಇಲಾಖೆಗೆ ಪ್ರಯೋಜನವಾದೀತು ಎಂಬ ದೃಷ್ಟಿಯಿಂದ ಆನೆಗಳನ್ನು ಹಿಡಿಯುವುದರ ವಿಚಾರವಾಗಿ ಅಂದಿನ ಮದ್ರಾಸ್ ಸರ್ಕಾರದ ಅರಣ್ಯ ಇಲಾಖೆಯವರೊಂದಿಗೆ ಚರ್ಚೆ ಮಾಡಿ **'ಖೆಡ್ಡಾ ಆಪರೇಷನ್'** ಮಾಡಬೇಕೆಂದು ತೀರ್ಮಾನಿಸಿದರು.

R.C.ರವರು ಮೊಟ್ಟ ಮೊದಲಿಗೆ ಮೈಸೂರು ರಾಜ್ಯದ ಬಂಡಿಪುರ ಅರಣ್ಯ ಪ್ರದೇಶದಲ್ಲಿ **'ಖೆಡ್ಡಾ ಆಪರೇಷನ್'** ಪ್ರಾರಂಭ ಮಾಡಿಸಿದರು. ಮೈಸೂರು ರಾಜ್ಯದ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಅಂದಿನ ಕೇಂದ್ರ ಸಚಿವರಾಗಿದ್ದ ಬಾಬೂ ಜಗಜೀವನ್


ರಾಮ್ ಹಾಗೂ ಇನ್ನಿತರ ಗಣ್ಯ ವ್ಯಕ್ತಿಗಳ ಉಪಸ್ಥಿತಿಯಲ್ಲಿ ಮೊಟ್ಟ ಮೊದಲಿಗೆ **'ಖೆಡ್ಡಾ ಆಪರೇಷನ್'** ಪ್ರಾರಂಭ ಮಾಡಿಸಿದರು.

ಜಗಜೀವನ್ ರಾಂ ಸಹ ನಮ್ಮ ತಂದೆಯವರ ಒಳ್ಳೆಯ ಸ್ನೇಹಿತರು. ಹಾಗೂ ಇಬ್ಬರೂ ಬಡ ಕುಟುಂಬದಲ್ಲಿ ಬಂದವರು. ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ಊಟ ಮಾಡಿ ಹೋಗುತ್ತಿದ್ದರು. R.C. ಅವರಲ್ಲಿ ತುಂಬಾ ಪ್ರೀತಿ. ರಾಜಕಾರಣಿಗಳು ಇಬ್ಬರು ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಿ, ತೀರ್ಮಾನಕ್ಕೆ ಬರುತ್ತಿದ್ದರು.

'ಖೆಡ್ಡಾ ಆಪರೇಷನ್' ಎಂದರೆ ಕಾಡಾನೆಗಳನ್ನು ಹಿಡಿಯುವ ಒಂದು ವಿಧಾನ. ಈ ವಿಧಾನದಲ್ಲಿ ಹಿಂಡು ಹಿಂಡಾಗಿ ಕಾಡಿನಲ್ಲಿರುವ ಆನೆಗಳನ್ನು ಸುತ್ತುವರಿದು, ಈ ಮೊದಲೇ ಬಿದಿರಿನಿಂದ ರಚಿಸಿದ ದೊಡ್ಡ ವೃತ್ತಾಕಾರದ ಜಾಗಕ್ಕೆ ಖೆಡ್ಡಾ ಎಂದು ಕರೆಯುತ್ತಾರೆ. ಈ ಖೆಡ್ಡಾದೊಳಗೆ ಆನೆಗಳನ್ನು ಓಡಿಸಿ ಬಂಧಿಸುವುದು. ಆನೆಗಳನ್ನು ಓಡಿಸಲು ಬಿದಿರಿನ ಕೋಲನ್ನು ಉಪಯೋಗಿಸುತ್ತಿದ್ದರು. 2–3 ಅಡಿ ಉದ್ದದ ಬಿದಿರಿನ ಕೋಲಿನ ಮುಕ್ಕಾಲು ಭಾಗವನ್ನು ಎರಡು ಭಾಗಗಳಾಗಿ ಸೀಳಿ, ಅವುಗಳನ್ನು ಕೈಯಲ್ಲಿ ಹಿಡಿದು ಜೋರಾಗಿ ಆಡಿಸಿದರೆ ಬರುವ ಶಬ್ಧ, ಕಾಡಾನೆಗಳಿಗೆ ಭಯವನ್ನುಂಟು ಮಾಡುತ್ತಿತ್ತು. ಆಗ ಕಾಡಾನೆಗಳು ಹೆದರಿ ಶಬ್ಧ ಬರುವ ದಿಕ್ಕಿಗೆ ವಿರುದ್ಧವಾಗಿ ಓಡಲು ಪ್ರಾರಂಭಿಸುತ್ತವೆ. ಹೀಗೆ ಭಯದಿಂದ ಓಡುತ್ತಿರುವ ಆನೆಗಳನ್ನು ಉಪಾಯದಿಂದ ದಾರಿ ತಪ್ಪಿಸಿ ಖೆಡ್ಡಾದೊಳಕ್ಕೆ ಹೋಗುವಂತೆ ಮಾಡುವುದು. ಎಲ್ಲಾ ಆನೆಗಳು ಖೆಡ್ಡಾದೊಳಕ್ಕೆ ಪ್ರವೇಶಿಸಿದ ನಂತರ ಖೆಡ್ಡಾದ ಬಾಗಿಲನ್ನು ಮುಚ್ಚಿಸುವುದು. ಆ ನಂತರ ಒಂದೊಂದೇ ಆನೆಗಳನ್ನು ಬೇರೆ ಮಾಡಿ ಅವುಗಳನ್ನು ಹಂತ ಹಂತವಾಗಿ ಪಳಗಿಸಿ ಮನುಷ್ಯರ ಉಪಯೋಗಕ್ಕೆ ಬರುವಂತೆ ಮಾಡುವುದೇ ಖೆಡ್ಡಾ ಆಪರೇಷನ್.

ಹೀಗೆ ಖೆಡ್ಡಾ ಆಪರೇಷನ್‌ಗೆ ಉಪಯೋಗಿಸಿದ ಬಿದುರಿನ ಕೋಲಿಗೆ ಬಂಗಾರದ ಉಂಗುರ (ಸಿಂಗು) ಮಾಡಿಸಿ, ಜ್ಞಾಪಕಾರ್ಥವಾಗಿ

ಮಹಾರಾಜರಿಗೆ ಬಾಬೂ ಜಗಜೀವನ್ ರಾಮ್ ಇಲಾಖೆಯಿಂದ ಗೌರವಪೂರ್ವಕವಾಗಿ ಕೊಟ್ಟಿದ್ದರು. ಹೀಗೆ R.C. ರವರು ಮೈಸೂರು ರಾಜ್ಯದಲ್ಲಿ 'ಖೆಡ್ಡಾ ಆಪರೇಷನ್' ಮಾಡಿಸಿದ ಮೊಟ್ಟ ಮೊದಲಿಗರು ಎಂದು ಎನಿಸಿಕೊಂಡರು.



ಬಿದುರಿನ ಕೋಲಿಗೆ ಬಂಗಾರದ ಉಂಗುರ(ಸಿಂಗು)

❖

11. ಇಂದಿನ ಕಂಠೀರವ ಸ್ಟುಡಿಯೋ (ಡಾ.ರಾಜ್‌ಕುಮಾರ್‌ರವರ ಸಮಾಧಿ ಇರುವ ಸ್ಥಳ) ಸ್ಥಾಪನೆಯಾದ ಸಂದರ್ಭದಲ್ಲಿ R.C.ರವರ ಕೊಡುಗೆ.

ಬೆಂಗಳೂರಿನ ಗೊರಗೊಂಟೆ ಪಾಳ್ಯ ಆಗ ಅರಣ್ಯ ಇಲಾಖೆಗೆ ಸೇರಿತ್ತು. R.C. ರವರು ಅರಣ್ಯ ಮಂತ್ರಿಗಳಾಗಿದ್ದಾಗ ಜಮೀನು ಇಲ್ಲದ ದಲಿತರಿಗೆ ಸರ್ಕಾರದವತಿಯಿಂದ ಈ ಭಾಗದ ಜಮೀನನ್ನು ಕೊಡಿಸಿದ್ದರು. ಸ್ವಲ್ಪ ದಿನಗಳ ನಂತರ ಸಿನಿಮಾಗಳನ್ನು ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದ ಕರಿಬಸಪ್ಪನವರು ಹಾಗೂ ಗುಬ್ಬಿ ವೀರಣ್ಣನವರು ಬೆಂಗಳೂರಿನಲ್ಲಿ ಒಂದು ಒಳ್ಳೆಯ ಸ್ಟುಡಿಯೋ ಮಾಡಬೇಕು ಎಂದು ಜಾಗ ಹುಡುಕುತ್ತಿದ್ದರು. ಆಗ ಗೊರಗುಂಟೆ ಪಾಳ್ಯವನ್ನು ಸ್ಟುಡಿಯೋಗೆ ಸೂಕ್ತವಾದ ಜಾಗ ಎಂದು ಹೋಗಿ ಜಮೀನನ್ನು ಕೇಳಿದರಂತೆ. ಅವರು ಆ ಜಾಗವನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. "ಆ ಜಾಗವನ್ನು ನಮಗೆ ಚೆನ್ನಿಗರಾಮಯ್ಯನವರು ಕೊಡಿಸಿದ್ದಾರೆ. ಅವರು ಹೇಗೆ ಹೇಳಿದರೆ ಹಾಗೆ ಮಾಡುತ್ತೇವೆ" ಎಂದು ಕರಿಬಸಪ್ಪನವರಿಗೆ ಹೇಳಿದರಂತೆ. ಆಗ ಕರಿಬಸಪ್ಪನವರು R.C.ರವರ ಬಳಿ ಬಂದು "ನೀವು ಒಂದು ಮಾತು ಆ ಜಮೀನು ಉಳ್ಳವರಿಗೆ ಹೇಳಿದರೆ ಆ ಜಾಗದಲ್ಲಿ ಸ್ಟುಡಿಯೋ ಮಾಡಲು ಅನುಕೂಲವಾಗುತ್ತದೆ" ಎಂದು ಕೇಳಿಕೊಂಡರಂತೆ. ಅದಕ್ಕೆ R.C.ರವರು "ಬಡ ದಲಿತರಿಗೆ ಕೊಟ್ಟ ಜಾಗ ಅದು, ನೀವು ಕೊಡುವ ಹಣ ಖರ್ಚು ಮಾಡಿ ಬಿಡುತ್ತಾರೆ. ಅದಕ್ಕೆ ಅವರಿಗೆ ಉಪಯೋಗ ಆಗುವ ರೀತಿ ಏನಾದರೂ ಇದ್ದರೆ

ಹೇಳಿ" ಅಂದರಂತೆ. ಅದಕ್ಕೆ ಕರಿಬಸಪ್ಪನವರು "ಜಮೀನು ಇರುವವರಿಗೆ ದುಡ್ಡು ಮತ್ತು ಸ್ಟುಡಿಯೋದಲ್ಲಿ ಕೆಲಸ ಕೊಡುತ್ತೇನೆ" ಎಂದು ಹೇಳಿದ ಮೇಲೆ ಆ ಮಾತಿನ ಪ್ರಕಾರ ಜಮೀನು ಕೊಡಿಸಿದರಂತೆ. ಹೀಗೆ ಕಂಠೀರವ ಸ್ಟುಡಿಯೋ R.C. ರವರ ಕಾಲದಲ್ಲಿ ಆಗಿದ್ದು. ಡಾ.ರಾಜ್‌ಕುಮಾರ್‌ರವರ ಕಸ್ತೂರಿನಿವಾಸ ಶೂಟಿಂಗ್ ಇದೇ ಸ್ಟುಡಿಯೋದಲ್ಲಿ ಆಗಿದ್ದು. ಆಗ ನಮ್ಮ ತಂದೆಯವರ ಜೊತೆ ನಾವುಗಳೆಲ್ಲಾ ಶೂಟಿಂಗ್ ನೋಡುವುದಕ್ಕೆ ಹೋಗಿದ್ದೆವು. ಡಾ.ರಾಜ್‌ಕುಮಾರ್‌ರವರು ನಮ್ಮ ತಂದೆಯವರನ್ನು ನೋಡಿ ಗೌರವದಿಂದ ತಲೆಬಾಗಿ ನಮಸ್ಕಾರ ಮಾಡಿ ಈ ಜಾಗ ಸಿಗುವುದಕ್ಕೆ ನೀವೇ ಕಾರಣವೆಂದು ತುಂಬಾ ಸಂತೋಷದಿಂದ ಮಾತನಾಡಿಸಿದರು.

ಈಗ ಕಂಠೀರವ ಸ್ಟುಡಿಯೋ ತುಂಬಾ ಪ್ರಖ್ಯಾತವಾಗಿ ಬೆಳೆದಿದೆ. ಡಾ.ರಾಜ್‌ಕುಮಾರ್‌ರವರ ಸಮಾಧಿ ಸಹ ಈ ಸ್ಥಳದಲ್ಲೇ ಆಗಿದೆ. ಈಗ ಇರುವ ಕುಮಾರ ಪಾರ್ಕ್ ಮನೆಗಳು, ಗಾಂಧಿ ನಗರ ಸ್ಕೂಲು, ನೆಹರೂ ನಗರ ಸರ್ಕಲ್‌ನಿಂದ ಪಾರ್ಕ್, ಸುಬ್ರಮಣ್ಯ ದೇವಸ್ಥಾನ ಜಾಗ ಎಲ್ಲಾ R.C. ರವರ ಕಾಲದಲ್ಲಿ ಆಗಿದ್ದು.

❖

12. ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ R.C.ರವರ ಪಾತ್ರ


ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ R.C.ರವರು ಉಪಾಧ್ಯಾಕ್ಷರಾಗಿ ಕಾರ್ಯ ನಿರ್ವಹಿಸಿದರು. ಈ ಅಧಿವೇಶನ ನಡೆದ ಸ್ಥಳ ಇಂದಿನ ಸದಾಶಿವನಗರ ಅಥವಾ ಪ್ಯಾಲೆಸ್ ಆರ್ಚರ್ಡ್ಸ್. ಈ ಸ್ಥಳವು ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ತೋಟವಾಗಿತ್ತು. ನಾನು ನೋಡಿದಂತೆ ಇಲ್ಲಿ ಹಲವಾರು ಬಗೆಯ ಹಣ್ಣುಗಳ ಮರ-ಗಿಡಗಳು ಸಮೃದ್ಧಿಯಾಗಿ ಬೆಳೆದಿದ್ದವು. ಸೀಬೆಹಣ್ಣು, ಮಾವಿನ ಹಣ್ಣು, ಪಪ್ಪಾಯಿ, ಪನ್ನೇರಳೆಹಣ್ಣು, ಚಕ್ಕೋತಹಣ್ಣು ಹೀಗೆ ಹಲವು ಬಗೆಯ ಹಣ್ಣುಗಳು ಈ ತೋಟದಲ್ಲಿ ಇದ್ದವು.

ಅಧಿವೇಶನದ ಸಂದರ್ಭದಲ್ಲಿ ಮಹಾರಾಜರ ಅನುಮತಿ ಪಡೆದು ಈ ಪ್ರದೇಶವನ್ನು ಬಳಸಿಕೊಳ್ಳಲಾಯಿತು. ಈ ಪ್ರದೇಶದಲ್ಲಿರುವ ಮೈಸೂರು ಮಹಾರಾಜರ ಬೆಂಗಳೂರಿನ ಪ್ಯಾಲೆಸ್‌ನಿಂದ ಇಂದಿನ ಕಾವೇರಿ ಥಿಯೇಟರ್, ಅಲ್ಲಿಂದ ಸದಾಶಿವನಗರ ಭಾಷ್ಯಂ ಸರ್ಕಲ್‌ನವರೆಗೆ ರಸ್ತೆ ನಿರ್ಮಾಣ ಮಾಡಿಸಿದರು. ಈ ರಸ್ತೆ ನಿರ್ಮಾಣ ಕಾರ್ಯ ತಿಂಗಳುಗಳವರೆಗೆ ನಡೆಯಿತು. ಸಾವಿರ ಜನರು ಬಂದು ಹೋಗುವವರಿಗೆ ವ್ಯವಸ್ಥೆ, ಇರುವುದಕ್ಕೆ ರೂಮುಗಳು, ಶೆಡ್ಡುಗಳು, ಬರುವುದಕ್ಕೆ ಬಸ್ಸುಗಳು, ಬಸ್ ಸ್ಟಾಂಡ್, ಅಂಗಡಿಗಳು, ಊಟದ ವ್ಯವಸ್ಥೆ, ವಸ್ತು ಪ್ರದರ್ಶನ ಹೀಗೆ ಅನೇಕ ತರಹ ಅನುಕೂಲ ಜನರಿಗೆ ಮಾಡಿಸಿದ್ದರು. ಯಾವುದಕ್ಕೂ ಕುಂದುಕೊರತೆ ಇಲ್ಲದ ಹಾಗೆ ವ್ಯವಸ್ಥೆ ಮಾಡಲಾಗಿತ್ತು. ಅಧಿವೇಶನಕ್ಕೆ ಎಲ್ಲ ರಾಜ್ಯಗಳಿಂದ ಗಣ್ಯರು ಬಂದಿದ್ದರು. ಜವಹರ್ ಲಾಲ್ ನೆಹರೂ.

ಇಂದಿರಾಗಾಂಧಿ, ಫಿರೋಜ್ ಗಾಂಧಿ (ಇಂದಿರಾಗಾಂಧಿಯವರ ಪತಿ) ಇನ್ನಿತರ ಗಣ್ಯರು ಬಂದಿದ್ದರು. ಅಧಿವೇಶನ ತುಂಬಾ ಚೆನ್ನಾಗಿ ನಡೆದಿತ್ತು. R.C. ಯವರಿಗೆ ವಹಿಸಿದ್ದ ಕೆಲಸ ಸಮರ್ಪಕವಾಗಿ ಮಾಡಿ ಮುಗಿಸಿದರು. ಅಧಿವೇಶನ ಮುಗಿದ ಮೇಲೆ ಆ ಜಾಗ ಬಿ.ಡಿ.ಎ. ಸೈಟುಗಳಾಗಿ ಮಾರ್ಪಾಡು ಆಯಿತು. ಆಗ ಎಲ್ಲಾ ಮಂತ್ರಿಗಳಿಗೆ ಎಂ.ಎಲ್.ಎ.ಗಳಿಗೆ ಸರ್ಕಾರಿ ಅಧಿಕಾರಿಗಳಿಗೆ ಸೈಟು ಹಂಚಿದರು. ಆಗ ರಾಮಕೃಷ್ಣ ಹೆಗಡೆ, ಕೆಂಗಲ್ ಹನುಮಂತಯ್ಯ, ಪ್ರಖ್ಯಾತ ವೈದ್ಯರಾಗಿದ್ದ ಹೆಚ್.ಎಸ್.ರುದ್ರಪ್ಪ, ಹೀಗೆ ಅನೇಕ ಪ್ರಮುಖ ಪ್ರಾಮಾಣಿಕ ಸರ್ಕಾರದ ನೌಕರರಿಗೆ ಅದರಲ್ಲೂ ಬೆಂಗಳೂರಿನಲ್ಲಿ ಮನೆ ಇಲ್ಲದವರಿಗೆ ಸೈಟು ಹಂಚಿದರು. ಆ ಸಂದರ್ಭದಲ್ಲಿ R.C. ಅವರಿಗೂ ಒಂದು ಸೈಟು 60–40 ಕೊಡಲಾಯಿತು. ಇವರಿಗೂ ಬೆಂಗಳೂರಿನಲ್ಲಿ ಮನೆಯಾಗಲಿ, ಸೈಟು ಆಗಲಿ ಇರಲಿಲ್ಲ. ಈಗ ಇರುವ ನೆಹರೂ ನಗರದ ರೈಲ್ವೇ ಲೈನ್ ರೋಡ್‌ನಲ್ಲಿ ಇವರಿಗೆ ಸೈಟು ನೀಡಲಾಯಿತು.

❖

13. ನನ್ನ ಹಿರಿಯ ಅಕ್ಕ ಲೀಲಮ್ಮನ ಮದುವೆಯ ದಿನವೇ ಮಹಾರಾಜರ ಪುತ್ರ ಶ್ರೀಕಂಠದತ್ತ ಒಡೆಯರ್ ಅವರ ನಾಮಕರಣ



R.C.ಅವರ ದೊಡ್ಡ ಮಗಳು ಲೀಲಮ್ಮ ಹಾಗೂ ಅಳಿಯ ರಾಮಕೃಷ್ಣಯ್ಯನವರು

R.C.ಅವರ ದೊಡ್ಡ ಮಗಳು ಅಂದರೆ, ನನ್ನ ಅಕ್ಕ ಲೀಲಮ್ಮನನ್ನು R.C.ಅವರ ಸೋದರ ಮಾವನ ಮೂರನೇ ಮಗನಾದ ರಾಮಕೃಷ್ಣಯ್ಯ ಇವರಿಗೆ ಕೊಟ್ಟು ದಿನಾಂಕ 02-03-1953 ರಂದು ಮದುವೆ ನಿಗದಿಯಾಗಿತ್ತು. ಆ ಮದುವೆಗೆ ಕರೆಯಲು ನಮ್ಮ ತಂದೆಯವರು ಮೈಸೂರಿನ ಮಹಾರಾಜರನ್ನು ಭೇಟಿ ಮಾಡಿ ಮದುವೆಯ ಆಹ್ವಾನ

ಪತ್ರಿಕೆಯನ್ನು ಕೊಡಲು ಅರಮನೆಗೆ ಹೋಗಿದ್ದರು. ಆದರೆ, ಮದುವೆಯ ದಿನದಂದೇ ಮಹಾರಾಜರ ಮಗ ಶ್ರೀ ಕಂಠದತ್ತ ಒಡೆಯರ್ ಅವರ ನಾಮಕರಣ ಇದ್ದಿತು. ಆದ ಕಾರಣ ಮಹಾರಾಜರು ಅದಕ್ಕೆ ಸಿಹಿ ತಿಂಡಿಯನ್ನು ಮತ್ತು ವಧುವಿಗೆ ಪೀತಾಂಬರದ ಸೀರೆ, ಜಾಕೀಟು ಮತ್ತು ನವರತ್ನದ ಉಂಗುರವನ್ನು ಉಡುಗೊರೆಯಾಗಿ ಕೊಟ್ಟು, **"ಅಂದೇ ನನ್ನ ಮಗನ ನಾಮಕರಣದ ಕಾರ್ಯ ಇರುವ ಕಾರಣ ಮದುವೆಗೆ ಬರಲು ಸಾಧ್ಯವಾಗುವುದಿಲ್ಲ, ಮದುವೆಗೆ ಬಂದ ಜನರಿಗೆ ನನ್ನ ಪುತ್ರನ ಹೆಸರಿನಲ್ಲಿ ಸಿಹಿ ಹಂಚಿ"** ಎಂದು ಹೇಳಿ ಆಶೀರ್ವಾದ ಮಾಡಿ ಕಳುಹಿಸಿದರು. ಆ ಮದುವೆ ಕೊರಟಗೆರೆ ತಾಲ್ಲೂಕಿನಲ್ಲೇ ಮೊಟ್ಟ ಮೊದಲ ಅದ್ದೂರಿ ಮದುವೆಯಾಗಿತ್ತು. ಬೆಂಗಳೂರಿನಿಂದ ಎಲ್ಲಾ ಮಂತ್ರಿಗಳು, ಅಧಿಕಾರಿಗಳೂ ಕಾರುಗಳಲ್ಲಿ ಬಂದಿದ್ದರು. ಬ್ರಾಹ್ಮಣ ಪುರೋಹಿತರು ಮೊದಲ ಬಾರಿಗೆ ದಲಿತರ ಮನೆಗೆ ಬಂದು ಮದುವೆ ಮಾಡಿಸಿದರು.

❖

14. R.C.ರವರ ಮೇಲೆ ಕೆಂಗಲ್ ಆಂಜನೇಯಸ್ವಾಮಿ ದೇವನ ಕೃಪೆ.

ಒಂದು ಸಲ ಕೆಂಗಲ್ ಹನುಮಂತಯ್ಯನವರು ಮತ್ತು ಇತರೆ ಮಂತ್ರಿಗಳು R.C. ರವರು ಮೈಸೂರಿನಿಂದ ಬೆಂಗಳೂರಿಗೆ ಬರುವಾಗ, ಬರುವ ದಾರಿಯಲ್ಲಿ ಕೆಂಗಲ್ ಆಂಜನೇಯ ಸ್ವಾಮಿ ದೇವಸ್ಥಾನ ಬರುತ್ತದೆ. ಅದು ಕೆಂಗಲ್ ಹನುಮಂತಯ್ಯನವರ ಊರು. ಅದಕ್ಕೆ ಎಲ್ಲಾ ಕಾರು ನಿಲ್ಲಿಸಿ ಪೂಜೆ ಮಾಡಿಕೊಂಡು ಬರೋಣವೆಂದರಂತೆ. R.C. ಅವರು ವೊಟ್ಟ ವೊದಲ ಬಾರಿಗೆ ಈ ದೇವಸ್ಥಾನಕ್ಕೆ ಹೋಗಿದ್ದರು. ಹನುಮಂತಯ್ಯನವರು ಪೂಜೆ ಮಾಡಿಸಿದರು. ಅಲ್ಲಿ ಇದ್ದ ಎಲ್ಲರಿಗೂ ಪ್ರಸಾದ ಹೂವಿನ ಹಾರ ಹಾಕಿದರಂತೆ. ಆದರೆ R.C.ರವರಿಗೆ ಕೊಡುವುದಕ್ಕೆ ಹೂವಿನ ಹಾರ ಖಾಲಿಯಾಯಿತು ಎಂದರಂತೆ ಅಲ್ಲಿನ ಪೂಜಾರಿ. ಅದಕ್ಕೆ ಹನುಮಂತಯ್ಯನವರು ದೇವರ ಹತ್ತಿರ ಇರುವ ಹೂವಿನ ಹಾರವನ್ನೇ ಹಾಕಿ ಎಂದರಂತೆ. ಪೂಜಾರಿ ಕೊನೆಗೆ ಕೆಂಗಲ್ ಆಂಜನೇಯ ಸ್ವಾಮಿ ದೇವರ ಮೇಲೆ ಹಾಕಿದ ಹಾರ ತಂದು ಹಾಕಿದರಂತೆ. ಇಲ್ಲಿ ತುಂಬಾ ಸತ್ಯ ನಡೆಯುತ್ತದೆ ಎಂದು ಹೇಳಿದರಂತೆ. ಅವತ್ತಿನಿಂದ ತುಂಬಾ ಒಳ್ಳೆಯದು ಆಯಿತು ಎಂದು R.C. ರವರು ಹೇಳುತ್ತಿದ್ದರು. ಪ್ರತಿ ಸಲ ಮೈಸೂರಿಗೆ ಹೋಗಿ ಬರುವಾಗ ಕಾರು ನಿಲ್ಲಿಸಿ ಸ್ವಲ್ಪ ಹೊತ್ತು ಕೈ ಮುಗಿದೇ ಮುಂದೆ ಹೋಗುತ್ತಿದ್ದರು. ಅಂದರೆ ಇವರಲ್ಲಿ ಇದ್ದ ಧೈವ ಭಕ್ತಿ ತೋರಿಸುತ್ತದೆ. R.C.ರವರು ಯಾವಾಗಲೂ ಹೇಳುತ್ತಿದ್ದ ಮಾತು **"ಮನುಷ್ಯರು ನನ್ನನ್ನು ಜಾತಿಯತೆಯಿಂದ ದೂರಮಾಡಿ, ಎಷ್ಟು**

ಉದಾಸೀನ ಮಾಡಿದರೂ, ಆ ದೇವರು ನನಗೆ ಹತ್ತಿರವಾಗುತ್ತಾ, ನನ್ನ ಅಂತರಾಳದ ಭಕ್ತಿ, ಶ್ರದ್ಧೆಯನ್ನು ಅರಿತಿದ್ದಾನೆ" ಎಂದು ಹೇಳುತ್ತಿದ್ದರು.

❖

15. R.C.ರವರ ಇಬ್ಬರು ಮಕ್ಕಳ ಮದುವೆಯ ಸಂದರ್ಭ.




ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಇರುವ ಜನರಲ್ ಹಾಸ್ಟೆಲ್‌ನಲ್ಲಿ ಬ್ರಹ್ಮ ಸಮಾಜದ ಶೈಲಿಯಲ್ಲಿ ನಡೆದ ತಮ್ಮ ಎರಡನೇ ಮಗಳ ಮದುವೆಯ ಮಹೂರ್ತದ ಮುನ್ನ R.C.ರವರು



ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಇರುವ ಜನರಲ್ ಹಾಸ್ಟೆಲ್‌ನಲ್ಲಿ ಬ್ರಹ್ಮ ಸಮಾಜದ ಶೈಲಿಯಲ್ಲಿ ನಡೆದ ತಮ್ಮ ಎರಡನೇ ಮಗಳ ಮದುವೆಯ ಮಹೂರ್ತದ ಮುನ್ನ R.C.ರವರು



R.C.ರವರ ಇಬ್ಬರು ಮಕ್ಕಳ ಮದುವೆಯ ದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರೊಂದಿಗೆ ನವದಂಪತಿಗಳು



ಮದುವೆಯ ದಿನ ಆರತಕ್ಷತೆಯಲ್ಲಿ ನಮ್ಮ ತಂದೆಯವರು ಅಸ್ವಸ್ಥರಾಗಿದ್ದರಿಂದ ನಮ್ಮ ತಾಯಿಯವರು ಮಾತ್ರ ನವ ದಂಪತಿಗಳೊಂದಿಗೆ ತೆಗೆಸಿಕೊಂಡಿರುವ ಛಾಯಾಚಿತ್ರ

ನನ್ನ ಅಣ್ಣ ಗೋವಿಂದರಾಜು ಮತ್ತು ಶಾಲಿನಿಯವರ ಮದುವೆ ಹಾಗೂ ನನ್ನ ಹಾಗೂ ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವನಹಳ್ಳಿಯ ಆಟದ ಪೆನ್ನಯ್ಯವರ ಎರಡನೇ ಮಗನಾದ ಡಾ. ಜಯಶಂಕರಪ್ಪನವರ ಮದುವೆ ಒಂದೇ ದಿನ ಅಂದರೆ ದಿನಾಂಕ 15-04-1960 ರಂದು ನಿಗದಿಯಾಗಿತ್ತು. ಇವತ್ತಿನ ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಇರುವ ಜನರಲ್ ಹಾಸ್ಟೆಲ್‌ನಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಬ್ರಹ್ಮ ಸಮಾಜದ ಶೈಲಿಯಲ್ಲಿ ನಡೆಯಿತು. ಈ ನಮ್ಮ ಮದುವೆ ಸಂದರ್ಭದಲ್ಲಿ R.C. ರವರು ಮಾಜಿ ಮಂತ್ರಿಗಳಾಗಿದ್ದರಿಂದ ಅಂದಿನ ರಾಜ್ಯ ಸರ್ಕಾರದ ಮಂತ್ರಿವರ್ಯರು, ಎಂ.ಎಲ್.ಎ.ಗಳು, ಕೇಂದ್ರ ಸರ್ಕಾರದ ರಾಜಕೀಯ ವ್ಯಕ್ತಿಗಳು ಹಾಗೂ ಸರ್ಕಾರದ ಅನೇಕ ಅಧಿಕಾರಿಗಳು ಬಂದಿದ್ದರು. ಊರುಗಳಿಂದ ಬಂದಿದ್ದ ಎಲ್ಲ ಬಂಧು ಮಿತ್ರರು ಸೇರಿ ಮೈಸೂರು ಬ್ಯಾಂಕ್‌ನ ರಸ್ತೆ ತುಂಬಿ ಹೋಗಿ, ಇಂದಿನ ಮೈಸೂರು ಬ್ಯಾಂಕ್ ಸರ್ಕಲ್ ನಿಂದ ಮಹಾರಾಣಿ ಕಾಲೇಜು ಸರ್ಕಲ್‌ನವರೆಗೂ ಯಾವ ವಾಹನಗಳು ಚಲಿಸದಂತೆ ತಡೆ ಹಿಡಿಯಲಾಗಿತ್ತು. ಮೈಸೂರು ಬ್ಯಾಂಕ್ ಸರ್ಕಲ್ ನಿಂದ ಮಹಾರಾಣಿ ಸರ್ಕಲ್ ಎರಡೂ ಕಡೆ ಟ್ರಾಫಿಕ್ ಜಾಮ್ ಆಗಿತ್ತು. ಪೋಲಿಸರು ರೂಟ್ ಬದಲಿಸಿ ಬರುವ ವಾಹನಗಳನ್ನು ಬೇರೆ ಕಡೆ ಕಳುಹಿಸಿದರು ಹಾಗು ಪೋಲಿಸಿನವರು ಎರಡೂ ಸರ್ಕಲ್‌ನಿಂದ ಜನರನ್ನು ಬಿಡುತ್ತಿದ್ದರು. ಮದುವೆಗೆ ಮಹಾರಾಜರನ್ನು ಕರೆದಿದ್ದರು. 15-04-1960, ಅವತ್ತೇ ಅವರಿಗೆ ಆಫ್ರಿಕಾಕ್ಕೆ ಹೋಗುವುದು ಎಂದು ತಿಳಿಸಿದರಂತೆ, ಖಂಡಿತಾ ಬರುತ್ತಿದ್ದೆ ಎಂದರಂತೆ. ಎಷ್ಟೋ ಜನ ಮದುವೆಗೆ ಒಳಗೆ ಬರುವುದಕ್ಕೆ ಜಾಗವಿಲ್ಲದೆ ಅಂಜಿಕೆಯಿಂದ, ಹಿಂದಕ್ಕೆ ಹೋದರಂತೆ, ನನ್ನ ಮದುವೆಗೆ ಬಂದಿದ್ದ ಸ್ನೇಹಿತರು ಹೀಗೆ ಹೇಳಿದರು. ಈ ರೀತಿ ನಮ್ಮ ಮದುವೆ ಇಂದಿನ ಕಾಲದ ವಿಜೃಂಭಣೆಯಿಂದ ಕೂಡಿರದಿದ್ದರೂ ಜನ ಸಂದಣಿಯಿಂದ ವಿಜೃಂಭಿಸುತ್ತಿತ್ತು. ನಮ್ಮ ಮದುವೆ ಸಂದರ್ಭವು

ಎಲ್ಲರ ಮದುವೆಯಂತೆ ನಡೆದಿದ್ದರೆ ಇಲ್ಲಿ ಅದನ್ನು ತಿಳಿಸುವ ವಿಶೇಷವೇನೂ ಇರುತ್ತಿರಲಿಲ್ಲ. ಆದರೆ R.C. ರವರ ವ್ಯಕ್ತಿತ್ವವನ್ನು ಬಿಂಬಿಸುವ ಘಟನೆ ನಡೆಯಿತು.

ಮದುವೆಯ ದಿನ ಧಾರೆ ಮಹೂರ್ತಕ್ಕೆ ಹೋಗುವ ಮುನ್ನ ನಾನು ನಮ್ಮ ತಂದೆಯವರ ಆಶೀರ್ವಾದ ಪಡೆಯಲು ಕಾಲಿಗೆ ಬೀಳುವಾಗ ಅವರ ಬಾಯಿಂದ ಮಾತೇ ಹೊರಡಲಿಲ್ಲ. ಆಘಾತವಾಗಿ ಎದೆ ನೋವಿನಿಂದ ತುಂಬಾ ಸುಸ್ತಾದರು. ಸಾಯಂಕಾಲದ, ಆರತಕ್ಷತೆಗೆ ಅವರು ಏಳುವುದಕ್ಕೆ ತ್ರಾಣವಿಲ್ಲದಂತೆ ಜ್ವರ ಜಾಸ್ತಿ ಆಯಿತು. ಆಗ ನಮ್ಮ ತಂದೆಯ ಆಪ್ತ ಸ್ನೇಹಿತರು ಜವಾಬ್ದಾರಿಯಿಂದ ಮದುವೆಗೆ ಬಂದ ಎಲ್ಲಾ ಜನರನ್ನು ಅವರೇ ಸ್ವಾಗತಿಸಿ ಸತ್ಕರಿಸಿದರು. ಇದರಲ್ಲಿ ಮುಖ್ಯವಾಗಿ ಕೆ.ಸಿ.ರೆಡ್ಡಿ, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯನವರು, ಭೀಮಪ್ಪನಾಯಕರು, ಈಶ್ವರ್‌ರಾವ್ ಮತ್ತು ಇತರರು ಮುಂದೆ ನಿಂತು ಮದುವೆ ಮಾಡಿದರು. ಸಾಮಾನ್ಯವಾಗಿ ಮದುವೆ ಮುಗಿದ ಮೇಲೆ ಗಂಡು ಹೆಣ್ಣುಗಳನ್ನು ಮನೆ ತುಂಬಿಕೊಳ್ಳುವ ಶಾಸ್ತ್ರ ಇರುತ್ತದೆ. ಆದರೆ, ನಮ್ಮ ಕೈಯಲ್ಲಿನ ಕಂಕಣ ಕೂಡ ಬಿಚ್ಚಿರಲಿಲ್ಲ. ಮರುದಿನ ಬೆಳಗಿನ ಜಾವ ನಮ್ಮ ತಂದೆಯವರನ್ನು ಆಂಬ್ಯುಲೆನ್ಸ್ ಕರೆಯಿಸಿ, ವಿಕ್ಟೋರಿಯ ಜಯದೇವ ಆಸ್ಪತ್ರೆಗೆ ಸೇರಿಸಿದೆವು. ಅವರ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ಬದುಕಿ ಉಳಿಯುವುದು ಕಷ್ಟವೆಂದು ವೈದ್ಯರು ಹೇಳಿದರು. ಎರಡು ದಿನ I.C.U.ನಲ್ಲಿ ಇಟ್ಟಿದ್ದರು. ಕಂಡ ಕಂಡ ದೇವರಿಗೆ ತಾಯಿ ಮಕ್ಕಳು ಮೊರೆ ಹೋದೆವು. ಬೆಂಗಳೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಮ್ಮ ತಾಯಿ ಬೆಳಗಿನ ಜಾವ ಹೋಗಿ ಪೂಜೆ ಮಾಡಿಸಿದರು. ಪ್ರಪಂಚವೇ ಶೂನ್ಯವಾಗಿ ಕಂಡಿತು. ಚಿಕ್ಕಮಕ್ಕಳುಗಳು, ನಮ್ಮ ತಾಯಿ ವಿದ್ಯಾವಂತೆಯಲ್ಲ. ಆದರೂ ಧೈರ್ಯದಿಂದ ಎಲ್ಲವನ್ನೂ ನಿಭಾಯಿಸಿದರು. "ತಿರುಪತಿ ತಿಮ್ಮಪ್ಪನಿಗೆ ಹರಕೆ ಮಾಡಿಕೊಳ್ಳಿ, ಖಂಡಿತ ಒಳ್ಳೆಯದು ಆಗುತ್ತೆ" ಎಂದು ನಮ್ಮ ಹಿತೈಷಿಗಳು ಹೇಳಿದರು.

ಆಗ ನಮ್ಮ ಅಣ್ಣ ಗೋವಿಂದರಾಜು ತುಂಬಾ ಇಷ್ಟಪಟ್ಟು ಮಾಡಿಸಿಕೊಂಡಿದ್ದ ಕಲ್ಲಿನ ಉಂಗುರವನ್ನು ಕಾಣಿಕೆಯಾಗಿ ಅರ್ಪಿಸಿದರು. ನಮ್ಮ ತಾಯಿ ಸಹ ಹರಕೆ ಮಾಡಿಕೊಂಡರು. ಆಗಲೇ ನಮಗೆಲ್ಲಾ ತಿರುಪತಿ ತಿಮ್ಮಪ್ಪನ ಪವಾಡದ ಅನುಭವವಾಯಿತು. ಎರಡು ದಿನಗಳು ಜ್ಞಾನವಿಲ್ಲದೆ ಮಲಗಿದ್ದ ನಮ್ಮ ತಂದೆಯರಿಗೆ ಪ್ರಜ್ಞೆ ಬಂದಿತು. ತುಂಬಾ ಹುಷಾರಾಗಿ ನೋಡಿಕೊಳ್ಳುವಂತೆ ವೈದ್ಯರು ಹೇಳಿದ್ದರು. ಚಿಕ್ಕ ವಯಸ್ಸಿನ ಒಬ್ಬ ವೈದ್ಯರು ಇಂಜೆಕ್ಷನ್ ಕೊಡುವುದಕ್ಕೆ ಬಂದರು. ಅವರು ಆಸ್ಪತ್ರೆಗೆ ಹೊಸಬರು. R.C. ರವರು ಕುತೂಹಲದಿಂದ "ಯಾವ ಇಂಜೆಕ್ಷನ್ ಕೊಡುತ್ತಿದ್ದೀರಿ?" ಎಂದು ಕೇಳಿದರು. ಆಗ ಆ ವೈದ್ಯರು "ಸುಮ್ಮನೆ ಬಾಯಿ ಮುಚ್ಚಿಕೊಂಡು ತೆಗೆದುಕೊಳ್ಳಿ" ಎಂದು ಉದಾಸೀನದಿಂದ ಮಾತಾಡಿದರು. ಅದಕ್ಕೆ ಬೇಸರ ಮಾಡಿಕೊಂಡು ನಮ್ಮ ತಂದೆಯವರು "ಏನೂ ಮಾಡಿದರೂ ನಾನು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದಿಲ್ಲ. ಮನೆಗೆ ಹೋಗೋಣ" ಎಂದು ಹಠ ಹಿಡಿದರು. ಅವರನ್ನು ಮಲಗಿದ್ದ ಮಂಚದಿಂದ ಅಲ್ಲಾಡಿಸುವುದು ಕಷ್ಟವಾಗಿತ್ತು. ಅಂತಹ ಸ್ಥಿತಿಯಲ್ಲಿ ಮನೆಗೆ ಹೇಗೆ ಕರೆದುಕೊಂಡು ಹೋಗುವುದು. ಆಗ ಎಲ್ಲಾ ದೊಡ್ಡ ದೊಡ್ಡ ವೈದ್ಯರುಗಳು ಸೇರಿ ಮೀಟಿಂಗ್ ಮಾಡಿ R.C.ರವರನ್ನು ಆಸ್ಪತ್ರೆಯಲ್ಲಿ ಇರುವಂತೆ ಕೇಳಿಕೊಂಡರು. ಮಾಜಿ ಮುಖ್ಯಮಂತ್ರಿಗಳಾದ ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಇತರೆ ಮಂತ್ರಿಗಳು ಹಾಗೂ ತಂದೆಯವರ ಆಪ್ತ ಸ್ನೇಹಿತರು, ಎಲ್ಲರೂ ಉಪಸ್ಥಿತರಿದ್ದರು. ನಮ್ಮ ತಾಯಿ ಕೂಡ "ಸ್ವಲ್ಪ ಶಾಂತಿ ಸಮಾಧಾನ ಮಾಡಿಕೊಳ್ಳಿ" ಎಂದು ಹೇಳಿದರು. ಎಷ್ಟು ಹೇಳಿದರೂ R.C. ರವರು ಕೇಳಲಿಲ್ಲ. "ನಾನು ನನ್ನ ಪ್ರಾಣಕ್ಕೆ ಹೆದರುವುದಿಲ್ಲ. ನನಗೆ ಮರ್ಯಾದೆ, ಗೌರವ ಮುಖ್ಯ ಅಷ್ಟೇ" ಎಂದು ಹೇಳಿದರು. ಆಗ ತಕ್ಷಣ ಇನ್ನೊಮ್ಮೆ ಎಲ್ಲಾ ದೊಡ್ಡ ವೈದ್ಯರುಗಳು ಸೇರಿ ಮೀಟಿಂಗ್ ಮಾಡಿ, ಅಂಬುಲೆನ್ಸ್‌ನಲ್ಲಿ ಆಕ್ಸಿಜನ್ ಹಾಕಿಕೊಂಡು ಒಬ್ಬ ವೈದ್ಯರೊಂದಿಗೆ


ಕುಮಾರಪಾರ್ಕ್‌ನಲ್ಲಿ ಇರುವ ಒಂದು ಕಾಟೇಜ್‌ಗೆ ಸ್ಥಳಾಂತರಿಸಿದರು. ಒಬ್ಬ ವೈದ್ಯರನ್ನು ಇವರ ಹತ್ತಿರ ಡ್ಯೂಟಿ ಮಾಡುವಂತೆ ಸರ್ಕಾರದಿಂದ ಗೊತ್ತು ಮಾಡಿದರು. 3 ತಿಂಗಳ ಕಾಲ ಆಸ್ಪತ್ರೆಯಲ್ಲಿ ಏನು ವ್ಯವಸ್ಥೆ ಇರುತ್ತದೆ, ಅದೆಲ್ಲಾ ವ್ಯವಸ್ಥೆ ಇರುವಲ್ಲಿಯೇ ಮಾಡಿದರು. ಆಗ ಡ್ಯೂಟಿ ಡಾಕ್ಟರ್ ಆಗಿ ಹೊಸದಾಗಿ ಮದುವೆಯಾದ, R.C.ರವರ ಎರಡನೇ ಅಳಿಯ, ಆಟದ ಪೆನ್ನಯ್ಯನವರ ಎರಡನೇ ಮಗ ಡಾ.ಜಯಶಂಕರಪ್ಪ ನವರನ್ನು ಗೊತ್ತು ಮಾಡಿದರು. ನಾನು ಇಷ್ಟೆಲ್ಲಾ ಯಾಕೆ ಬರೆದಿದ್ದೇನೆ ಎಂದರೆ R.C.ರವರು ಎಂತಹ ಸ್ವಾಭಿಮಾನಿ ಹಾಗೂ ಹಠವಾದಿ ಎಂದರೆ ಮರ್ಯಾದೆ, ಗೌರವ ಇಲ್ಲದ ಜಾಗದಲ್ಲಿ ಪ್ರಾಣ ಹೋದರೂ ಸಹ ಒಂದು ಕ್ಷಣ ಕೂಡ ಅಲ್ಲಿ ಇರುವುದಕ್ಕೆ ಇಷ್ಟ ಪಡುತ್ತಿರಲಿಲ್ಲ.

ಈ ಸಂದರ್ಭದಲ್ಲಿ ನನ್ನ ತಂದೆಯವರ ಜೀವನದಲ್ಲಿ ನಡೆದ ಮತ್ತೊಂದು ಘಟನೆಯು ನೆನಪಾಗುತ್ತದೆ. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ನಮ್ಮ ತಂದೆ R.C. ರವರು ಹಾಗೂ ತುಮಕೂರಿನ ಎಂ.ವಿ.ರಾಮ್‌ರಾವ್ ಅವರು ಮಂತ್ರಿಗಳಾಗಿದ್ದರು. ಅವರೂ ಸಹ ನಮ್ಮ ತಂದೆಯ ಒಳ್ಳೆಯ ಸ್ನೇಹಿತರು. ಅವರ ಪುತ್ರಿಯ ಮದುವೆಗೆ ನಮ್ಮ ತಂದೆಯವರನ್ನು ಆಹ್ವಾನಿಸಿದ್ದರು. ನಮ್ಮ ತಂದೆಯವರು ತುಮಕೂರಿನ T.B.ಯಲ್ಲಿ ಇದ್ದುಕೊಂಡು ದೂರವಾಣಿ ಮೂಲಕ "ನಾನು ತುಮಕೂರಿಗೆ ಬಂದಿರುವೆ. ನಾನು ನೀವು ಸ್ನೇಹಿತರು. ನಮ್ಮಲ್ಲಿ ಯಾವ ಜಾತಿಯ ಬೇಧವಿಲ್ಲ. ಆದರೆ ನಾನು ಬರುವುದು ನಿಮ್ಮ ಕುಟುಂಬದವರಿಗೆ ಇಷ್ಟವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ನಿಮ್ಮ ಕುಟುಂಬ ಮತ್ತು ಸಂಬಂಧಿಕರು ಶಾಸ್ತ್ರ, ಸಂಪ್ರದಾಯ ಮುಗಿಸಿದ ಮೇಲೆ ಕಡೆಯಲ್ಲಿ ಬಂದು ವಧು ವರನಿಗೆ ಆಶೀರ್ವಾದ ಮಾಡುವೆ" ಎಂದು ಹೇಳಿದರು. ಅದಕ್ಕೆ ಎಂ.ವಿ.ರಾಮ್‌ರಾವ್ ಅವರು "ಯಾರು ಏನೂ ಹೇಳುವುದಿಲ್ಲ. ನೀವು ಬರುವ ತನಕ ಊಟ ನಾನು ಮಾಡುವುದಿಲ್ಲ. ನೀವು ಬರುವ ದಾರಿ ಕಾಯುತ್ತೇನೆ. ನಿಮ್ಮ

ಜೊತೆಯಲ್ಲೇ ಊಟ ಮಾಡುವೆ" ಎಂದು ಹೇಳಿದರಂತೆ. ಈ ಘಟನೆಯಿಂದ ಇವರ ಸ್ವಭಾವ ಹೇಗಿತ್ತು ಎಂದು ತಿಳಿಯಬಹುದು. 'ನನ್ನಿಂದ ಬೇರೆಯವರಿಗೆ ಜಾತಿಯ ವಿಷಯದಲ್ಲಿ ನೋವು ಆಗಬಾರದು. ನಾನು ಈಗ ಮಂತ್ರಿಯಾಗಿರುವೆ ಎಂದು ದುರುಪಯೋಗ ಮಾಡಬಾರದು' ಎಂದು ಹೇಳಿದರು. ಅವರು ತುಂಬಾ ಸ್ವಾಭಿಮಾನಿ. ಅದಕ್ಕೆ ಎಲ್ಲಾ ಜಾತಿಯವರು ಅವರಿಗೆ ಗೌರವ ಕೊಡುತ್ತಿದ್ದರು ಮತ್ತು ಎಲ್ಲಾ ಜಾತಿಯ ಜನರ ಸ್ನೇಹ ಇವರಿಗೆ ಇತ್ತು.

❖

16. R.C.ರವರಿಂದ ಕೊರಟಗೆರೆಯ ಶ್ರೀ ಗುಂಡಾಂಜನೇಯಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ.



ಕೊರಟಗೆರೆಯ ಶ್ರೀ ಗುಂಡಾಂಜನೇಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಕೈಗೊಂಡ R.C. ರವರು

ಬಹಳ ವರ್ಷಗಳಿಂದಲೂ ಕೊರಟಗೆರೆಯ ಒಂದು ದೊಡ್ಡ ಬಂಡೆಯಲ್ಲಿ ಉದ್ಭವವಾದ ಗುಂಡಾಂಜನೇಯ ಸ್ವಾಮಿಯ ಸುಂದರವಾದ ಮೂರ್ತಿ ಇದೆ. ಆಗಿನ ಕೊರಟಗೆರೆಯ ರಣಬೈರೇಗೌಡ ಪಾಳೇಗಾರರು ಯುದ್ಧಕ್ಕೆ ಹೋಗುವ ಮುನ್ನ ಗೆಲುವಿಗಾಗಿ ಸ್ವಾಮಿಗೆ ಮೊರೆ ಹೋಗಿ.

ಯುದ್ಧದಲ್ಲಿ ಜಯಶಾಲಿಗಳಾಗಿ ಹಿಂತಿರುಗುತ್ತಿದ್ದರು. ಆದ್ದರಿಂದ ಈ ದೇವಾಲಯವನ್ನು ಕಟ್ಟಿಸಿದರೆಂದು ಪ್ರತೀತಿ ಇದೆ.

ಒಮ್ಮೆ ಊರಿನಲ್ಲಿ ಕಾಲರ ಹಾಗೂ ಪ್ಲೇಗು ಖಾಯಿಲೆ ತೀವ್ರವಾಗಿ ಊರಿನಲ್ಲೆಲ್ಲಾ ವ್ಯಾಪಿಸಿಕೊಂಡಿತು. ಆಗ ಊರಿನ ಜನ ತುಂಬಾ ಹೆದರಿ, ಊರನ್ನು ಬಿಟ್ಟು, ಊರಿನ ಹೊರಗೆ ಇರುವ ತಮ್ಮ ತಮ್ಮ ಜಮೀನುಗಳಲ್ಲಿ ಮನೆ ಮಾಡಿಕೊಂಡು ಹೋದರು. ಊರಿನಲ್ಲಿ ಜನರು ಇಲ್ಲದ ಕಾರಣ ಗುಂಡಾಂಜನೇಯ ಸ್ವಾಮಿಯ ದೇವಸ್ಥಾನ ಪಾಳು ಬಿದ್ದಿತು. ನಮ್ಮ ತಾತ ಗುಬ್ಬಿ ತಾತಯ್ಯನವರು ಪಾಳು ಬಿದ್ದ ಗುಂಡಾಂಜನೇಯ ಸ್ವಾಮಿಯ ದೇವಸ್ಥಾನದಲ್ಲಿ ಮಕ್ಕಳಿಗೆ ಜ್ವರ, ಬಾಲಗ್ರಹ, ಹೀಗೆ ಅನೇಕ ತರಹ ಖಾಯಿಲೆಗಳಿಗೆ ಯಂತ್ರ ಕಟ್ಟಿ ಮಂತ್ರ ಹಾಕಿ ಗುಣ ಪಡಿಸುತ್ತಿದ್ದರು. ಅದೇ ರೀತಿ ದೆವ್ವದ ಕಾಟ ಇರುವವರಿಗೆ ತಮ್ಮ ಮಂತ್ರ ಶಕ್ತಿಯಿಂದ ಹಿಡಿದ ದೆವ್ವ ಬಿಡಿಸುತ್ತಿದ್ದರು. ಹೀಗೆ ಈ ಸ್ಥಳದಲ್ಲಿ ಊರಿನ ಜನರು ತಮ್ಮ ತೊಂದರೆಗಳಿಂದ ಮುಕ್ತರಾಗುತ್ತಿದ್ದರಿಂದ, ಗುಬ್ಬಿ ತಾತಯ್ಯನವರು ಆ ಸ್ಥಳದ ಮಹಿಮೆ ಅರಿತು ದೇವಸ್ಥಾನ ಜೀರ್ಣೋದ್ಧಾರ ಮಾಡಬೇಕೆಂದು ಮನಸ್ಸು ಮಾಡಿದರು.

ಸುತ್ತು ಮುತ್ತಲಿನ ಹಳ್ಳಿಗಳಿಂದ ದೇವಸ್ಥಾನಕ್ಕೆ ಬಂದ ಜನರು ನೀಡುತ್ತಿದ್ದ ಹಣವನ್ನು ಹಾಗೂ ಕೊರಟಗೆರೆಯಲ್ಲಿ ನಾಟಕ ಮಾಡಿಸಿ ಗಳಿಸಿದ ಹಣವನ್ನು ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕೂಡಿಟ್ಟಿದ್ದರು. ಅಷ್ಟರಲ್ಲಿ ಅವರಿಗೆ ಆರೋಗ್ಯಸ್ಥಿತಿ ಹದಗೆಟ್ಟಿತು. ಆಗ R.C.ರವರು ಅವರನ್ನು ಬೆಂಗಳೂರಿಗೆ ಕರೆದು ತಂದು ಬೌರಿಂಗ್ ಆಸ್ಪತ್ರೆಗೆ ಸೇರಿಸಿದರು. ಸ್ವಲ್ಪ ಸುಧಾರಿಸಿಕೊಂಡ ನಂತರ ಬೆಂಗಳೂರಿನ ಮನೆಗೆ ಕರೆತಂದರು. ಆಗ ಅವರು "ನಾನು ಇನ್ನು ಹೆಚ್ಚು ಕಾಲ ಉಳಿಯುವುದಿಲ್ಲ, ನನ್ನನ್ನು ಊರಿಗೆ ಕರೆದುಕೊಂಡು ಹೋಗು" ಎಂದು ಬಲವಂತ ಮಾಡಿದರು. ಆದರೆ, R.C. ರವರು ತಮ್ಮ ತಂದೆಯವರ ಆರೋಗ್ಯ ಸ್ಥಿತಿಯನ್ನು

ಗಮನಿಸಿ, ಮತ್ತೊಮ್ಮೆ ಬೌರಿಂಗ್ ಆಸ್ಪತ್ರೆಗೆ ಸೇರಿಸಿದರು. ಆಗ ವೈದ್ಯರು ಆಪರೇಷನ್ ಮಾಡಬೇಕು, ಎಂದು ಹೇಳಿದರು. ಅದಕ್ಕೆ ನಮ್ಮ ತಾತ ಒಪ್ಪಲಿಲ್ಲ.

ಆಸ್ಪತ್ರೆಯಲ್ಲಿದ್ದಾಗ ಅವರನ್ನು ನೋಡುವುದಕ್ಕೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ಬಂದಿದ್ದರು. ಆಗ ನಮ್ಮ ತಾತ ಅವರನ್ನು ಕುರಿತು "ಸ್ವಾಮಿ ಒಂದು ಮಾತು ನಿಮಗೆ ಹೇಳಬೇಕು" ಎಂದು ಕೇಳಿದರು. ಆಗ ಎಸ್. ನಿಜಲಿಂಗಪ್ಪನವರು "ನೀವು ಹಿರಿಯರು, ನೀವು ಹೇಳುವ ಮಾತು ನಮಗೆ ಹಿತವಚನಗಳು ಮತ್ತು ಆಶೀರ್ವಾದ" ಎಂದು ಹೇಳಿದಾಗ ನಮ್ಮ ತಾತನವರು ಕೊಟ್ಟ ಸಂದೇಶ "ಕೊಟ್ಟ ಭಾಷೆಗೆ ತಪ್ಪಲಾರೆನು, ಕೆಟ್ಟ ಯೋಚನೆ ಮಾಡಲಾರೆನು, ಹೆಬ್ಬುಲಿಯ ಬಾಯನ್ನು ಸೇರುವೆನು, ಎಂದು ಪುಣ್ಯಕೋಟಿ ಪಶುವು ಹೇಳಿದೆ. ನಮ್ಮ ರಾಜಕಾರಣಿಗಳು, ಮಹಾತ್ಮ ಗಾಂಧಿಯವರಿಗೆ ಕೊಟ್ಟ ಭಾಷೆಯನ್ನು ಮರೆತು, ರಾಜ್ಯದಲ್ಲಿ ಪಾನನಿರೋಧವನ್ನು ರದ್ದುಗೊಳಿಸಿ ಬಡವರನ್ನು ಕುಡಿತಕ್ಕೆ ಬಲಿ ಕೊಡುವ ಶಾಸನ ಮಾಡಲು ಹೊರಟಿದ್ದಾರೆ. ಇದು ಪಾಪದ ಪರಮಾವಧಿ. ಮಹಾತ್ಮ ಗಾಂಧೀಜಿಯವರು ಬದುಕಿದ್ದರೆ, ಇದನ್ನು ಕೇಳಿ ಮತ್ತೊಂದು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು, ದಯಮಾಡಿ ಇದರ ಕಡೆ ಗಮನ ಕೊಡಿ" ಎಂದು ಹೇಳಿದರು.

ಅದಾದ ಸ್ವಲ್ಪ ದಿನಗಳಲ್ಲಿ ಖಾಯಿಲೆ ಜಾಸ್ತಿಯಾಗಿ ಕೊರಟಗೆರೆಗೆ ಕರೆದುಕೊಂಡು ಹೋದರು. ಪ್ರಾಣ ಹೋಗುವ ಮುನ್ನ ಮಗ ಚೆನ್ನಿಗರಾಮಯ್ಯನವರನ್ನು ಕುರಿತು "ನಾನು ಮಾಡಬೇಕಾದ ಕೆಲಸ ಅರ್ಧಕ್ಕೆ ನಿಂತು ಹೋಗಿದೆ. ನೀನು ಅದನ್ನು ಪೂರ್ತಿ ಮಾಡುವೆ ಎಂಬ ನಂಬಿಕೆಯಿಂದ ಹೇಳುತ್ತೇನೆ, ದೇವಸ್ಥಾನದ ಜೀರ್ಣೋದ್ಧಾರದ ಕೆಲಸ ಪೂರ್ತಿ ಮಾಡು" ಎಂದು ಹೇಳಿ ಮಗನಿಂದ ಭಾಷೆ ತೆಗೆದುಕೊಂಡು ಪ್ರಾಣ ಬಿಟ್ಟರು.

ಮುಂದಿನ ದಿನಗಳಲ್ಲಿ R.C. ರವರು ತಮ್ಮ ತಂದೆಗೆ ಕೊಟ್ಟ ಭಾಷೆಯನ್ನು ಉಳಿಸಿ, ದೇವಸ್ಥಾನದ ಜೀರ್ಣೋದ್ಧಾರದ ಕೆಲಸ ಮುಂದುವರಿಸಿ, ಊರಿನ ಜನರ ಸಹಕಾರದಿಂದ ಶ್ರೀ ಗುಂಡಾಂಜನೇಯ ಸ್ವಾಮಿ ದೇವಸ್ಥಾನವನ್ನು ಪುನ: ಕಟ್ಟಿಸಿದರು. ದೇವಸ್ಥಾನದ ಉದ್ಘಾಟನಾ ಸಮಾರಂಭಕ್ಕೆ ಶ್ರೀಶ್ರೀಶ್ರೀ ಶಿವಕುಮಾರಸ್ವಾಮಿ ಮತ್ತು ತಾಲ್ಲೂಕಿನ ಗಣ್ಯ ವ್ಯಕ್ತಿಗಳನ್ನು ಕರೆಸಿ ಪ್ರಾರಂಭೋತ್ಸವ ಮಾಡಿಸಿದರು. ಈ ರೀತಿ R.C. ರವರು ತಮ್ಮ ತಂದೆಗೆ ಕೊಟ್ಟ ಮಾತಿನಂತೆ ಪಾಳು ಬಿದ್ದಿದ್ದ ಕೊರಟಗೆರೆಯ ಶ್ರೀ ಗುಂಡಾಂಜನೇಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡರು.

❖

17. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು R.C. ರವರನ್ನು M.P.S.C. ಚೇರ್ಮನ್ ಮಾಡಿದ ಸಂದರ್ಭ.



Mysore Public Service Commission ನ Chairman ಆದ ಸಂದರ್ಭದಲ್ಲಿ R.C.ರವರು ಬೆಂಗಳೂರಿನ ತಮ್ಮ ನಿವಾಸದಲ್ಲಿ

ನಿಜಲಿಂಗಪ್ಪನವರು R.C.ಯವರನ್ನು ಸ್ವಲ್ಪ ದಿನದ ನಂತರ ಮಂತ್ರಿ ಪದವಿಯಿಂದ ತೆಗೆದು ಹಾಕಿದರು. ಅದಕ್ಕೆ ನಮ್ಮ ತಾತ ಹೋಗಿ ನಿಜಲಿಂಗಪ್ಪನವರ ಹತ್ತಿರ ಮಾತಾಡಿದರು. ನನ್ನ ಮಗನಿಂದ ಯಾವ ತಪ್ಪು ಅಥವಾ ಅಪರಾಧವಾಗಿದೆ ಎಂದು ಕೇಳಿದರಂತೆ. ಮನೆಯಲ್ಲಿ

ಚಿಕ್ಕ ಮಕ್ಕಳು ಮನೆ ತುಂಬಾ ಜನ, 15–20 ಜನ ಇರುವಂತಹ ಕುಟುಂಬ. ಮನೆಗೆ ಇವನೊಬ್ಬನೇ ಆಧಾರಸ್ತಂಭ. ನ್ಯಾಯರೀತಿಯಲ್ಲಿ ಬಾಳಿದವನು ಎಂದು ಹೇಳಿದರಂತೆ. ಅದಕ್ಕೆ "ಯಜಮಾನರೇ, ನೀವು ತಪ್ಪು ತಿಳಿದುಕೊಂಡಿದ್ದೀರ, ಅವರಿಗೆ ಇನ್ನೂ ಜವಾಬ್ದಾರಿ ಮತ್ತು ಉನ್ನತ ಜಾಗ ಕಾದಿರಿಸಿದ್ದೇನೆ. ಬೇಜಾರು ಮಾಡಿಕೊಳ್ಳಬೇಡಿ. *Mysore Public Service Commission* ಆಫೀಸು ವ್ಯವಸ್ಥೆ ಸರಿಪಡಿಸಬೇಕಾಗಿದೆ. ಅಲ್ಲಿಯ ಜಾಗಕ್ಕೆ ಒಬ್ಬ ಒಳ್ಳೆಯ, ನಿಷ್ಠಾವಂತ, ನ್ಯಾಯವಂತರು ಬೇಕು ಎಂದು ಈ ರೀತಿ ಮಾಡಿದೆ " ಎಂದು ಹೇಳಿದರಂತೆ.

ಒಮ್ಮೆ K.A.S. ಅಧಿಕಾರಿಗಳ ಇಂಟರ್‌ವ್ಯೂ ನಡೆಯುವ ಸಂದರ್ಭ. ಆಗ R.C.ಯವರ ಸ್ವಂತ ಅಳಿಯನವರ ಇಂಟರ್‌ವ್ಯೂ ಇತ್ತು. ಮನೆಯಲ್ಲಿ ತುಂಬಾ ಮಾತುಗಳು, ವಾದವಿವಾದಗಳು, ಮನಸ್ತಾಪಗಳು ಆಗಿತ್ತು. ಅಳಿಯನಿಗೆ ಸೆಲೆಕ್ಟ್ ಮಾಡಬೇಕು ಎಂದು ಎಲ್ಲರ ಒತ್ತಡ ಇತ್ತು. ಆದರೆ ಇವರು ನ್ಯಾಯದ ಮುಂದೆ ಯಾರು ದೊಡ್ಡವರಲ್ಲ ಎಂದು ಅಳಿಯ ಇಂಟರ್‌ವ್ಯೂ ಬರುವ ಜಾಗವನ್ನು ಬಿಟ್ಟು ಬೇರೆ ಗುಂಪಿನಲ್ಲಿ ಕುಳಿತರಂತೆ. Candidate ಅನ್ನು ಆಯ್ಕೆ ಮಾಡುವ ಇಂಟರ್‌ವ್ಯೂ ಕಮಿಟಿ 2 ಭಾಗಗಳಾಗಿ ಕೆಲಸ ನಿರ್ವಹಿಸುತ್ತಿದ್ದವು. ಅಳಿಯ ಬರುವ ಕಮಿಟಿ ಬದಲಾಯಿಸಿದರಂತೆ. ಅಳಿಯ ಸೆಲೆಕ್ಟ್ ಆಗಿಲ್ಲವೆಂದು ಮನೆಯಲ್ಲಿ ಗಲಾಟೆ ಆಯಿತು ಮತ್ತು ಕುಟುಂಬದವರು ಮತ್ತು ಬಂಧುಗಳಿಂದ ತುಂಬಾ ನಿಷ್ಟುರಕ್ಕೆ ಒಳಗಾದರು.


ಮತ್ತೊಂದು ಘಟನೆ ಎಂದರೆ ಒಂದು ದಿನ ಒಬ್ಬ ವ್ಯಕ್ತಿ ಬಂದು, ಹಣ್ಣು, ಹೂ ತಂದು ಕೊಟ್ಟಿದ್ದನು. R.C.ಯವರು "ಮನೆ ಹತ್ತಿರ ಬಂದು ಏನಾದರೂ ಹೇಳಿದರೆ ಮತ್ತು ಏನಾದರೂ ತಂದು ಕೊಟ್ಟರೆ ತೆಗೆದುಕೊಳ್ಳಬಾರದು" ಎಂದು ಮುಂಚೆಯೇ ಹೇಳಿದ್ದರು. "ನೀವು ಏನಿದ್ದರೂ ಆಫೀಸಿನಲ್ಲಿ ಮಾತನಾಡಿ ಎಂದು ಹೇಳಿ ಕಳುಹಿಸಿ. ನೀವು

ಆಫೀಸು ವಿಚಾರದಲ್ಲಿ ತಲೆ ಹಾಕಿದರೆ ನನಗೆ ಕೆಟ್ಟ ಕೋಪ ಬರುತ್ತದೆ" ಎಂದು ಹೇಳಿದ್ದರು. ಯಾರನ್ನೂ ಮನೆ ಹತ್ತಿರ ಸೇರಿಸುತ್ತಿರಲಿಲ್ಲ. ತಂದೆಯ ಪರಿಚಯ ಇರುವವರು ಕರೆದುಕೊಂಡು ಬಂದಿದ್ದರು. ಹಣ್ಣು, ಹೂ ಕೊಟ್ಟು, "ಸ್ವಾಮಿ ನನಗೆ ನಾಳೆ ಇಂಟರ್‌ವ್ಯೂ ಇದೆ, ನಾನು ತುಂಬಾ ಸಲ ಇಂಟರ್‌ವ್ಯೂಗೆ ಒಳಗಾಗಿದ್ದರೂ ನಾನು ಸೆಲೆಕ್ಟ್ ಆಗಿಲ್ಲ. ನಾನು ತುಂಬಾ ಬಡವ, ದಯವಿಟ್ಟು ಸೆಲೆಕ್ಟ್ ಮಾಡಿ" ಎಂದು ಬೇಡಿಕೊಂಡ. ಅದಕ್ಕೆ "ಸರಿಯಪ್ಪ. ಚೆನ್ನಾಗಿ ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಿ, ಖಂಡಿತಾ ಕೆಲಸ ಸಿಗುತ್ತೆ." ಎಂದು ಹೇಳಿದರು. ಬಹಳ ದೂರದ ಊರಿನಿಂದ ಬಂದಿದ್ದರು. ಬ್ಯಾಗಿನಲ್ಲಿ ಹಣ್ಣು ಹೂ ತಂದಿರುವೆ, ತೆಗೆದುಕೊಳ್ಳಿ ಎಂದು ಹೇಳಿದ. ಅದಕ್ಕೆ ತಂದೆಯವರು ನಮ್ಮನ್ನು ಕರೆದು ಒಳಗೆ ತೆಗೆದುಕೊಂಡು ಹೋಗಿ ಎಂದರು. ನಾವು ಒಳಗೆ ಹೋಗಿ ಹಣ್ಣು ಹೂ ತೆಗೆದು ನೋಡಿದರೆ ಕೆಳಗಡೆ ಸೀರೆಯ ಕವರು ಮತ್ತು ಅದರಲ್ಲಿ ದುಡ್ಡಿನ ಕವರು ಇತ್ತು. ನಾವು ನಮ್ಮ ತಾಯಿಗೆ ಹೇಳಿದೆವು, ರೇಷ್ಮೆ ಸೀರೆ ಎಷ್ಟು ಚೆನ್ನಾಗಿ ಇದೆ ಎಂದು. ಅದಕ್ಕೆ ತಾಯಿ ಗಾಬರಿಯಾಗಿ, ತಂದೆಯವರನ್ನು ಒಳಗೆ ಕರೆದು ತೋರಿಸಿದರು. ಅದಕ್ಕೆ ನಮ್ಮ ತಂದೆಯವರು ಪ್ರತಿಕ್ರಿಯಿಸಿದ ರೀತಿ ನನ್ನ ಜೀವನದಲ್ಲಿ ಎಂದೂ ಕಂಡಿರಲಿಲ್ಲ. ಅವರ ಕೋಪ ವಿಪರೀತವಾಗಿ ಕೆಮ್ಮು ಬಂದಿತು. ತಕ್ಷಣ ಅವನನ್ನು ಕರೆಯಿರಿ ಎಂದು ಕೂಗಾಡಿದರು. ನಮಗೆ ತುಂಬಾ ಭಯವಾಯಿತು. ಅವರಿಗೆ ಎಂದಿಗೂ ಅಷ್ಟು ಕೋಪ ಬಂದಿದ್ದನ್ನು ನಾವು ನೋಡಿರಲಿಲ್ಲ. ಆ ಮನುಷ್ಯ ಆಗ ತಾನೆ ಗೇಟು ಬಿಟ್ಟು ಸ್ವಲ್ಪ ದೂರ ಹೋಗುತ್ತಿದ್ದ. ಕರೆದೆವು. ನಮ್ಮ ತಂದೆ ಅವನನ್ನು ಹಿಡಿದು ನಿನಗೆ ಹೀಗೆ ಮಾಡು ಎಂದು ಯಾರು ಹೇಳಿದರು. ತಕ್ಷಣ ಪೋಲಿಸರಿಗೆ ಫೋನ್ ಮಾಡುತ್ತೇನೆ ಎಂದು ಫೋನ್ ತೆಗೆದುಕೊಂಡರು. ಅಷ್ಟರಲ್ಲಿ ಅವನು ಕಾಲು ಹಿಡಿದುಕೊಂಡು "ನಾನು ಹೇಳಿಕೆ ಮಾತು ಕೇಳಿದೆ.


ತಪ್ಪು ಮಾಡಿದೆ. ದುಡ್ಡು ಮನೆಗೆ ಕೊಟ್ಟರೆ ಕೆಲಸವಾಗುತ್ತೆ ಎಂದು ಹೇಳಿದರು. ತುಂಬಾ ಕಷ್ಟ ಪಟ್ಟು ಹಣ ತಂದಿರುವೆ. ದಯವಿಟ್ಟು ಕ್ಷಮಿಸಿ. ಪೋಲಿಸರಿಗೆ ತಿಳಿಸಬೇಡಿ, ನನ್ನ ಮನೆಯವರು ಬೀದಿಗೆ ಬರುವಂತೆ ಆಗುತ್ತದೆ " ಎಂದು ಕಾಲು ಹಿಡಿದು ಅಳುವುದಕ್ಕೆ ಪ್ರಾರಂಭ ಮಾಡಿದನು. ನಮಗೆ ತಿಳುವಳಿಕೆ ಇಲ್ಲ, ಯಾಕೆ ಅಪ್ಪನವರು ಇಷ್ಟು ಕೋಪ ಮಾಡುತ್ತಾರೆ. ಆಮೇಲೆ ನಮ್ಮ ತಾಯಿ ಹೇಳಿದರು. ಅವರು ಸೀರೆ, ದುಡ್ಡು ಕೊಟ್ಟಿದ್ದಕ್ಕೆ ಕೋಪ ಬಂದಿದೆ. ಈ ಘಟನೆಯಿಂದ ಅವರು ಅಂದು ಇಡೀ ದಿನ ಸುಧಾರಿಸಿಕೊಂಡರು. ಮರುದಿನ ಆ ವ್ಯಕ್ತಿ ಇಂಟರ್‌ವ್ಯೂನಲ್ಲಿ ಚೆನ್ನಾಗಿ ಮಾಡಿ ಪಾಸಾದನಂತೆ. ಆಗ ಅವನು ಮನೆಗೆ ಬಂದು ಕಾಲಿಗೆ ಬಿದ್ದು ನಿಜವಾಗಿಯೂ ತಾವು ನ್ಯಾಯದ ಪರ ಎಂದು ಹೇಳಿ, ಇಷ್ಟು ದಿನ ನನಗೆ ಸಿಗದ ಕೆಲಸ ಈಗ ಸಿಕ್ಕಿದೆ ಎಂದು ತುಂಬಾ ಸಂತೋಷದಿಂದ ಹೇಳಿ ಹೋದ. ಹೀಗೆ ನಿಜಲಿಂಗಪ್ಪನವರು R.C.ಯವರ ಮೇಲೆ ಇಟ್ಟ ನಂಬಿಕೆ ಸುಳ್ಳಾಗಲಿಲ್ಲ.

❖

18. ಕೊರಟಗೆರೆಯಲ್ಲಿ ರಾಜ್ಯ ಮಟ್ಟದ ಪರಿಶಿಷ್ಟ ಜಾತಿ ಸಮ್ಮೇಳನ




Mysore State Scheduled Castes Conference
Celebrates
MAHATHMA GANDHI CENTENARY.
AND
[illegible]
[illegible] 3 p.m.
[illegible]
has kindly consented to inaugurate.
AND
Dr. K. NAGAPPA ALVA
[illegible]
has kindly consented to preside.
Your kind presence is cordially invited
[illegible]



PROGRAMME
[illegible]

R.C.ರವರ ಮಾರ್ಗದರ್ಶನದಲ್ಲಿ ಕೊರಟಗೆರೆಯಲ್ಲಿ ನಡೆದ ರಾಜ್ಯ ಮಟ್ಟದ ಪರಿಶಿಷ್ಟ ಜಾತಿ ಸಮ್ಮೇಳನದ ಆಹ್ವಾನ ಪತ್ರಿಕೆ

ಮಗಳ ನೆನಪಿನಾಳದಲ್ಲಿ R.C. / 70



ಸಮ್ಮೇಳನದಲ್ಲಿ ಉಪಸ್ಥಿತರಿರುವ ಗಣ್ಯರು – ಕುಳಿತಿರುವವರು, ಎಡದಿಂದ ಬಲಕ್ಕೆ – ಶ್ರೀ ನಾಗಪ್ಪ ಆಳ್ವ, ಶ್ರೀ ವೀರೇಂದ್ರ ಪಾಟೀಲ್, ಶ್ರೀ ಬಿ.ರಾಚಯ್ಯ, ಶ್ರೀ ಆರ್.ಚೆನ್ನಿಗರಾಮಯ್ಯ, ಭಾಷಣ ಮಾಡುತ್ತಿರುವವರು ಶ್ರೀ ಸಿ.ಹನುಮಂತಯ್ಯನವರು

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ನೂರನೇ ಹುಟ್ಟುಹಬ್ಬದ ಸಂದರ್ಭದಲ್ಲಿ, ಗಾಂಧಿತತ್ತ್ವಗಳ ಅನುಯಾಯಿಗಳಾದ ನಮ್ಮ ತಂದೆಯವರು ಕೊರಟಗೆರೆಯಲ್ಲಿ ರಾಜ್ಯ ಮಟ್ಟದ ಪರಿಶಿಷ್ಟ ಜಾತಿ ಸಮ್ಮೇಳನವನ್ನು ಮಾಡಿದರು. ಇದು ರಾಜ್ಯದಲ್ಲೇ ಮೊದಲ ಹಾಗೂ ದೊಡ್ಡ ಪ್ರಮಾಣದ ಅಧಿವೇಶನವಾಗಿತ್ತು. ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಶ್ರೀಶ್ರೀಶ್ರೀ ಶಿವಕುಮಾರಸ್ವಾಮಿಯವರು ಈ ಅಧಿವೇಶನಕ್ಕೆ ಆಗಮಿಸಿ ಇಂತಹ ಕಾರ್ಯಗಳಿಗೆ ಪ್ರೋತ್ಸಾಹಿಸಿದ್ದರು. ಈ ಅಧಿವೇಶನಕ್ಕೆ ರಾಜ್ಯದ ಅನೇಕ ಮಂತ್ರಿವರ್ಯರು ಆಗಮಿಸಿ, ಅಂದಿನ ಪರಿಶಿಷ್ಟ ಜನಾಂಗದ ಸ್ಥಿತಿಗತಿಗಳನ್ನು ವಿಸ್ತಾರವಾಗಿ ಚರ್ಚೆ ಮಾಡಿ, ಅವರ ಏಳಿಗೆಗಾಗಿ ಅನೇಕ

ಕಾರ್ಯಕ್ರಮಗಳನ್ನು ರೂಪಿಸಿದರು. ಇಲ್ಲಿ ವಿಶೇಷವಾಗಿ ಗಮನಸಬೇಕಾದ ಸಂಗತಿಯೆಂದರೆ ಪರಿಶಿಷ್ಟ ಜನಾಂಗದ ಎಲ್ಲಾ ಗಣ್ಯ ನಾಯಕರುಗಳಲ್ಲದೆ ಬೇರೆ ಬೇರೆ ಜನಾಂಗದ ನಾಯಕರುಗಳು ಭಾಗವಹಿಸಿ ಉತ್ತಮ ಸಲಹೆಗಳನ್ನು ನೀಡಿದ್ದರು.

ಶ್ರೀ ಶ್ರೀ ಶ್ರೀಶಿವಕುಮಾರಸ್ವಾಮಿಗಳಿಗೆ ಚೆನ್ನಿಗರಾಮಯ್ಯನವರನ್ನು ಕಂಡರೆ ತುಂಬಾ ಪ್ರೀತಿ, ವಿಶ್ವಾಸ ಇತ್ತು. ಅವರು ಯಾವ ಕಾರ್ಯಕ್ರಮಕ್ಕೆ ಆಹ್ವಾನಿಸಿದರೂ ತಪ್ಪದೇ ಬಿಡುವು ಮಾಡಿಕೊಂಡು ಬಂದು ಆಶೀರ್ವದಿಸಿ ಹೋಗುತ್ತಿದ್ದರು. R.C.ರವರ ಮಾತಿಗೆ ಶ್ರೀಗಳು ಸದಾ ಗೌರವ ನೀಡುತ್ತಿದ್ದರು.

❖

19. R.C.ರವರು ತಮ್ಮ 60ನೇ ಹುಟ್ಟುಹಬ್ಬವನ್ನು ಅಚರಿಸಿಕೊಂಡ ರೀತಿ.



R.C. ರವರ 60ನೇ ಹುಟ್ಟುಹಬ್ಬದಂದು ತಮ್ಮ ಕುಟುಂಬದ ಸದಸ್ಯರೊಂದಿಗೆ

R.C. ರವರು Mysore Public Service Commission Chairman ಆಗಿ ನಿವೃತ್ತಿ ಹೊಂದಿದ ಮೇಲೆ ತಮ್ಮ 60ನೇ ವರ್ಷದ ಹುಟ್ಟಿದ ಹಬ್ಬವನ್ನು ತುಂಬಾ ಸರಳ ರೀತಿಯಾಗಿ ಆಚರಿಸಿಕೊಂಡರು. ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬದ ಇತರೆ ಸದಸ್ಯರು, ಅಕ್ಕ

ಪಕ್ಕದ ಮನೆಯವರು ಮತ್ತು ಇವರ ಹತ್ತಿರದ ಸಂಬಂಧಿಕರು ಎಲ್ಲಾ ಸೇರಿ ಮನೆಯಲ್ಲೇ ಹುಟ್ಟುಹಬ್ಬವನ್ನು ಆಚರಿಸಿದೆವು. ಮನೆಯಲ್ಲಿ ದೇವರ ಪೂಜೆ, ಬಂದವರಿಗೆಲ್ಲಾ ಮನೆಯಲ್ಲೇ ಒಬ್ಬಟ್ಟು ಅಡಿಗೆ ಮಾಡಿ, ಎಲ್ಲರೂ ಒಟ್ಟಿಗೆ ಕುಳಿತು ಹೊಟ್ಟೆ ತುಂಬಾ ಊಟ ಮಾಡಿದೆವು. ಇದು R.C.ಯವರು ಸರಳವಾದ ಜೀವನಶೈಲಿಯನ್ನು ಎಷ್ಟು ಇಷ್ಟ ಪಡುತ್ತಿದ್ದರು ಎಂದು ತೋರಿಸುತ್ತದೆ. R.C.ರವರು ಖಾದಿ ವಸ್ತ್ರಧಾರಿ. ಖಾದಿ ಬಟ್ಟೆಗಳನ್ನು ಬಿಟ್ಟು ಬೇರೆ ಯಾವುದನ್ನೂ ಇಷ್ಟ ಪಡುತ್ತಿರಲಿಲ್ಲ.

ಹಾಗೆಯೇ ನಮ್ಮ ಮನೆಯಲ್ಲಿ ಎಲ್ಲಾ ಹಬ್ಬಗಳನ್ನು ಮನೆಯವರೆಲ್ಲಾ ಒಟ್ಟಿಗೇ ಸೇರಿ ಸರಳ ರೀತಿಯಲ್ಲಿ ಆಚರಿಸುತ್ತಿದ್ದೆವು. R.C. ರವರು ಎಂದಿಗೂ ಪುರೋಹಿತರನ್ನು ಕರೆಸಿ, ಹೋಮ ಇತ್ಯಾದಿಗಳನ್ನು ಮಾಡುತ್ತಿರಲಿಲ್ಲ. ಗೃಹಪ್ರವೇಶವಾಗಲಿ, ನಾಮಕರಣವಾಗಲಿ, ಮನೆಯವರೆ ಸೇರಿ ಮಾಡುತ್ತಿದ್ದರು. **" ನಾವೇ ಸ್ವತಃ ದೇವರಿಗೆ ಪೂಜೆ ಮಾಡಿ, ನಿಶ್ಕಲ್ಮಷ ಮನಸ್ಸಿನಿಂದ ಪ್ರಾರ್ಥನೆ ಮಾಡಿ, ದೇವರಲ್ಲಿ ಬೇಡಿಕೊಳ್ಳಬೇಕು. ಅದಕ್ಕೆ ಯಾರ ಸಹಾಯವೂ ಬೇಡ "** ಎಂದು ಹೇಳುತ್ತಿದ್ದರು. ದೇವರಲ್ಲಿ ಅಪಾರ ಭಕ್ತಿ ಇತ್ತು. ಆದರೆ ಆಡಂಬರದ ಆಚರಣೆ ಎಂದಿಗೂ ನಮ್ಮ ತಂದೆಯವರು ಇಷ್ಟ ಪಡುತ್ತಿರಲಿಲ್ಲ.

ಅವರ ಮತ್ತೊಂದು ವಿಶೇಷವಾದ ಗುಣವೆಂದರೆ, ತಮ್ಮ ಇಳಿ ವಯಸ್ಸಿನಲ್ಲಿ ಬೆಂಗಳೂರಿನ ನೆಹರೂ ನಗರದ ರೈಲ್ವೇ ಸಮಾನಾಂತರ ರಸ್ತೆಯಲ್ಲಿರುವ ಮನೆ ಮುಂದೆ ಸಾಯಂಕಾಲ ಸಮಯದಲ್ಲಿ ಕೈಯಲ್ಲಿ Walking Stick ಹಿಡಿದು Walk ಮಾಡುತ್ತಿದ್ದರು. ಆಗ ಅವರ ಮೊಮ್ಮಕ್ಕಳೆಲ್ಲರೂ ತಾತ ನಾನು ಬರುತ್ತೇನೆ ಎಂದು ಹಠ ಮಾಡಿ ಎಲ್ಲಾ ಹಿಂದೆ ಬೀಳುತ್ತಿದ್ದರು. Walk ಮಾಡುತ್ತಿದ್ದಾಗ ರಸ್ತೆಯಲ್ಲಿ ಬಿದ್ದಿರುತ್ತಿದ್ದ

ಕಲ್ಲು ಮತ್ತು ಗಾಜಿನ ಚೂರುಗಳು, ಕಬ್ಬಿಣದ ತುಂಡುಗಳನ್ನು ತಮ್ಮ Walking Stickನಿಂದ ರಸ್ತೆಯ ಬದಿಗೆ ತಳ್ಳುತ್ತಿದ್ದರು. ಇದನ್ನು ಗಮನಿಸಿದ ಮೊಮ್ಮಕ್ಕಳು **" ತಾತ, ಯಾಕೆ ಹೀಗೆ ಮಾಡುತ್ತಿದ್ದೀಯ?** " ಎಂದು ಕೇಳುತ್ತಿದ್ದರು. ಅದಕ್ಕೆ R.C.ರವರು **" ನಮ್ಮ ಹಿಂದೆ ನಡೆದು ಬರುವವರಿಗೆ ಇವುಗಳು ಕಾಲಿಗೆ ಚುಚ್ಚಿ ತೊಂದರೆ ಆಗಬಹುದು, ಆದ್ದರಿಂದ ನಮ್ಮ ಹಿಂದೆ ಬರುವವರಿಗೆ ತೊಂದರೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಿರುತ್ತದೆ "** ಎಂದು ಹೇಳುತ್ತಾ ಜೀವನದ ತತ್ತ್ವವನ್ನು ಸೂಕ್ಷ್ಮವಾಗಿ ಮೊಮ್ಮಕ್ಕಳಿಗೆ ಪರಿಚಯ ಮಾಡಿಕೊಡುತ್ತಿದ್ದರು.

❖

ಓಂ

ವಿಶಾಲ ಮೈಸೂರು ರಾಜ್ಯದ ಲೋಕ ಸೇವಾ ಆಯೋಗದ ಪ್ರಥಮ ಅಧ್ಯಕ್ಷರಾದ

ಶ್ರೀ ರಾಮಹನುಮಯ್ಯ, ಚನ್ನಿಗರಾಮಯ್ಯನವರ

ದಿವ್ಯ ಸನ್ನಿಧಿಯಲ್ಲಿ

ಕೊರಟಗೆರೆಯ 'ಗೆಳೆಯರ ಬಳಗ' ದವರು ಅರ್ಪಿಸಿದ

ಬಿನ್ನವತ್ತಳೆ.

ಮಾನ್ಯರೆ,

[illegible]

[illegible]

[illegible]

[illegible]

[illegible]

ಕೊರಟಗೆರೆ.
10-3-63

ಇತಿ,
ಗೆಳೆಯರ ಬಳಗ.

ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರೆಸ್, ಮಧುಗಿರಿ.

20. R.C.ರವರ ರಾಜಕೀಯ ಜೀವನದ ಸಾಧನೆಗಳು

1. 1932ರಲ್ಲಿ ಕೊರಟಗೆರೆ ಪುರಸಭೆ ಮತ್ತು ತುಮಕೂರು ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು.
2. 1932ರಲ್ಲಿ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಬಾಪೂಜಿ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನು ಮಹಾತ್ಮ ಗಾಂಧೀಜಿಯವರ ಅಮೃತ ಹಸ್ತದಿಂದ ನೆರವೇರಿಸಿದರು.
3. 1936ರಲ್ಲಿ ಮೈಸೂರು ಹರಿಜನ ಸೇವಕ ಸಂಘದ ಪ್ರತಿನಿಧಿಯಾಗಿ ದೆಹಲಿ ಮತ್ತು ಕಲ್ಕತ್ತಕ್ಕೆ ತೆರಳಿ ಬಾಪೂಜಿಯವರನ್ನು ಭೇಟಿ ಮಾಡಿ Joint Electorate with Reservation of Seats to Harijans ತತ್ತ್ವಕ್ಕೆ ಬೆಂಬಲ ಸೂಚಿಸಿದರು.
4. 1937ರಲ್ಲಿ ಸ್ವತಂತ್ರ ಪೂರ್ವದ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ(M.R.A.)ಯ ಸದಸ್ಯರಾಗಿ ಮಹಾರಾಜರೊಂದಿಗೆ ಈ ಸಂಸ್ಥಾನದ ಅಭಿವೃದ್ಧಿಗಾಗಿ ಶ್ರಮಿಸಿದರು.
5. 1938–40ರಲ್ಲಿ ಮೈಸೂರು ಸುಧಾರಣಾ ಸಮಿತಿ, ಡಿ.ಲಿಮಿಟೇಷನ್ ಸಮಿತಿ ಸದಸ್ಯರಾಗಿ ಆರಿಸಲ್ಪಟ್ಟರು.

ಮಗಳ ನೆನಪಿನಾಳದಲ್ಲಿ R.C. / 78

6. 1941ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಾಗಿ ನಾಮಕರಣ ಮಾಡಲ್ಪಟ್ಟರು.
7. ಮೈಸೂರು ರಾಜ್ಯ ಆದಿಜಾಂಬವಾಭಿವೃದ್ಧಿ ಸಂಘವನ್ನು ಸ್ಥಾಪಿಸಿ ಹರಿಜನರ ಅಭಿವೃದ್ಧಿಗಾಗಿ ಶ್ರಮಿಸಿದರು.
8. 1947ರ ಅಕ್ಟೋಬರ್‌ನಲ್ಲಿ ದಿವಾನ್ ಆರ್ಕಾಟ್ ಮೊದಲಿಯಾರ್ ರವರ ನೇತೃತ್ವದಲ್ಲಿ ಮೊದಲನೇ ತಾತ್ಕಾಲಿಕ ಪ್ರಜಾ ಸರ್ಕಾರ ಸ್ಥಾಪನೆಯಾದಾಗ ರಾಜ್ಯದ ಪ್ರಥಮ ಹರಿಜನ ಮಂತ್ರಿಗಳಾಗಿದ್ದರು ಹಾಗೂ ಮೈಸೂರು ರಾಜ್ಯಾಂಗ ವ್ಯವಸ್ಥೆ ಸಮಿತಿಯ ಸದಸ್ಯರಾಗಿ ನೇಮಕಗೊಂಡರು.
9. 1948ರಲ್ಲಿ ಮೈಸೂರು ರಾಜ್ಯದ ಮೊಟ್ಟ ಮೊದಲ ಮುಖ್ಯಮಂತ್ರಿಗಳಾಗಿದ್ದ ಕೆ.ಸಿ.ರೆಡ್ಡಿಯವರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದರು.
10. ಮೈಸೂರು ರಾಜ್ಯದ ಮೊಟ್ಟ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿಯವರ ಸಚಿವ ಸಂಪುಟದಲ್ಲಿ ಏಳು ಮಂದಿ ಮಂತ್ರಿಗಳಲ್ಲಿ ಕ್ಯಾಬಿನೆಟ್ ದರ್ಜೆಯ ಏಕೈಕ ಹರಿಜನ ಮಂತ್ರಿಗಳಾಗಿ ಕೊರಟಗೆರೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಅರಣ್ಯ ಖಾತೆ ಮತ್ತು ಶಿಕ್ಷಣ ಖಾತೆ ಸಚಿವರಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಿದರು.
11. 1956ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಖಾತೆಯ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ಸೇವೆ ಸಲ್ಲಿಸಿದರು.

12. ಕರ್ನಾಟಕ ರಾಜ್ಯ ವಿಧಾನ ಸಭೆಯ ಉಪಾಧ್ಯಕ್ಷ(Deputy Speaker)ರಾಗಿ ಹಾಗೂ ಕೆಲವು ದಿನಗಳ ಕಾಲ ಅಧ್ಯಕ್ಷ (Speaker)ರಾಗಿ ಕಾರ್ಯ ನಿರ್ವಹಿಸಿದರು.
13. ಮೈಸೂರು ರಾಜ್ಯ ಆದಿಜಾಂಬವ ಅಭಿವೃದ್ಧಿ ಸಂಘ, ಬೆಂಗಳೂರು, ಬಾಪೂಜಿ ವಿದ್ಯಾರ್ಥಿ ನಿಲಯ ಸಂಘ, ಬೆಂಗಳೂರು, ಆದಿ ಜಾಂಬವ ಹರಿಜನ ವಿದ್ಯಾಭಿವೃದ್ಧಿ ಟ್ರಸ್ಟ್, ಬೆಂಗಳೂರು, ಮೈಸೂರು ರಾಜ್ಯ ಹರಿಜನ ಸೇವಕ ಸಂಘ ಮತ್ತು ಶ್ರೀ ಬಸವ ಸಮಿತಿ ಈ ಎಲ್ಲಾ ಸಂಘ ಸಂಸ್ಥೆಗಳ ಸ್ಥಾಪಕ ಸದಸ್ಯರಾಗಿದ್ದರು.
14. ಶ್ರೀ ಬಿ.ಡಿ.ಜತ್ತಿಯವರು ಅಧ್ಯಕ್ಷರಾಗಿದ್ದ ಶ್ರೀ ಬಸವ ಸಮಿತಿಗೆ ಉಪಾಧ್ಯಕ್ಷರಾಗಿ ದುಡಿದರು.
15. Mysore Public Service Commissionನ Chairman ಆಗಿ ಸೇವೆ ಸಲ್ಲಿಸಿದರು.
16. ಕೊರಟಗೆರೆ ಟೌನ್‌ಗೆ ಮೊಟ್ಟ ಮೊದಲಿಗೆ ವಿದ್ಯುತ್ ಶಕ್ತಿ ಸರಬರಾಜು ಮಾಡಿಸಿದರು.
17. ಕೊರಟಗೆರೆ ಟೌನ್‌ಗೆ ಸ್ವಚ್ಛವಾದ ಕುಡಿಯುವ ನೀರಿನ ಸೌಲಭ್ಯವನ್ನು ಮುನ್ಸಿಪಾಲಿಟಿ ಮುಖಾಂತರ ಮಾಡಿಸಿದರು.
18. ದಿನಾಂಕ: 19–08–1965 ರಂದು ಕೊರಟಗೆರೆಯಲ್ಲಿ ಸರ್ಕಾರಿ ಹೈಸ್ಕೂಲ್ ಮಂಜೂರು ಮಾಡಿಸಿ ಕಟ್ಟಡದ ಶಂಕುಸ್ಥಾಪನೆಯನ್ನು R.C.ಅವರು ನೆರವೇರಿಸಿದರು. ಆ ಸಂದರ್ಭದಲ್ಲಿ ಕರಣೆ ಕೊಟ್ಟಿದ್ದರು.
19. ನಂತರದ ದಿನಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಿಸಿದರು.

20. ಕೊರಟಗೆರೆ ನಗರದಲ್ಲಿ ಹರಿಜನರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಉಚಿತ ನಿವೇಶನ ಮತ್ತು ಮನೆ ಕಟ್ಟಲು ಅವಶ್ಯವಿರುವ ಹೆಂಚು, ಮರದ ಸಾಮಾನು ಮುಂತಾದವುಗಳನ್ನು ಕೊಡಿಸಿದ್ದರು.

21. ಕೊರಟಗೆರೆಯ ಶ್ರೀ ಗುಂಡಾಂಜನೇಯ ಸ್ವಾಮಿ ದೇವಾಲಯದ ಧರ್ಮದರ್ಶಿ ಮಂಡಲದ ಅಧ್ಯಕ್ಷರಾಗಿದ್ದರು.

22. R.C.ರವರು ಕೊನೆ ದಿನಗಳಲ್ಲಿ ಸತತ ಹೋರಾಟ ನಡೆಸಿ ಜಂಪೇನಹಳ್ಳಿ ಕೆರೆಯನ್ನು ನಿರ್ಮಿಸಲು ಶ್ರಮಿಸಿದರು.

❖

21. R.C. ರವರ ಕೊನೆಯ ದಿನಗಳು.

R.C.ರವರಿಗೆ 65 ವರ್ಷಗಳು ಉರುಳಿದ್ದವು. ಇವರ ಎಂಟು ಮಂದಿ ಮಕ್ಕಳಲ್ಲಿ ಇನ್ನೂ ಮೂರು ಮಕ್ಕಳಿಗೆ ಮದುವೆಯಾಗಿರಲಿಲ್ಲ. ನಾಲ್ಕನೇ ಮಗಳಾದ ಅರುಂಧತಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದರು. ಕೊನೆಯ ಮಗಳು ಶಾಂತಕುಮಾರಿಗೆ R.C.ರವರ ಅಕ್ಕನ ಕೊನೆಯ ಮಗನಾದ ಡಿ. ಪಾಂಡುರಂಗ ಅವರೊಡನೆ ಮದುವೆ ನಿಶ್ಚಿತಾರ್ಥವಾಗಿತ್ತು. ಕೊನೆಯ ಮಗನಾದ ಶಿವರಾಂ ಬಿ.ಎ. ಪದವಿ ವ್ಯಾಸಂಗ ಮಾಡುತ್ತಿದ್ದರು.

ಸ್ವತಂತ್ರ ಪೂರ್ವ ಹಾಗೂ ಸ್ವತಂತ್ರ ನಂತರ ತಮ್ಮ ನಾಡಿಗಾಗಿ ಹಗಲೂ ರಾತ್ರಿ ನಿಸ್ವಾರ್ಥ ಸೇವೆ ಸಲ್ಲಿಸಿದ ಇವರ ಆರೋಗ್ಯದ ಸ್ಥಿತಿ ದಿನೇ ದಿನೇ ಕ್ಷೀಣಿಸುತ್ತಾ ಬಂದಿತು. ಅಸ್ತಮಾದ ಕೆಮ್ಮು ಜಾಸ್ತಿಯಾಗಿ ಇಡೀ ರಾತ್ರಿ ಮಲಗುವುದಕ್ಕೆ ತುಂಬಾ ಕಷ್ಟ ಪಡುತ್ತಿದ್ದರು. ಎಷ್ಟೋ ರಾತ್ರಿ ನಿದ್ರೆಯಿಲ್ಲದೆ ಕುಳಿತುಕೊಂಡೇ ತೂಕಡಿಸುತ್ತಿದ್ದರು. ಅವರಿಗೆ ಕಾಲು ಊತ ಕೂಡ ಬರುತ್ತಿತ್ತು.

ದಿನಾಂಕ 21-01-1976ರ ಸಂಜೆ ಸುಮಾರು ಏಳು ಗಂಟೆ ಇರಬಹುದು. R.C.ರವರಿಗೆ ಆಸ್ತಮಾದ ಕೆಮ್ಮು ಜಾಸ್ತಿಯಾಗಿ ಎದೆ ತುಂಬಾ ಕಫ ತುಂಬಿಕೊಂಡು ಉಸಿರಾಡಲು ಕಷ್ಟವಾಗಿ ಬಹಳ ಸುಸ್ತಾದರು. ನಮಗೆಲ್ಲಾ ತುಂಬಾ ಗಾಬರಿಯಾಯಿತು. ತಕ್ಷಣ ನನ್ನ ತಮ್ಮ ಶಿವರಾಮು ಮತ್ತು ನನ್ನ ಭಾವನವರಾದ ಡಾ. ಶರಣಪ್ಪ ಅವರು ಹತ್ತಿರದಲ್ಲಿರುವ ದೇಸಾಯ್ ನರ್ಸಿಂಗ್ ಹೋಂಗೆ ಧಾವಿಸಿ ಸಕ್ಷನ್ ಪಂಪ್ ಮತ್ತು ಆಕ್ಸಿಜನ್ ಸಿಲಿಂಡರ್ ತರಲು ಹೋದರು. ಅವರು ಬರುವಷ್ಟರಲ್ಲಿ ನಮ್ಮ ತಂದೆಯವರ ಉಸಿರಾಟ ತುಂಬಾ ಕಷ್ಟವಾಯ್ತು.

ಅಷ್ಟರಲ್ಲೇ ಸಕ್ಷನ್ ಪಂಪ್ ತಂದರು. ಮೂಗಿನೊಳಕ್ಕೆ ಟ್ಯೂಬ್ ಹಾಕಿ ಕಫ ತೆಗೆಯಲು ಪ್ರಯತ್ನಿಸಿದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಉಸಿರಾಡಲು ಮತ್ತಷ್ಟು ಕಷ್ಟ ಪಡಲು ಆರಂಭಿಸಿದರು. ಆಗ ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಆಂಬುಲೆನ್ಸ್ ತರಿಸಿದೆವು. ಆದರೆ, R.C.ರವರು "ನಾನು ಉಳಿಯುವುದಿಲ್ಲ, ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಡಿ" ಎಂದು ಹಠ ಮಾಡಿದರು. ಆದರೂ ಅವರನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು ಎಂದು ಬಲವಂತವಾಗಿ ಕುರ್ಚಿಯ ಮೇಲೆ ಕೂರಿಸಿ, ಕುರ್ಚಿಯನ್ನು ಹಾಗೇ ಎತ್ತಿಕೊಂಡು ಮನೆಯ ಮುಂಬಾಗಿಲ ಎರಡೂ ಬಾಗಿಲನ್ನು ತೆರೆಸಿ ಹೋಗುವಾಗ ನಮ್ಮ ತಂದೆಯವರು ತಮ್ಮ ಎರಡೂ ಕೈಗಳಿಂದ ಮನೆಯ ಬಾಗಿಲ ಹೊಸ್ತಿಲ ಮೇಲ್ಭಾಗವನ್ನು ಗಟ್ಟಿಯಾಗಿ ಹಿಡಿದು ಕೊಂಡರು. ಆದರೆ ನಾವುಗಳು ಬಲವಂತವಾಗಿ ಅವರ ಕೈಗಳನ್ನು ಬಿಡಿಸಿ ಮುಂದಕ್ಕೆ ಆಂಬುಲೆನ್ಸ್ ಬಳಿ ಸಾಗಿಸಿ ಆಸ್ಪತ್ರೆಗೆ ಹೊರಟೆವು. ಸ್ವಲ್ಪ ದೂರ ಹೋಗುವಷ್ಟರಲ್ಲೇ R.C.ರವರ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಇದನ್ನು ತಿಳಿಯದ ನಾವು ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಷ್ಟರಲ್ಲಿ R.C.ರವರ ಹೃದಯದ ಬಡಿತ ನಿಂತು ಹೋಗಿ ಕೈ ಕಾಲುಗಳು ತಣ್ಣಗಾಗಿದ್ದವು. ಇದನ್ನು ಪರೀಕ್ಷಿಸಿದ ಬೌರಿಂಗ್ ಆಸ್ಪತ್ರೆಯ ವೈದ್ಯರು R.C.ರವರು ಇಲ್ಲಿಗೆ ಬರುವ ಮುಂಚೆಯೇ ಮೃತ ಪಟ್ಟಿರುವ ರೆಂದು ದೃಢ ಪಡಿಸಿದರು. R.C.ರವರು ನಮ್ಮನ್ನೆಲ್ಲಾ ಅಗಲಿ ಮತ್ತೆ ಬಾರದಿರುವ ಲೋಕಕ್ಕೆ ಪಯಣಿಸಿದರು. ನಮ್ಮ ತಂದೆಯವರು ಇಲ್ಲದ ದಿನವನ್ನು ನಾನು ನನ್ನ ಜೀವನದಲ್ಲಿ ಊಹಿಸಿರಲಿಲ್ಲ. ಇದು ಆ ಕ್ಷಣ ನಮಗೆ ದಿಗ್ಭ್ರಮೆಯಾಯಿತು. ಇಡೀ ಪ್ರಪಂಚವೆ ಶೂನ್ಯವಾಯಿತು.

R.C. ರವರ ಪಾರ್ಥಿವ ಶರೀರವನ್ನು ಮನೆಗೆ ಕರೆತಂದೆವು. ಆ ರಾತ್ರಿಯೆಲ್ಲಾ ಬೆಂಗಳೂರಿನ ಮನೆಯಲ್ಲಿ ಇರಿಸಿದ್ದೆವು. ಮರುದಿನ

ಈ ಸುದ್ದಿ ಇಡೀ ರಾಜ್ಯಕ್ಕೆ ಹಬ್ಬಿತು. ರಾಜ್ಯದ ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಅವರ ಅಭಿಮಾನಿಗಳು ಸಾಗರದಂತೆ ಹರಿದು ಬಂದು, ಇಡೀ ಜನಸ್ತೋಮ R.C.ರವರ ಅಗಲಿಕೆಯಿಂದ ಕಂಬನಿ ಮಿಡಿಯಿತು. ಇವರ ಆಪ್ತ ಸ್ನೇಹಿತರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಕೆ.ಸಿ.ರೆಡ್ಡಿ ಅವರು ಬಂದು ದು:ಖದಿಂದ "ನಾವು ಇಬ್ಬರೂ ರಾಜಕೀಯಕ್ಕೆ ಒಟ್ಟಿಗೆ ಬಂದೆವು, ನೀನು ಮುಂದೆ ಹೋಗುತ್ತಿದ್ದೀಯೆ, ನಾನು ನಿನ್ನ ಹಿಂದೆಯೇ ಬರುತ್ತೇನೆ" ಎಂದು ಬಿಗಿದ ಕಂಠದಿಂದ ನುಡಿದರು. ಅದೇ ರೀತಿ ಅವರೂ ಸಹ ಕೆಲವು ತಿಂಗಳ ನಂತರ ತೀರಿಕೊಂಡರು.

ಮದ್ಯಾಹ್ನ 12 ಗಂಟೆಯ ನಂತರ ಪಾರ್ಥಿವ ಶರೀರವನ್ನು R.C. ರವರ ಹುಟ್ಟೂರಾದ ಕೊರಟಗೆರೆಗೆ ಸಾಗಿಸಿದೆವು. ದಾರಿಯುದ್ದಕ್ಕೂ ಜನಸ್ತೋಮ R.C. ರವರ ಅಂತಿಮ ದರ್ಶನ ಪಡೆಯಲು ಕಾಯುತ್ತಿದ್ದರು. ಕೊರಟಗೆರೆ ತಾಲೂಕಿನಲ್ಲಿ ಸರ್ಕಾರಿ ರಜೆ ಘೋಷಿಸಲಾಗಿತ್ತು. R.C. ರವರ ದೇಹದ ಮೇಲೆ ರಾಷ್ಟ್ರಧ್ವಜವನ್ನು ಹೊದಿಸಿ, ಸಕಲ ಸರ್ಕಾರಿ ಮರ್ಯಾದೆಯಿಂದ R.C.ರವರ ಸ್ವಂತ ಜಮೀನಿನಲ್ಲಿ ಅವರ ಪೂರ್ವಜರ ಸಮಾಧಿಯ ಬಳಿಯೇ ಅಂತ್ಯಕ್ರಿಯೆ ಮಾಡಲಾಯಿತು. ಹೀಗೆ ನಮ್ಮ ತಂದೆಯವರು ಮಣ್ಣಲ್ಲಿ ಮಣ್ಣಾಗಿ ಹೋದರು.

ನಮ್ಮ ತಂದೆಯವರ 11ನೇ ದಿನದ ವೈಕುಂಠ ಸಮಾರಾಧನೆಗೆ 2ದಿನಗಳ ಮುಂಚೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಕೊರಟಗೆರೆಗೆ ಬಂದು ನಮ್ಮ ತಾಯಿಯಾದ ದೊಡ್ಡ ನರಸಮ್ಮನವರನ್ನು ಭೇಟಿ ಮಾಡಿ ಸಂತಾಪ ಸೂಚಿಸಿ ಸಮಾಧಾನದ ಮಾತನಾಡುತ್ತಾ "ನಾನು ನನ್ನ ತಮ್ಮನನ್ನು ಕಳೆದುಕೊಂಡಿದ್ದೇನೆ. ನನಗೆ ಬಹಳ ದು:ಖವಾಗಿದೆ. ನಾನು ಅವರ ವೈಕುಂಠ ಸಮಾರಾಧನೆಗೆ ಬರಲು ಸಾಧ್ಯವಾಗುವುದಿಲ್ಲ. ಬೇರೆ ಕಡೆ ತುಂಬಾ ಮುಖ್ಯವಾದ ಕೆಲಸದ

ಮೇಲೆ ಹೋಗುತ್ತಿದ್ದೇನೆ." ಎಂದು ಹೇಳಿ ಎಷ್ಟು ಬೇಡವೆಂದರೂ R.C ರವರ ಪೂಜೆಯ ಖರ್ಚುಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಹೋದರು.



ರಾಷ್ಟ್ರಪ್ರೇಮಿ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಹಾನ್ ದೇಶಭಕ್ತ
R.C. ರವರ ಪಾರ್ಥಿವ ಶರೀರ



ಹುಟ್ಟೂರಾದ ಕೊರಟಗೆರೆಯ ತಮ್ಮ ನಿವಾಸದಿಂದ R.C. ರವರ
ಅಂತಿಮ ಯಾತ್ರೆ





R.C.ರವರ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡ ಜನಸಾಗರ



ಕೊರಟಗೆರೆಯ ತಮ್ಮ ಜಮೀನಿನಲ್ಲಿ ಅವರ ಪೂರ್ವಿಕರೊಂದಿಗೆ
R.C.ರವರ ಸಮಾಧಿ ಸ್ಥಳ



R.C.ರವರ ಸಮಾಧಿಯ
ಪಕ್ಕದಲ್ಲಿರುವ ಅವರ
ಧರ್ಮಪತ್ನಿ ಶ್ರೀಮತಿ
ದೊಡ್ಡನರಸಮ್ಮನವರ
ಸಮಾಧಿ ಸ್ಥಳ



" ವಿಶಾಲ ಕರ್ನಾಟಕದ
ತುಮಕೂರು ಜಿಲ್ಲೆಯ
ಕೊರಟಗೆರೆಯಲ್ಲಿ
ಸತ್ಯ, ನ್ಯಾಯ, ಧರ್ಮ,
ಸುಸಂಸ್ಕೃತಿಯ ನಿಶಾನೆಯಾಗಿ
ವೈಭವದಿಂದ ಮೆರೆದ,
ಇನ್ನಿಲ್ಲದ ಈ ನನ್ನ ತವರುಮನೆ,
ನನ್ನ ತಂದೆಯ ಅರಮನೆ,
ಈಗಲೂ ನನ್ನ ನೆನಪಿನ
ಆಳದಲ್ಲಿ ಅಚ್ಚ ಹಸಿರಾಗಿ
ಮೆರೆಯುತ್ತಿದೆ "

22. R.C. ರವರ ಜನ್ಮಶತಮಾನೋತ್ಸವದಂದು ಅವರ ಕುಟುಂಬದವರು



1. ಗೋವಿಂದರಾಜು (ರಾಜವರ್ಧನ್) + ಶಾಲಿನಿ

ಅಶೋಕ + ಪಂಕಜಾ
ಪೂಜಿತ್
ತರುಣ್‌ಜಿತ್

ಬಾಲಾಜಿ + ನಳಿನಿ
ಕುಶಾಲ್
ಪೂಜಾ
ಮಯೂರ್

2. ಲೀಲಮ್ಮ + ರಾಮಕೃಷ್ಣಯ್ಯ

ಜಗದೀಶ್ + ಹೇಮಾ
ಪವನ್
ಪವಿತ್ರ

ಚಂದ್ರಿಕಾ + ಶಿವರಾಮ್
ಸುಜಿತ್‌ರಾಮ್ + ಲಕ್ಷ್ಮೀ
ಶೀತಲ್
ವೀರಜಿತ್

ಲಲಿತಾ + ಮಹಾದೇವ್
ನಂದಿನಿ + ಮಹೇಶ್
ಪ್ರಮೋದ್
ಅವಿನಾಶ್

ಲತಾ + ಶಂಕರ್
ವಿಶಾಲ್
ವರುಣ್

ನಾಗೇಂದ್ರ + ದೀಪಾ
ದೀರನ್
ಮೊನಿಕ

3. ಶಾರದಾಶಂಕರ್ + ಡಾ.ಜಯಶಂಕರಪ್ಪ

ಹೇಮಂತ್‌ಕುಮಾರ್ + ದೀಪಾ
ಧ್ರುವಕುಮಾರ್
ಕಿಶನ್
ಕಿಶೋರ್

ಡಾ.ದಯಾನಂದ್ + ಸವಿತಾ
ಜಾಗೃತಿ
ಲಿಖಿತ

ಉಮೇಶ್ + ರೂಪಶ್ರೀ
ಮಣಿಕಂಠ

4. ನರಸಿಂಹಯ್ಯ + ಶಶಿ

ರೂಪ + ಪರಮೇಶ್ | ರಿತೇಶ್ ಉತ್ತಮ್ + ಗೀತಾ
ಮಿಹೀರ್ | ಆರುಶ್
ಮೇಧ

5. ವಿಜಯಲಕ್ಷ್ಮಿ + ಸಂಜೀವರಾಜು

ಪದ್ಮಜ + ರಾಮಚಂದ್ರ ವಾಲೇಕರ್ | ಪಂಕಜ + ಅಶೋಕ
ಶ್ರೀನಿವಾಸ್ | ಪೂಜಿತ್
ಭಾಗ್ಯಶ್ರೀ | ತರುಣ್‌ಜಿತ್
ಶ್ರೇಯಾಂಕ

ಅನಿಲ್ + ಭವ್ಯ
ಲಕ್ಷ್ಯ
ಸುಮುಖ್

6. ಡಾ. ಅರುಂಧತಿ + ಡಾ. ಜೂಜು ಚಲಮ್

ಕೃಷ್ಣ + ಗೋಪಿ | ತೇಜಸ್ವಿನಿ + ದಿಲೀಪ್
ಧ್ಯಾನ್ | ತೇನ್

7. ಶಾಂತಕುಮಾರಿ + ಪಾಂಡುರಂಗ

ಸುಚಿತ್ರ + ಜಯರಾಮ್ | ಬಬಿತಾ
ರಿತೀಶಾ
ಋಷಿ
ಕುಂದನ್

8. ಶಿವರಾಮ್ + ಚಂದ್ರಿಕಾ


ಸುಜಿತ್‌ರಾಮ್ + ಲಕ್ಷ್ಮಿ | ಶೀತಲ್
ವೀರಜಿತ್


❖

23. R.C.ಯವರ ವಿಶೇಷ ಭಾವಚಿತ್ರಗಳ ಸಂಗ್ರಹ





R.C.ರವರು ಉಪಯೋಗಿಸುತ್ತಿದ್ದ ಕೈ ಗಡಿಯಾರ. ಇದನ್ನು ಅವರು 1936ರಲ್ಲಿ ಮಹಾತ್ಮ ಗಾಂಧೀಜಿಯವರನ್ನು ಭೇಟಿ ಮಾಡಲು ಕಲ್ಕತ್ತಾಗೆ ಹೋದಾಗ ಖರೀದಿಸಿದ್ದು





R.C.ರವರು ಉಪಯೋಗಿಸುತ್ತಿದ್ದ ಲೇಖನಿ






R.C.ರವರು ಉಪಯೋಗಿಸುತ್ತಿದ್ದ ಲೇಖನಿ



ಮೈಸೂರಿನ ಮಹಾರಾಜರು 1941ರಲ್ಲಿ ತಮ್ಮ ತಂಗಿ
ವಿಜಯಲಕ್ಷ್ಮಿ ಅಮ್ಮನವರ ಮದುವೆಯಲ್ಲಿ R.C.ರವರಿಗೆ
ಉಡುಗೊರೆಯಾಗಿ ನೀಡಿದ ಬೆಳ್ಳಿ ತಟ್ಟೆ




ದಿನಾಂಕ 10–04–1952 ರಂದು ಬೆಂಗಳೂರಿನ ಗೋಪಾಲಪುರಂನಲ್ಲಿ
ಶ್ರೀರಾಮ ಭಜನಮಂದಿರ R.C.ರವರಿಂದ ಆರಂಭೋತ್ಸವ




ಬೌದ್ಧ ಗುರುಗಳಾದ ದಲೈಲಾಮರವರೊಂದಿಗೆ R.C.ರವರು
ಕಡಿದಾಳ್ ಮಂಜಪ್ಪ ಮತ್ತು ಇತರ ಗಣ್ಯರು



R.C.ರವರು ಮಂತ್ರಿಗಳಾದ ಸಂದರ್ಭದಲ್ಲಿ ಬಲಭಾಗದಲ್ಲಿ
ಅಧಿಕಾರಿಗಳಾದ ಭರಣಯ್ಯ ಹಾಗೂ ಎಡಭಾಗದಲ್ಲಿ ಖ್ಯಾತ
ENT ತಜ್ಞ ವೈದ್ಯರು ಮಾಣಿಕ್ಯಂ





ದಿನಾಂಕ 19–08–1965ರಂದು ಕೊರಟಗೆರೆಯಲ್ಲಿ ಸರ್ಕಾರಿ ಹೈಸ್ಕೂಲ್‌ನ ಶಂಕುಸ್ಥಾಪನೆ ನೆರವೇರಿಸಿದ ಸಂದರ್ಭದಲ್ಲಿ R.C.ರವರಿಗೆ ನೀಡಿರುವ ಬೆಳ್ಳಿಯ ಕರಣೆ



ಕೊರಟಗೆರೆಯಲ್ಲಿ ನಡೆದ *R.C.*ರವರ ಮೂರನೇ ಮಗಳು ವಿಜಯಲಕ್ಷ್ಮಿ ಮತ್ತು ಸಂಜೀವರಾಜು ಇವರ ಮದುವೆಯ ಆರತಕ್ಷತೆಯಲ್ಲಿ ಎಡದಿಂದ ಬಲಕ್ಕೆ ಸಾಹುಕಾರ್ ಚನ್ನಯ್ಯನವರು, ಎಂ.ವಿ. ರಾಮರಾವ್, ಆರ್.ಸಿ.ರವರು, ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಹಾಗೂ ಆರ್.ಸಿ.ರವರ ಧರ್ಮಪತ್ನಿ ದೊಡ್ಡನರಸಮ್ಮ



ವಿಜಯಲಕ್ಷ್ಮೀ ಸಂಜೀವರಾಜುರವರ ಮದುವೆ ಸಂದರ್ಭದಲ್ಲಿ ಬಲದಿಂದ ಎಡಕ್ಕೆ R.C.ರವರು, ಮಾಜಿಮಂತ್ರಿ ಎಂ.ವಿ ರಾಮ್‌ರಾವ್, ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ಮಾಜಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ, ಮಾಜಿಮಂತ್ರಿ ಬಿ.ರಾಚಯ್ಯ ಮಾಜಿ ಮಂತ್ರಿ ಟಿ. ಮರಿಯಪ್ಪ.



ಕೊರಟಗೆರೆಯಲ್ಲಿ ನಡೆದ R.C.ರವರ ಎರಡನೇ ಮಗ ನರಸಿಂಹಯ್ಯ ಮತ್ತು
ಶಶಿ ಇವರ ಮದುವೆಯಂದು ಮಾಜಿ ಮುಖ್ಯಮಂತ್ರಿಗಳು
ಶ್ರೀ ಎಸ್. ನಿಜಲಿಂಗಪ್ಪನವರು ಹಾಗೂ ಶ್ರೀ ದೇವರಾಜ್ ಅರಸ್
ಅವರೊಂದಿಗೆ R.C. ಮತ್ತು ಪತ್ನಿ ದೊಡ್ಡನರಸಮ್ಮ



ಕೊರಟಗೆರೆಯಲ್ಲಿ R.C.ರವರ ತೋಟದ ಪಂಪ್ ಹೌಸ್ ಹತ್ತಿರ ಪ್ರತಿ ವರ್ಷ
ಮುನೇಶ್ವರ ದೇವರ ಪೂಜೆ ಹಾಗೂ ಊಟ ನೆರವೇರಿಸುತ್ತಿದ್ದರು



ನವದೆಹಲಿಯ ಪಾರ್ಲಿಮೆಂಟ್ ಹೌಸ್ ಎದುರು R.C.ರವರು ತಮ್ಮ ಪತ್ನಿ ದೊಡ್ಡನರಸಮ್ಮ, ಸೋದರಳಿಯ ಮುದ್ದುರಾಮಯ್ಯ ಹಾಗೂ ಮುದ್ದುರಾಮಯ್ಯನವರ ಪತ್ನಿ ನರಸಮ್ಮನವರೊಂದಿಗೆ



ಬೆಂಗಳೂರು ನಗರಕ್ಕೆ ನೀರು ಸರಬರಾಜಿನ ತಿಪ್ಪಗೊಂಡನಹಳ್ಳಿ ಬಳಿ
R.C.ರವರು ತಮ್ಮ ಕುಟುಂಬದವರೊಂದಿಗೆ

R.C.ರವರ ಭಾಷಣದಲ್ಲಿ ನಾನು ಗಮನಿಸಿದ ವಿಶೇಷ ಗುಣಗಳು

ನಮ್ಮ ತಂದೆಯವರು ಅವರ ರಾಜಕೀಯ ಜೀವನದಲ್ಲಿ ಲೆಕ್ಕವಿಲ್ಲದಷ್ಟು ಭಾಷಣಗಳನ್ನು ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ತರುವ ವಿಚಾರವಾಗಲಿ, ಮೈಸೂರಿನ ಮಹಾರಾಜರ ಆಸ್ಥಾನದಲ್ಲಿ ಎಂ.ಆರ್.ಎ. ಆಗಿ ತಮ್ಮ ನಾಡಿನ ಅಭಿವೃದ್ಧಿಯ ವಿಚಾರವಾಗಲಿ, ಚುನಾವಣಾ ಪ್ರಚಾರ ಕೈಗೊಂಡಂತಹ ಸಮಯವಾಗಲಿ, ಪ್ರಜಾಪ್ರತಿನಿಧಿ ಸರ್ಕಾರದಲ್ಲಿ ಮಂತ್ರಿಗಳಾಗಿ ಅಸೆಂಬ್ಲಿಯಲ್ಲಾಗಲಿ, ಅವರ ಭಾಷಣಗಳಲ್ಲಿ ಕೆಳಕಂಡ ಗುಣಗಳನ್ನು ಸಷ್ಟವಾಗಿ ನಾನು ಗಮನಿಸಿದ್ದೇನೆ.

1) ಸಮಯ ಪ್ರಜ್ಞೆ ಇವರಲ್ಲಿ ತುಂಬಾ ಜಾಗ್ರತೆಯಿಂದ ಇದ್ದ ಕಾರಣ ಭಾಷಣಕ್ಕೆ ನಿಗಧಿಸಲ್ಪಟ್ಟ ಸಮಯಕ್ಕೆ ಮುಂಚಿತವಾಗಿ ಹಾಜರಿರುತ್ತಿದ್ದರು.

2) ಭಾಷಣಕ್ಕಾಗಿ ಎಂದಿಗೂ ಮುಂಚೆಯೇ ಸಿದ್ಧಮಾಡಿಕೊಳ್ಳುತ್ತಿರಲಿಲ್ಲ. ಆ ಸಮಯದಲ್ಲಿ ಲೀಲಾಜಾಲವಾಗಿ ಸಂಬಂಧಪಟ್ಟ ಯಾವುದೇ ವಿಷಯವನ್ನಾಗಲಿ ಎಲ್ಲರಿಗೂ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ವಿಸ್ತಾರವಾಗಿ ಮನಮುಟ್ಟುವಂತೆ ಮಾತನಾಡುತ್ತಿದ್ದರು. ಬಹುಶಃ ನಾನು


ಅಂದುಕೊಂಡಿರುವುದು ಈ ಒಂದು ಸ್ಥಿತಿಗೆ ನಮ್ಮ ತಂದೆಯವರು ತಲುಪಲು ಕಾರಣ ಅವರು ಎಂದಿಗೂ ನುಡಿದಂತೆ ನಡೆಯುತ್ತಿದ್ದರು ಹಾಗೂ ನಡೆದಂತೆ ನುಡಿಯುತ್ತಿದ್ದರು.

3) ಅವರ ಭಾಷಣಗಳಲ್ಲಿ ಎಂದಿಗೂ ವ್ಯಕ್ತಿಗಳಾಗಿರಬಹುದು, ಜಾತಿಯಾಗಿರಬಹುದು ಹಾಗೂ ವಿರೋಧ ಪಕ್ಷಗಳಾಗಿರಬಹುದು ಯಾರ ಮನಸ್ಸಿಗೂ ನೋವಾಗುವಂತಹ ವಿಷಯಗಳ ಪ್ರಸ್ತಾಪ ಇರುತ್ತಿರಲಿಲ್ಲ. ಬದಲಿಗೆ ದೇಶದ, ಈ ನಾಡಿನ ಹಳ್ಳಿಗಳ ಅಭಿವೃದ್ಧಿ, ಮಕ್ಕಳ ವಿದ್ಯಾಭ್ಯಾಸ, ದೇಶಭಕ್ತಿಯ ವಿಚಾರ, ಅಭಿವೃದ್ಧಿ ಮತ್ತು ಸುಸಂಸ್ಕೃತಿಯ ಬೆಳವಣಿಗೆಗಾಗಿ ಮಾತನಾಡುತ್ತಿದ್ದರು. ಈ ಒಂದು ವಿಶೇಷತೆಯ ಗುಣದಿಂದ ಎಲ್ಲಾ ವರ್ಗದ, ಎಲ್ಲಾ ಜಾತಿಯ, ಎಲ್ಲ ವಯಸ್ಸಿನ ಜನರು ಅವರ ಭಾಷಣ ಕೇಳಲು ನೆರೆದಿರುತ್ತಿದ್ದರು ಹಾಗೂ ಎಷ್ಟು ಜನರಿದ್ದರೂ **'Pindrop Silence'**ನಿಂದ ಕೂಡಿರುತ್ತಿತ್ತು.

ಒಮ್ಮೆ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಕ್ಯಾಮೇನಹಳ್ಳಿ ಜಾತ್ರೆಯಲ್ಲಿ **R.C.**ರವರ ಭಾಷಣ ಏರ್ಪಡಿಸಲಾಗಿತ್ತು. ಪಕ್ಕದ ಹೊನವನಹಳ್ಳಿ ರಾಮಚಂದ್ರಾಚಾರ್, ಊರಿನ ಮುಖಂಡರು ಚುನಾವಣಾ ಭಾಷಣಕ್ಕೆ ಬೇಕಾಗುವ ಎಲ್ಲ ವ್ಯವಸ್ಥೆ ಮಾಡಿಸಿದ್ದರು. ಆ ದಿನ ಆಂಜನೇಯ ಸ್ವಾಮಿಯ ರಥೋತ್ಸವ ಇದ್ದುದರಿಂದ ನಾವು ಕುಟುಂಬ ಸಮೇತರಾಗಿ ಬೆಳಿಗ್ಗೆಯೇ

ಜಾತ್ರೆಗೆ ಹೋಗಿದ್ದೆವು. ಕುಟುಂಬದವರಿಗೆ ಮತ್ತು R.C.ರವರ ಸ್ನೇಹಿತರಿಗೂ ಸೇರಿ ಸುಮಾರು 100 ಜನಕ್ಕೆ ಊಟದ ವ್ಯವಸ್ಥೆ ಮಾಡಿಸಿದ್ದರು. ಸಂಜೆ 4.30ರ ಸಮಯ, ನಮ್ಮ ತಂದೆಯವರ ಭಾಷಣ ಪ್ರಾರಂಭವಾಗಿ 8.30ರವರೆಗೂ ಸುಮಾರು 4 ಗಂಟೆಗಳ ಕಾಲ ಸತತವಾಗಿ ಮಾತನಾಡಿದರು. ಅಲ್ಲಿ ನೆರೆದಿದ್ದ ಜನ ನಿಶ್ಯಬ್ಧವಾಗಿ ಕುಳಿತು ಆಸಕ್ತಿಯಿಂದ ಕೇಳುತ್ತಿದ್ದವರು ನಮ್ಮ ತಂದೆಯವರು ಹೇಳುತ್ತಿದ್ದ ಪ್ರತಿಯೊಂದು ವಿಷಯಕ್ಕೂ ಮುಗಿಲು ಮುಟ್ಟುವಂತಹ ಚಪ್ಪಾಳೆಯ ಸದ್ದು ಮಾಡುತ್ತಿದ್ದರು. ಸುತ್ತಮುತ್ತಲಿನ ಜನರೆಲ್ಲಾ ಆಕರ್ಷಿತರಾಗಿ ಬಂದು ಸೇರುತ್ತಾ ದೊಡ್ಡ ಜನಸಾಗರವೇ ಆಯಿತು. ಆ ಸ್ಥಳಕ್ಕೆ ಗಲಾಟೆ ಮಾಡಲೆಂದೇ ಬಂದಿದ್ದ ವಿರೋಧ ಪಕ್ಷದ ಕಾರ್ಯಕರ್ತರೂ ಸಹ ನಮ್ಮ ತಂದೆಯವರ ಮಾತಿಗೆ ಬೆರಗಾಗಿ ಜನ ಸಮೂಹದಲ್ಲಿ ಜಯಕಾರ ಹಾಕುತ್ತಾ ಚಪ್ಪಾಳೆ ತಟ್ಟಿಕೊಂಡು ಮೈಮರೆತಿದ್ದರು. ಇದು ನನ್ನ ಜೀವನದಲ್ಲಿ ನಾನು ಕಂಡಂತಹ R.C.ರವರ ಭಾಷಣದಲ್ಲಿ ಮಗ್ನರಾದ ಜನಸಾಗರ. ಅವರ ಪ್ರತಿಯೊಂದು ಭಾಷಣದ ಕೊನೆಯಲ್ಲಿ 'ವಂದೇ ಮಾತರಂ' ಎಂದು ಮೂರು ಬಾರಿ ಗಟ್ಟಿಯಾಗಿ ಕೂಗುತ್ತಿದ್ದರು. ಇದಕ್ಕೆ ಅಲ್ಲಿ ನೆರೆದಿದ್ದ ಜನರ ಪ್ರತಿಕ್ರಿಯೆ ಕೂಡ ಮುಗಿಲು ಮುಟ್ಟುವಂತಹ 'ವಂದೇ ಮಾತರಂ'.

ಮಗಳ ನೆನಪಿನಾಳದಲ್ಲಿ R.C. /



“ ನಾನು ಸ್ವತಂತ್ರ
ಹೋರಾಟಕ್ಕಾಗಿ ಬಂದಿರು
ಸ್ವತಂತ್ರ ಸಿಗುವ ತ
ಬರುವುದಿಲ್ಲ. ಜೈಲಿನಲ್ಲಿ
ದೇಶಕ್ಕೋಸ್ಕರ ಪ್ರಾಣ ಬಿಡಲು
ಸಿದ್ಧವಾಗಿ ಇದ್ದೇನೆ. ನೀವು
ಮೊಮ್ಮಕ್ಕಳನ್ನು ನೋಡಿಕೊ
ಹೋರಾಟದಲ್ಲಿ ಪ್ರಾ
ಉಳಿದರೆ ಗೆದ್ದು ಮನೆ
ಬರುತ್ತೇನೆ.

– ರಾಮಹನುಮಯ್ಯ ಚೆನ್ನಿಗರಾಮಯ್ಯ (R.C